ಕರ್ನಾಟಕ ಸರಕಾರ

ಕನ್ನಡ ಭಾರತಿ - ೩

ಮೂರನೆಯ ತರಗತಿ



3

SRI RAMA VIDYALAYA
Nursery, Primary English & ... Medium School
S. No. 10/12, Behind Jakkur Flying School,
JAKKUR, Bangalore-560064.



ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಪಂಜಾಬ ಸಿಂಧು ಗುಜರಾತ ಮರಾಠಾ ।
ದ್ರಾವಿಡ ಉತ್ಕಲ ವಂಗಾ ॥
ವಿಂಧ್ಯ ಹಿಮಾಚಲ ಯಮುನಾ ಗಂಗಾ ।
ಉಚ್ಛಲ ಜಲಧಿ ತರಂಗಾ ॥
ತವ ಶುಭ ನಾಮೇ ಜಾಗೇ ।
ತವ ಶುಭ ಆಶಿಷ ಮಾಗೇ ।
ಗಾಹೇ ತವ ಜಯಗಾಥಾ ॥
ಜನಗಣ ಮಂಗಳದಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಜಯ ಹೇ ಜಯ ಹೇ ಜಯ ಹೇ ।
ಜಯ ಜಯ ಜಯ ಜಯ ಹೇ ॥





ಕರ್ನಾಟಕ ಸರ್ಕಾರ

(ಡಿ. ಎಸ್. ಇ. ಆರ್. ಟಿ.— ಪಠ್ಯಪುಸ್ತಕ ವಿಭಾಗ)

SRI RAMA VIDYALAYA
Nursery, Primary English & Kannada Medium School.
S. No. 103/2, Behind Hebbar Flying School,
JAKKUR, Bangalore-560064.

ಕನ್ನಡ ಭಾರತಿ-೩

ಮೂರನೆಯ ತರಗತಿ

ಈ ಪಠ್ಯಪುಸ್ತಕ ನಿರ್ಮಾಣ ಸಮಿತಿ

1. ಶ್ರೀ ಕೆ. ಶಾಂತಯ್ಯ ... ಅಧ್ಯಕ್ಷರು
2. ಶ್ರೀ ಎಸ್. ಆರ್. ನಾರಾಯಣರಾವ್ ... ಸದಸ್ಯರು
3. ಶ್ರೀ ಹೆಚ್. ಜಿ. ಜೋಶಿ ... ,,
4. ಶ್ರೀ ಎಸ್. ಎನ್. ನಾಯಕ ... ,,

ಈ ಪಠ್ಯಪುಸ್ತಕವನ್ನು ರಚಿಸಲು ನೆರವಾದವರೆಲ್ಲರಿಗೂ ವಂದನೆಗಳು.

ಪಠ್ಯಪುಸ್ತಕ ನಿರ್ದೇಶಕರು

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶನಾಲಯ
(ಪಠ್ಯಪುಸ್ತಕಗಳು)

ಪರಿವಿಡಿ

	ಪಾಠಗಳು	ಪುಟ
1.	ಆಕಳು ಮತ್ತು ಕರು	1
2.	ರವಿ ಮತ್ತು ಅವನ ತಂದೆ	4
3.	ವಿಮಲೆ ಮತ್ತು ಅವಳ ತಾಯಿ	7
4.	ಗೊಂಬೆ (ಕವಿತೆ)	11
5.	ಜಾಣ ಕೋಳಿ	13
6.	ಮಕ್ಕಳಿಗೆ ದೇವಿ ಹಾಕಿಸುವುದು	16
7.	ಗಡ್ಡ ಎಳೆದವನಿಗೆ ಮಿಠಾಯಿ (ಕಥೆ)	20
8.	ಅನ್ನದಾತ (ಕವಿತೆ)	23
9.	ಸೋಮನಗೌಡರ ನಾಯಿ	25
10.	ರೈಲು ಪ್ರಯಾಣ	27
11.	ರವಿಯ ಪತ್ರ	30
12.	ಕರಡಿಯ ಕುಣಿತ (ಕವಿತೆ)	34
13.	ಶಾಲೆಯ ಕೈತೋಟ	36
14.	ಬ್ರಾಹ್ಮಣನೂ ಹುಲಿಯೂ (ಕಥೆ)	39
15.	ಅಜ್ಜ ಹೇಳಿದ ಸಂಗತಿ	43
16.	ಸುಂಟರಗಾಳಿ (ಕವಿತೆ)	47
17.	ವಿಜಯದಶಮಿ	49
18.	ವಿಮಾನ ನಿಲ್ದಾಣ	53
19.	ನದೀದೇವತೆ (ಕಥೆ)	56
20.	ಕನ್ನಡ (ಕವಿತೆ)	60
21.	ಗಣಪತಿಯ ಹಬ್ಬ	61
22.	ಹನುಮಣ್ಣನ ಸಾಹಸ	64
23.	ಮೋಸಹೋದ ಕಳ್ಳರು (ಕಥೆ)	68
24.	ವಸಂತ (ಕವಿತೆ)	72
25.	ಪ್ರಜಾರಾಜ್ಯದಿನ	73
26.	ಸಿಂಹವನ್ನು ಸೋಲಿಸಿದ ನೊಣ (ಕಥೆ)	76
27.	ಡಿ.ಡಿ.ಟಿ. ಸಿಂಪಡಿಸಿದರು	79
28.	ನಮ್ಮ ನಾಡು (ಕವಿತೆ)	83
29.	ಸಮುದ್ರ ದಾಟುವ ಸಾಧನ	84
30.	ರಾಜನು ಮತ್ತು ಕಟ್ಟಿಗೆ ಮಾರುವವನು (ಕಥೆ) ...	88
31.	ಅನಂತನ ದೇಶಪ್ರೇಮ	91
32.	ಗೋವಿನ ಹಾಡು (ಕವಿತೆ)	94
33.	ವಚನಗಳು	100

1. ಆಕಳು ಮತ್ತು ಕರು

ಗೋಪಾಲನ ಮನೆಯಲ್ಲಿ ಆಕಳು ಕರುವನ್ನು ಹಾಕಿತು. ಕರುವನ್ನು ಕಂಡು ಗೋಪಾಲನಿಗೆ ಸಂತೋಷವಾಯಿತು. ಅದನ್ನು ತನ್ನ ಗೆಳೆಯರಿಗೆ ತೋರಿಸಬೇಕೆಂಬ ಆಶೆಯಾಯಿತು. ಗೋಪಾಲನು ಗೆಳೆಯರನ್ನು ಕರೆದು ಕೊಂಡು ಬಂದನು. ಶಂಕರ, ವಿನಾಯಕ ಮತ್ತು ಲಕ್ಷ್ಮಿ ಗೋಪಾಲನ ಮನೆಗೆ ಬಂದರು. ಅವರೆಲ್ಲರೂ ಕರುವನ್ನು ಕೊಟ್ಟಿಗೆಯಲ್ಲಿ ನೋಡಿದರು. ಇವರನ್ನು ನೋಡಿ ಕರುವು ' ಚಂಗನೆ ' ಜಿಗಿಯಿತು.



ಲಕ್ಷ್ಮಿ :—ಅಣ್ಣಾ, ಈ ಆಕಳ ಕರು ಎಷ್ಟು ಮುದ್ದಾಗಿದೆ !

ಶಂಕರ :—ಹೌದು ಲಕ್ಷ್ಮಿ, ಇದರ ಮೈಮೇಲಿರುವ ಸಣ್ಣ ಸಣ್ಣ ಚಿಕ್ಕಿಗಳೂ ಬಹಳ ಸುಂದರವಾಗಿವೆ.

ಗೋಪಾಲನು ಸಣ್ಣ ಗೆಜ್ಜೆಯ ಸರವನ್ನು ತಂದು ಕರುವಿನ ಕೊರಳಿಗೆ ಕಟ್ಟಿದನು. ಕರುವು ಕುಣಿದಾಡಿತು. ಗೆಜ್ಜೆಯ ' ಗಿಲಿಗಿಲಿ ' ಸಪ್ಪಳ ಕೇಳಿಸಿತು. ಮಕ್ಕಳು ಚಪ್ಪಾಳೆ ತಟ್ಟಿ ಕುಣಿದಾಡಿದರು.

ಗೋಪಾಲನ ತಾಯಿ ಹಾಲನ್ನು ಕರೆಯಲು ಕೊಟ್ಟಿಗೆಗೆ ಬಂದಳು.

ತಾಯಿ :—ಮಕ್ಕಳಿರಾ, ನಾನು ಈಗ ಹಾಲನ್ನು ಕರೆಯುತ್ತೇನೆ. ನೀವೆಲ್ಲರೂ ಅಂಗಳದಲ್ಲಿ ಆಟವಾಡಿರಿ.

ತಾಯಿ ಹಾಲನ್ನು ಹಿಂಡಿದಳು. ಆದರಿಂದ ಗಿಣ್ಣನ್ನು ಮಾಡಿದಳು. ಆಮೇಲೆ ಆಡುತ್ತಿದ್ದ ಮಕ್ಕಳನ್ನು ಒಳಗೆ ಕರೆದಳು. ತಿನ್ನಲು 'ಗಿಣ್ಣ'ನ್ನು ಕೊಟ್ಟಳು.

ವಿನಾಯಕ :—ಈ 'ಗಿಣ್ಣು' ಎಷ್ಟು ರುಚಿಯಾಗಿದೆ !

ಲಕ್ಷ್ಮಿ :—ಇದನ್ನು ಹೇಗೆ ಮಾಡುತ್ತಾರೆ ?

ತಾಯಿ :—ಆಕಳು ಕರು ಹಾಕಿದ ಮೇಲೆ ಹಾಲನ್ನು ಹಿಂಡುತ್ತಾರೆ. ಆ ಹಾಲಿನಿಂದ ಗಿಣ್ಣನ್ನು ಮಾಡುತ್ತಾರೆ.

ಶಂಕರ :—ಆಕಳಿಂದ ನಮಗೆ ಮತ್ತೆ ಯಾವ ಉಪಯೋಗವಿದೆ ?

ತಾಯಿ :—ಆಕಳ ಹಾಲು ಆರೋಗ್ಯಕ್ಕೆ ಉತ್ತಮ. ಹಾಲಿನಿಂದ ಮೊಸರು, ಬೆಣ್ಣೆ, ತುಪ್ಪ ಮಾಡುತ್ತಾರೆ. ಇದಲ್ಲದೆ ಆಕಳ ಸಗಣಿ ಗೊಬ್ಬರವಾಗುತ್ತದೆ. ಈ ಗೊಬ್ಬರದಿಂದ ಹೊಲದಲ್ಲಿ ಚೆನ್ನಾಗಿ ಬೆಳೆ ಬರುತ್ತದೆ.

ಲಕ್ಷ್ಮಿ :—ಕರುವಿನಿಂದ ನಮಗೆ ಯಾವ ಪ್ರಯೋಜನವಾಗುತ್ತದೆ ?

ತಾಯಿ :—ಕರು ಗಂಡಾಗಿದ್ದರೆ ಅದು ದೊಡ್ಡದಾಗಿ ಎತ್ತಾಗುತ್ತದೆ ಎತ್ತು ಹೊಲವನ್ನು ಉಳಲು ಬರುತ್ತದೆ. ಕರುವು ಹೆಣ್ಣಾಗಿದ್ದರೆ ಅದು ದೊಡ್ಡದಾಗಿ ಆಕಳಾಗುತ್ತದೆ.

ಲಕ್ಷ್ಮಿ :—ನಾವು ಮತ್ತೊಮ್ಮೆ ಕರುವನ್ನು ನೋಡೋಣ. ಬನ್ನಿರಿ. ಎಲ್ಲರೂ ಕೊಟ್ಟಿಗೆಗೆ ಹೋದರು. ವಿನಾಯಕನು ಕರುವಿನ ತಲೆಯನ್ನು ಮುಟ್ಟಿದನು. ಕರುವು ಚಂಗನೆ ಜಿಗಿಯಿತು. ಗೆಜ್ಜೆಯ ಸಪ್ಪಳವಾಯಿತು.

ಗಿಣ್ಣವ ತಿಂದು ಹಿಂಗಿತು ಹಸಿವು,
ಗೆಜ್ಜೆಯ ಕಟ್ಟಲು ಕುಣಿಯಿತು ಕರುವು !

ಎಂದು ಹಾಡಿದರು. ಗೆಳೆಯರೆಲ್ಲ ತಮ್ಮ ಮನೆಗೆ ಹೋದರು.

ಅಭ್ಯಾಸ

(1) ಪ್ರಶ್ನೆಗಳು :—

1. ಗೋಪಾಲನಿಗೆ ಏಕೆ ಸಂತೋಷವಾಯಿತು ?
2. ಕರುವನ್ನು ನೋಡಲು ಯಾರು ಬಂದರು ?
3. ಗೋಪಾಲನು ಕರುವಿನ ಕೊರಳಿಗೆ ಏನನ್ನು ಕಟ್ಟಿದನು ?
4. ಆಕಳ ಹಾಲಿನಿಂದ ಏನೇನು ಮಾಡುತ್ತಾರೆ ?
5. ಗೋಪಾಲನ ಗೆಳೆಯರು ಏನೆಂದು ಹಾಡಿದರು ?

(2) ಬಿಟ್ಟ ಪದಗಳನ್ನು ತುಂಬಿರಿ :—

1. ಆಕಳ ಕರು ——— ಜಿಗಿಯಿತು.
2. ಗೆಜ್ಜೆಯ — — — ಸಪ್ಪಳ ಕೇಳಿಸಿತು.
3. ಗೋಪಾಲನ ತಾಯಿ ತಿನ್ನಲು ——— ಕೊಟ್ಟಳು.
4. ಕರುವು ಗಂಡಾಗಿದ್ದರೆ, ದೊಡ್ಡದಾಗಿ ———.

(3) 1. ನೀವು ಸಾಕುವ ಇತರ ಪ್ರಾಣಿಗಳು ಯಾವವು ?
2. ಆಕಳ ಚಿತ್ರ ಬರೆಯಿರಿ. ಅದಕ್ಕೆ ಬಣ್ಣ ಹಚ್ಚಿರಿ.

(4) ಶಬ್ದಗಳ ಅರ್ಥ :—

ಗಿಣ್ಣು—ಕರು ಹಾಕಿದ ಕೂಡಲೆ. ಹಿಂಡಿದ ಹಾಲಿನಿಂದ ಮಾಡುವ ತಿಂಡಿ.

ಕರೆ—ಹಿಂಡು. ಜಿಗಿ—ನೆಗೆ.

———

6

2. ರವಿ ಮತ್ತು ಅವನ ತಂದೆ

ರವಿಯು ಶಾಲೆಯಿಂದ ಬಂದನು. ತಾಯಿಯು ಅವನಿಗೆ ತಿಂಡಿಯನ್ನು ಕೊಟ್ಟಳು. ಅವನು ತಿಂಡಿಯನ್ನು ತಿಂದು ತೋಟಕ್ಕೆ ಹೋದನು. ತೋಟದಲ್ಲಿ ಕೆಲಸ ಮಾಡುವುದೆಂದರೆ ಅವನಿಗೆ ಎಲ್ಲಿಲ್ಲದ ಸಂತೋಷ. ತಂದೆಯು ತೋಟದಲ್ಲಿ ಗುಳಿಗಳನ್ನು ತೋಡುತ್ತಿದ್ದನು. ಅವು ಒಂದು ಮೀಟರು ಆಳದ ಗುಳಿಗಳು. ಅವನ್ನು ಕಂಡು ರವಿಗೆ ಆಶ್ಚರ್ಯವಾಯಿತು. ಅವನು "ಅಪ್ಪ, ಇಷ್ಟು ದೊಡ್ಡ ಗುಳಿಗಳನ್ನು ಏಕೆ ತೋಡುತ್ತಿರುವಿ ?" ಎಂದು ಕೇಳಿದನು.



ತಂದೆ :—ರವಿ, ಇವು ಮಾವಿನ ಗಿಡಗಳನ್ನು ನೆಡಲು ತೋಡಿದ ಗುಳಿಗಳು.

ರವಿ :—ಮಾವಿನ ಗಿಡಗಳು ! ಅವು ಎಲ್ಲಿವೆ ?

ತಂದೆ :—ಅವುಗಳನ್ನು ತೋಟಗಾರಿಕೆಯ ಇಲಾಖೆಯಿಂದ ತಂದೆನು. ಆಗೋ. ಆ ಸಸಿಗಳನ್ನು ಅಲ್ಲಿ ನೆರಳಿನಲ್ಲಿ ಇಟ್ಟಿದ್ದೇನೆ. ಅವು ಕಸಿ ಮಾಡಿದ ಸಸಿಗಳು.

ರವಿ :—ಕಸಿ ಮಾಡಿದ ಸಸಿಗಳಿಂದ ಏನು ಪ್ರಯೋಜನ ?

ತಂದೆ :—ಕಸಿ ಮಾಡಿದ ಸಸಿಗಳು ಬೇಗನೆ ಗಿಡವಾಗಿ ಹಣ್ಣು ಕೊಡುತ್ತವೆ. ಈ ಹಣ್ಣು ಸಾಮಾನ್ಯ ಗಿಡದ ಹಣ್ಣಿಗಿಂತಲೂ ರುಚಿಯಾಗಿರುತ್ತದೆ.

ರವಿ :—ಅಪ್ಪ, ನನಗೆ ಗುದ್ದಲಿಯನ್ನು ಕೊಡು. ನಾನೂ ಒಂದು ಗುಳಿಯನ್ನು ತೋಡುವೆನು.

ತಂದೆ :—ರವಿ. ನೀನಿನ್ನೂ ಹುಡುಗ. ಇಷ್ಟು ಆಳದ ಗುಳಿಯನ್ನು ತೋಡಲು ನಿನ್ನಿಂದ ಆಗದು. ನೀನು ಗುಳಿಯಲ್ಲಿ ತುಂಬಿದ ಮಣ್ಣನ್ನು ಎತ್ತಿ ಹಾಕು. ನಾನು ಸಸಿಗಳನ್ನು ತರುವೆನು.

ರವಿಯು ತಂದೆಯು ತೋಡಿದ ಗುಳಿಯಿಂದ ಮಣ್ಣನ್ನು ಎತ್ತಿ ಹಾಕಿದನು. ತಂದೆಯು ಎರಡು ಕಸಿ ಮಾವಿನ ಸಸಿಗಳನ್ನು ತಂದನು. ತಂದೆ ಮತ್ತು ಮಗ ಇಬ್ಬರೂ ಸೇರಿ ಮಾವಿನ ಸಸಿಗಳನ್ನು ನೆಟ್ಟರು. ರವಿಯು ಬಾವಿಯಿಂದ ನೀರು ತಂದು ಸಸಿಗಳಿಗೆ ಹಾಕಿದನು. ಅವನು ಮಣ್ಣನ್ನು ಎತ್ತಿದ ಕೈಗಳಿಂದ ಚಡ್ಡಿಯನ್ನು ಮುಟ್ಟಿದನು. ಅದು ಕೊಳೆಯಾಯಿತು. ರವಿಯು ಕೊಳೆಯಾದ ಚಡ್ಡಿಯನ್ನು ನೋಡಿ ಹೇಳಿದನು " ಅಪ್ಪ, ನನ್ನ ಚಡ್ಡಿ ಕೊಳೆಯಾಯಿತು. ಅವ್ವನು ಕಂಡರೆ ಬೈಯುತ್ತಾಳೆ ".

ತಂದೆ :—ರವಿ. ತೋಟದಲ್ಲಿ ಕೆಲಸ ಮಾಡುವಾಗ ಮೈಕೈಗಳಿಗೆ ಮಣ್ಣು ಅಂಟುತ್ತದೆ. ಬಟ್ಟೆಯೂ ಕೊಳೆಯಾಗುತ್ತದೆ. " ಕೈ ಕೆಸರಾದರೆ ಬಾಯಿ ಮೊಸರು " ಎಂಬ ಗಾದೆಯನ್ನು ನೀನು ಕೇಳಿಲ್ಲವೆ ?

ರವಿ :—ಅಪ್ಪ. ನೀನು ಹೇಳಿದ ಗಾದೆಯ ಅರ್ಥವೇನು ?

ತಂದೆ :— ನೋಡು ರವಿ. ಕಷ್ಟಪಡದೆ ಸುಖ ಸಿಗುವುದಿಲ್ಲ. ಈ ದಿನ ನೀನು ಕಷ್ಟಪಟ್ಟು ಮಾವಿನ ಗಿಡಗಳನ್ನು ನೆಟ್ಟೆ. ನೀನು ಅವುಗಳಿಗೆ ಗೊಬ್ಬರ ಹಾಕಿ. ನೀರೆರೆದು ಕಾಪಾಡುವೆ. ನಾಳೆ ಆ ಗಿಡದಲ್ಲಿ ಹಣ್ಣು ಆದಾಗ. ನೀನೇ ಅವುಗಳನ್ನು ತಿನ್ನುವೆ.

ರವಿ :—ಈಗ ನನಗೆ ಗಾದೆಯ ಅರ್ಥ ತಿಳಿಯಿತು. ನಾಳೆಯಿಂದ ನಾನು ಈ ಎರಡು ಗಿಡಗಳ ಆರೈಕೆಯನ್ನು ನೋಡಿಕೊಳ್ಳುವೆನು.

ತಂದೆ :—ನೀನು ಜಾಣ. ನೀನು ಮಾವಿನ ಗಿಡ ನೆಡುವುದರಲ್ಲಿ ನನಗೆ ಸಹಾಯ ಮಾಡಿದೆ. ಈಗ ನಾವು ಮನೆಗೆ ಹೋಗೋಣ. ನಾನು ಪೇಟೆಯಿಂದ ಮಾವಿನ ಹಣ್ಣುಗಳನ್ನು ತಂದಿದ್ದೇನೆ. ಅವನ್ನು ನಿನಗೆ ತಿನ್ನಲು ಕೊಡುತ್ತೇನೆ.

ತಂದೆಯು ರವಿಯನ್ನು ಮನೆಗೆ ಕರೆದುಕೊಂಡು ಹೋದನು. ಅವನಿಗೆ ಸೊಗಸಾದ ಕಸಿ ಮಾವಿನ ಹಣ್ಣನ್ನು ಕೊಟ್ಟನು.

ಅಭ್ಯಾಸ

(1) ಪ್ರಶ್ನೆಗಳು :—

1. ರವಿಯು ತೋಟಕ್ಕೆ ಹೋದಾಗ ತಂದೆಯು ಏನು ಮಾಡುತ್ತಿದ್ದನು ?
2. ಕಸಿ ಮಾವಿನ ಗಿಡಗಳನ್ನು ನೆಡುವುದರಿಂದ ಏನು ಪ್ರಯೋಜನ ?
3. ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆಯ ಅರ್ಥವೇನು ?
4. ತಂದೆಯು ರವಿಯನ್ನು ಜಾಣ ಹುಡುಗನೆಂದು ಏಕೆ ಕರೆದನು ?

(2) ಕೆಳಗಿನ ಮಾತುಗಳನ್ನು ಯಾರು ಹೇಳಿದರು ? ಯಾರಿಗೆ ಹೇಳಿದರು ?

1. ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆಯನ್ನು ಕೇಳಿಲ್ಲವೆ ?
2. ಈ ಎರಡು ಗಿಡಗಳ ಆರೈಕೆಯನ್ನು ನಾನೇ ನೋಡಿಕೊಳ್ಳುವೆನು.

(3) ಸರಿಯಾದ ಅರ್ಥಕೊಡುವಂತೆ ಕೆಳಗೆ ಬರೆದ ಮಾತುಗಳನ್ನು ಹೊಂದಿಸಿರಿ :—

1. ಕೈ ಕೆಸರಾದರೆ	ಸುಖ ಸಿಗುವುದಿಲ್ಲ.
2. ಕಸಿ ಮಾಡಿದ ಸಸಿಗಳು	ಬಾಯಿ ಮೊಸರು
3. ಕಷ್ಟಪಡದೆ	ಬೇಗನೆ ಹಣ್ಣು ಕೊಡುತ್ತವೆ.

(4) 1. ಮಾವಿನ ಗಿಡದ ಚಿತ್ರ ಬಿಡಿಸಿ. ಅದಕ್ಕೆ ಬಣ್ಣ ಹಚ್ಚಿರಿ.

2. ನಿಮ್ಮ ಮನೆಯ ಕೈತೋಟದಲ್ಲಿ ಒಂದು ಮಾವಿನ ಗಿಡವನ್ನು ನೆಟ್ಟು, ಅದರ ಆರೈಕೆ ಮಾಡಿರಿ.

(5) ಶಬ್ದಗಳ ಅರ್ಥ :—

ಆರೈಕೆ—ಪೋಷಣೆ. ಗುಳಿ—ತಗ್ಗು. ಹಳ್ಳ.

ಪ್ರಯೋಜನ—ಉಪಯೋಗ.

---

3. ವಿಮಲೆ ಮತ್ತು ಅವಳ ತಾಯಿ

ಅಂದು ಭಾನುವಾರ. ಆ ದಿನ ಶಾಲೆಗೆ ರಜೆ. ವಿಮಲೆಯು ಎಂದಿನಂತೆ ಹಾಸಿಗೆಯಿಂದ ಎದ್ದಳು. ಅವಳು ಹಲ್ಲುಜ್ಜಿ ಮೋರೆ ತೊಳೆದು ಅಡುಗೆ ಮನೆಗೆ ಬಂದಳು. ಅಲ್ಲಿ ಒಲೆಯುರಿಯುತ್ತಿತ್ತು. ಆದರೆ ತಾಯಿಯು ಮಾತ್ರ ಕಾಣಿಸಲಿಲ್ಲ. ವಿಮಲೆಯು " ಅವ್ವಾ" ಎಂದು ತಾಯಿಯನ್ನು ಕೂಗಿದಳು. " ವಿಮಲಾ, ಇಲ್ಲಿ ಬಾ " ಎಂದು ಹಟ್ಟಿಯಿಂದ ತಾಯಿ ಮಗಳನ್ನು ಕರೆದಳು.

ವಿಮಲೆಯು ಹಟ್ಟಿಗೆ ಹೋದಳು. ತಾಯಿಯು ಹಸು ಗಂಗೆಯನ್ನು ಕರೆಯುತ್ತಿದ್ದಳು. ಕರು ಚಂದ್ರು ಗೂಟಕ್ಕೆ ಕಟ್ಟಿದ ಹಗ್ಗವನ್ನು ಬಿಚ್ಚಿಕೊಂಡಿತ್ತು. ಅದು ಹಸುವಿನ ಕೆಚ್ಚಲಿಗೆ ಬಾಯಿ ಹಾಕಿ ಹಾಲು ಕರೆಯಲು ಅಡ್ಡಿ ಮಾಡುತ್ತಿತ್ತು. ತಾಯಿಯು " ವಿಮಲಾ, ಚಂದ್ರುವನ್ನು ಎಳೆದುಕೋ " ಎಂದು ಮಗಳಿಗೆ ಹೇಳಿದಳು.

ವಿಮಲೆಯು ಕರುವನ್ನು ಎಳೆದುಕೊಂಡಳು. ತಾಯಿಯು ಹಾಲನ್ನು ಕರೆದಳು. ವಿಮಲೆಯು ಕರುವಿನ ಬೆನ್ನನ್ನು ಸವರುತ್ತ " ಅವ್ವ, ಹಾಲು ಕರೆಯುವಾಗ ಕರುವನ್ನು ಹಿಡಿದುಕೊಳ್ಳುವುದೇಕೆ ?" ಎಂದು ಕೇಳಿದಳು.

ತಾಯಿ :—ವಿಮಲಾ, ಕರುವನ್ನು ಎಳೆದುಕೊಳ್ಳದಿದ್ದರೆ ಕರು ಹಾಲನ್ನೆಲ್ಲ ಕುಡಿದುಬಿಡುತ್ತದೆ. ನಮಗೆ ಹಾಲೇ ಸಿಗುವುದಿಲ್ಲ.



ವಿಮಲೆ :—ಪಾಪ, ಚಂದ್ರುವಿಗೆ ಹಾಲು ಬೇಡವೆ ?

ತಾಯಿ :—ನಾನು ಹಾಲನ್ನೆಲ್ಲ ಹಿಂಡುವುದಿಲ್ಲ. ಚಂದ್ರುವಿಗಾಗಿ ಸ್ವಲ್ಪ ಹಾಲನ್ನು ಬಿಡುತ್ತೇನೆ.

ವಿಮಲೆ :—ಚಂದ್ರು ಕುಡಿಯಬೇಕಾದ ಹಾಲನ್ನು ನಾವು ಕಸಿದು ಕೊಂಡಂತಾಗುವುದಿಲ್ಲವೆ ?

ತಾಯಿ :—ಇಲ್ಲ. ನಾನು ಚಂದ್ರುವಿಗೆ ಬೇಕಾಗುವಷ್ಟು ಹಾಲನ್ನು ಕೆಚ್ಚಲಿನಲ್ಲಿಯೇ ಬಿಡುತ್ತೇನೆ. ಇರುವ ಹಾಲನ್ನೆಲ್ಲ ಹಾಗೆಯೇ ಬಿಟ್ಟರೆ ಅದನ್ನೆಲ್ಲ ಕುಡಿದು ಚಂದ್ರುವಿಗೆ ಅಜೀರ್ಣವಾಗುತ್ತದೆ.

ತಾಯಿಯು ಹಾಲನ್ನು ಹಿಂಡಿ ಮುಗಿಸಿದಳು. ವಿಮಲೆಯು, ಚಂದ್ರುವಿನ ಕೊರಳ ಕಣ್ಣಿಯನ್ನು ಬಿಡಿಸಿದಳು. ಕರು ಹಸುವಿನ ಕೆಚ್ಚಲಿಗೆ ಬಾಯಿ ಹಾಕಿ ಹಾಲನ್ನು ಕುಡಿಯತೊಡಗಿತು.

ವಿಮಲೆಯು ಹಟ್ಟಿಯಲ್ಲಿ ತುಂಬಿದ ಸಗಣಿಯನ್ನು ನೋಡಿದಳು. ಅವಳು " ಅವ್ವ, ಹಟ್ಟಿಯ ಸಗಣಿಯನ್ನು ತೆಗೆಯಬೇಡವೆ ? " ಎಂದು ತಾಯಿಯನ್ನು ಕೇಳಿದಳು.

ತಾಯಿ :—ತೆಗೆಯಬೇಕು. ಈಗ ಹಾಲನ್ನು ಕಾಯಿಸಿ ರೊಟ್ಟಿಯನ್ನು ಮಾಡಬೇಕು. ಹೊಲಕ್ಕೆ ಹೋದ ನಿನ್ನ ತಂದೆಗೆ ಮತ್ತು ನಿನ್ನ ಅಣ್ಣನಿಗೆ ಬುತ್ತಿಯನ್ನು ಕಳುಹಿಸಬೇಕು.

ವಿಮಲೆ :—ಅವ್ವ, ಹಾಗಾದರೆ ನಾನು ಸಗಣಿಯನ್ನು ತೆಗೆಯುತ್ತೇನೆ. ಗಂಗೆಯನ್ನು ಮೇಯಲು ಅಟ್ಟಿ ಬರುತ್ತೇನೆ.

ತಾಯಿ :—ಆಗಲಿ ನನ್ನವ್ವ. ನೀನು ನನ್ನ ಕೆಲಸವನ್ನು ಹಗುರ ಮಾಡಿದಂತಾಗುವುದು. ನೀನು ಬರುವಷ್ಟರಲ್ಲಿ ನಾನು ನನ್ನ ಕೆಲಸವನ್ನು ಮಾಡಿ ಮುಗಿಸುವೆನು.

ತಾಯಿಯು ಹಾಲು ತುಂಬಿದ ತಂಬಿಗೆಯನ್ನು ಎತ್ತಿಕೊಂಡು ಮನೆಯೊಳಗೆ ಹೋದಳು. ವಿಮಲೆಯು ಹಟ್ಟಿಯಲ್ಲಿದ್ದ ಸಗಣಿಯನ್ನು ಎತ್ತಿ ಬುಟ್ಟಿಯೊಳಗೆ ತುಂಬಿದಳು. ಅದನ್ನು ಒಯ್ದು ಗೊಬ್ಬರದ ಗುಂಡಿಗೆ ಹಾಕಿದಳು. ಅವಳು ಕಸಬರಿಗೆಯಿಂದ ಹಟ್ಟಿಯನ್ನು ಗುಡಿಸಿ ಸ್ವಚ್ಛ ಮಾಡಿದಳು.

ಚಂದ್ರು ಹಾಲನ್ನು ಕುಡಿದು ಮುಗಿಸಿತ್ತು. ಅದು ಜಿಗಿಯುತ್ತಾ ಹಟ್ಟಿಯ ತುಂಬ ಓಡಾಡುತ್ತಿತ್ತು. ವಿಮಲೆಯು ಚಂದ್ರುವನ್ನು ಹಿಡಿದು ಗೂಟಕ್ಕೆ ಕಟ್ಟಿದಳು. ಅವಳು ಹಸುವಿನ ಕೊರಳ ಹಗ್ಗವನ್ನು ಬಿಚ್ಚಿದಳು. ಹಸು ಗಂಗೆಯನ್ನು ಅಟ್ಟಿಕೊಂಡು ಹೋಗಿ ಹುಲ್ಲುಗಾವಲಲ್ಲಿ ಬಿಟ್ಟು ಬಂದಳು.

ವಿಮಲೆಯು ಕೈಕಾಲು ತೊಳೆದುಕೊಂಡು ಅಡುಗೆ ಮನೆಗೆ ಬಂದಳು. ತಾಯಿಯು "ವಿಮಲೆ ನೀನು ಬಾ. ನಾನು ಬಿಸಿಬಿಸಿ ರೊಟ್ಟಿ

ಮಾಡಿದ್ದೇನೆ. ನೀನು ರೊಟ್ಟಿಯನ್ನು ತಿಂದು ಹಾಲನ್ನು ಕುಡಿಯುವಿಯಂತೆ" ಎಂದು ಮಗಳನ್ನು ಕರೆದಳು.

ವಿಮಲೆಯು ರೊಟ್ಟಿಯನ್ನು ತಿಂದು ಹಾಲು ಕುಡಿದಳು. ಅವಳು ತಂದೆಗೆ ಮತ್ತು ಅಣ್ಣನಿಗೆ ಬುತ್ತಿಯನ್ನು ತೆಗೆದುಕೊಂಡು ಹೊಲಕ್ಕೆ ಹೋದಳು.

ಅಭ್ಯಾಸ

(1) ಪ್ರಶ್ನೆಗಳು :—

1. ತಾಯಿಯು ವಿಮಲೆಯನ್ನು ಏಕೆ ಕರೆದಳು ?
2. ತಾಯಿಯು ಗಂಗೆಯ ಕೆಚ್ಚಲಿನಲ್ಲಿ ತುಂಬಿದ ಹಾಲನ್ನೆಲ್ಲ ಏಕೆ ಹಿಂಡಲಿಲ್ಲ ?
3. ವಿಮಲೆಯು ತಾಯಿಗೆ ಹೇಗೆ ನೆರವಾದಳು ?

(2) ಸರಿಯಾದ ಅರ್ಥ ಕೊಡುವಂತೆ ಕೆಳಗೆ ಬರೆದ ಮಾತುಗಳನ್ನು ಹೊಂದಿಸಿರಿ :

1. ತಾಯಿ ಹಸು ಗಂಗೆಯನ್ನು	1. ಬಾ
2. ನಾನು ಬಿಸಿಬಿಸಿ ರೊಟ್ಟಿಯನ್ನು	2. ಕರೆಯುತ್ತಿದ್ದಳು
3. ವಿಮಲೆ. ನೀನು	3. ಮಾಡಿದ್ದೇನೆ

(3) 1. ನೀವು ಮನೆಯನ್ನು ಸ್ವಚ್ಛವಾಗಿಡಲು ತಾಯಿಗೆ ನೆರವಾಗಿರಿ.
2. ಕರುವಿನ ಚಿತ್ರವನ್ನು ಬರೆಯಿರಿ.

(4) ಶಬ್ದಗಳ ಅರ್ಥ :—

ಕಣ್ಣಿ — ಕೊರಳಿಗೆ ಕಟ್ಟುವ ಹಗ್ಗ.
ಅಜೀರ್ಣ — ಪಚನವಾಗದಿರುವುದು.

4. ಗೊಂಬೆ

ಮರದಲಿ ಮಾಡಿದ ಚಲುವಿನ ಗೊಂಬೆ
ಕರ ಚಳಕದಿ ಕೊರೆಕೊರೆದಿಹ ಗೊಂಬೆ
ಗರಗರ ತಿರುಗುವ ಮಾಟದ ಗೊಂಬೆ
ಕಿರಿಯರು ಪಿರಿಯರು ಮೆಚ್ಚುವ ಗೊಂಬೆ.

ಚನ್ನಪಟ್ಟಣದ ಬಣ್ಣದ ಗೊಂಬೆ
ಚಿನ್ನದ ಹಾಗೆ ಹೊಳೆಯುವ ಗೊಂಬೆ
ರನ್ನದ ಹಾಗೆ ಮಿನುಗುವ ಗೊಂಬೆ
ಕಣ್ಣನು ಮಿಟುಕಿಸಿ ಆಡುವ ಗೊಂಬೆ.

ಪಿಂ ಪಿಂ ಪಿಂ ಪಿಂ ಅನ್ನುವ ಗೊಂಬೆ
ಕ್ಯಾಂ ಕ್ಯಾಂ ಕ್ಯಾಂ ಕ್ಯಾಂ ಅನ್ನುವ ಗೊಂಬೆ
ಕೊಳ್ಳಿರಿ ಮಕ್ಕಳು ಪಿಂಪೀಂ ಗೊಂಬೆ
ಕೊಳ್ಳಿರಿ ಕ್ಯೂಂ ಕ್ಯೂಂ ಎನ್ನುವ ಗೊಂಬೆ.



ಬನ್ನಿರಿ ಬನ್ನಿರಿ ಮುಂದಕೆ ನುಗ್ಗಿ
ಚನ್ನಿಗ ಬಂದನು ಭರದಿಂ ನುಗ್ಗಿ
ಕಂದನಿಗೆನ್ನುತ ನೋಡಿದ ಬಾಗಿ
ಗೊಂಬೆಯ ಕೊಂಡನು ಹರ್ಷಿತನಾಗಿ.

—ಶಾಂತಿರಾಂ

ಅಭ್ಯಾಸ

(1) ಪ್ರಶ್ನೆಗಳು :—

1. ಕಿರಿಯರು ಗೊಂಬೆಯನ್ನು ಏಕೆ ಮೆಚ್ಚುತ್ತಾರೆ ?
2. ಗೊಂಬೆಯು ಯಾವುದರ ಹಾಗೆ ಹೊಳೆಯುತ್ತದೆ ?
3. ಗೊಂಬೆಯು ಹೇಗೆ ಸದ್ದು ಮಾಡುತ್ತದೆ ?
4. ಚನ್ನಿಗನು ಯಾರಿಗೋಸ್ಕರ ಗೊಂಬೆಯನ್ನು ಕೊಂಡನು ?

(2) 1. ನಿಮ್ಮ ಮೆಚ್ಚಿನ ಗೊಂಬೆಗಳನ್ನು ಸಂಗ್ರಹಿಸಿರಿ.
2. ನಿಮಗೆ ಇಷ್ಟವಾದ ಗೊಂಬೆಯೊಂದನ್ನು ಮಾಡಿರಿ.

(3) ಶಬ್ದಗಳ ಅರ್ಥ :—

ಕರ—ಕೈ. ಚಳಕ—ಕುಶಲತೆ. ಮಾಟ—ಸುಂದರವಾದ.
ರನ್ನೆ—ರತ್ನ (ಬೆಲೆಯುಳ್ಳ ಹರಳು).

5. ಜಾಣ ಕೋಳಿ

ಹಿಲ್ಲೂರಿನ ವೆಂಕಣ್ಣನು ಒಂದು ಕೋಳಿಯನ್ನು ಸಾಕಿದ್ದನು. ದಿನಾಲು ಅದು, ತಾನು ಕೂಗುವುದು ಎಲ್ಲರಿಗೂ ಕೇಳಿಸಲಿ ಎಂದು ಮಾವಿನ ಮರದ ಮೇಲೆ ಕುಳಿತು, ನಸುಕಿನಲ್ಲಿ ಕೂಗುತ್ತಿತ್ತು. ಕೋಳಿ ತಿಂದುಂಡು ಚೆನ್ನಾಗಿ ಕೊಬ್ಬಿತ್ತು. ಆ ಕಾಡಿನ ಒಂದು ನರಿಗೆ ಈ ಕೋಳಿಯ ಮೇಲಿ ಕಣ್ಣು ಬಿತ್ತು. ಹೇಗಾದರೂ ಮಾಡಿ ಅದನ್ನು ಹಿಡಿದು ತಿನ್ನಲು ಹೊಂಚುಹಾಕಿತು. ನರಿಯು ಒಂದು ದಿನ ನಸುಕಿನಲ್ಲಿ ವೆಂಕಣ್ಣನ ಹಿತ್ತಲಿಗೆ ಬಂತು. ಮರದ ಮೇಲೆ ಕುಳಿತ ಕೋಳಿಯನ್ನು ನೋಡಿತು. ನರಿಗೆ ಕೋಳಿಯ ಮೇಲೆ ಆಶೆಯಾಯಿತು. ಅದಕ್ಕೆ ಒಂದು ಉಪಾಯವು ಹೊಳೆಯಿತು.



ನರಿಯಣ್ಣ :—ಓ ಕೋಳಿರಾಜಾ. ನಿನ್ನ ಬಣ್ಣ ಎಷ್ಟು ಚೆಂದ ! ನಿನ್ನ ಧ್ವನಿ ಎಷ್ಟು ಚೆಂದ ! ಸುಮ್ಮನೆ ಮರದ ಮೇಲೆ ಕುಳಿತು ಏನು ಮಾಡುತ್ತಿರುವೆ ? ಕೂಡಲೆ ಕೆಳಗೆ ಇಳಿದು ಬಾ. ಮುಂಜಾವು ಎಷ್ಟು ಸುಂದರವಾಗಿದೆ ! ನಾವಿಬ್ಬರೂ ಸಂತೋಷದಿಂದ ಆಡೋಣ.

ಕೋಳಿ :—ನರಿಯಣ್ಣ, ನಿನ್ನ ಮೋಸ ನನಗೆ ಗೊತ್ತಿಲ್ಲವೆ ? ನಾನು ಕೆಳಗೆ ಇಳಿದು ಬಂದರೆ ನೀನು ನನ್ನನ್ನು ತಿಂದುಬಿಡುವೆ.

ನರಿಯಣ್ಣ :—ಇಲ್ಲ, ಇಲ್ಲ, ನಾನು ನಿನ್ನನ್ನು ತಿನ್ನುವುದಿಲ್ಲ. ನಾನು ನಿನ್ನ ಗೆಳೆಯನಲ್ಲವೆ ? ಈಗ ನಾನು ವನರಾಜನಾದ ಸಿಂಹನ ಸಂದೇಶ ವನ್ನು ತಂದಿದ್ದೇನೆ.

ಕೋಳಿ :—ವನರಾಜನ ಸಂದೇಶವೇನು ?

ನರಿಯಣ್ಣ :—" ಎಲ್ಲ ಪ್ರಾಣಿ ಪಕ್ಷಿಗಳು ಪ್ರೀತಿಯಿಂದ ಇರಬೇಕು. ಇನ್ನು ಮುಂದೆ ಯಾವ ಪ್ರಾಣಿಯೂ ಯಾವ ಪಕ್ಷಿಯನ್ನೂ ಕೊಂದು ತಿನ್ನಬಾರದು " ಎಂದು ಸಿಂಹರಾಜನು ಅಪ್ಪಣೆ ಮಾಡಿರುವನು. ಅದನ್ನು ಎಲ್ಲರಿಗೂ ತಿಳಿಸಲು ನನ್ನನ್ನು ಕಳುಹಿಸಿದ್ದಾನೆ. ನೀನು ಭಯಪಡುವ ಕಾರಣವಿಲ್ಲ. ನಾವಿಬ್ಬರೂ ಆಡೋಣ ಬಾ.

ಕೋಳಿ :—ಆಹಾ ! ಎಷ್ಟು ಸಂತೋಷದ ಸಮಾಚಾರ !

ನರಿಯಣ್ಣ :—ಹಾಗಾದರೆ ತಡವೇಕೆ ? ಬೇಗ ಇಳಿದು ಬಾ.

ಕೋಳಿ :—ನಿಲ್ಲು, ನಿಲ್ಲು, ಬರುತ್ತೇನೆ. ನನ್ನ ಗೆಳೆಯರು ಬರುವವ ರಿದ್ದಾರೆ. ಅವರಿಗೂ ಈ ಶುಭ ಸಮಾಚಾರವನ್ನು ತಿಳಿಸೋಣ. ಅವರೂ ಸಂತೋಷಪಡಲಿ.

ನರಿಯಣ್ಣ :—ನಿನ್ನ ಗೆಳೆಯರು ಯಾರು ?

ಕೋಳಿ :—ಬೇರೆ ಯಾರೂ ಅಲ್ಲ, ಕೆಲವು ಬೇಟೆ ನಾಯಿಗಳು. ಅದೋ ಅಲ್ಲಿ ಬರುತ್ತಿದ್ದಾರೆ.

' ನಾಯಿ ' ಎಂಬ ಶಬ್ದ ಕೇಳಿದ ಕೂಡಲೆ ನರಿಯು ಕಾಲಿಗೆ ಬುದ್ಧಿ ಹೇಳಿತು.

ಕೋಳಿ :—ಓಹೋ ! ಏಕೆ ನರಿಯಣ್ಣಾ. ಓಡುತ್ತಿರುವೆ ? ನಾನು ಕೆಳಗಿಳಿದು ಬರುತ್ತೇನೆ, ಬಾ.

ನರಿಯು ಕೋಳಿಗೆ ಉತ್ತರ ಹೇಳಲು ನಿಲ್ಲದೆ ಓಡಿಹೋಯಿತು. ಕೋಳಿಯ ಜಾಣತನದ ಮುಂದೆ ನರಿಯಣ್ಣನ ಮೋಸ ನಡೆಯಲಿಲ್ಲ.

ಅಭ್ಯಾಸ

(1) ಪ್ರಶ್ನೆಗಳು :—

1. ಕೋಳಿಯು ಮೇಲೆ ಯಾರ ಕಣ್ಣು ಬಿತ್ತು ?
2. ನರಿಯು ಕೋಳಿಯನ್ನು ಏನೆಂದು ಹೊಗಳಿತು ?
3. ವನರಾಜನ ಸಂದೇಶ ಯಾವುದು ?
4. ಕೋಳಿಯ ಗೆಳೆಯರು ಯಾರು ?
5. ನರಿಯು ಏಕೆ ಕಾಲಿಗೆ ಬುದ್ಧಿ ಹೇಳಿತು ?

(2) ಈ ಮಾತನ್ನು ಯಾರು ಹೇಳಿದರು ? ಯಾರಿಗೆ ಹೇಳಿದರು ?

1. ನಿನ್ನ ವೇಷ ನನಗೆ ಗೊತ್ತಿಲ್ಲವೆ ?
2. ನಾವಿಬ್ಬರೂ ಸಂತೋಷದಿಂದ ಆಡೋಣ.
3. ಅಹಾ ! ಎಷ್ಟು ಸಂತೋಷದ ಸಮಾಚಾರ !

(3) ಹೊಂದಿಸಿ ಬರೆಯಿರಿ :—

ಕೊಬ್ಬಿದ	ಸಂದೇಶ
ಸುಂದರವಾದ	ವೇಷ
ಶುಭ	ಕೋಳಿ
ವನರಾಜನ	ಬುದ್ಧಿ ಹೇಳು
ನರಿಯ	ಸಮಾಚಾರ
ಕಾಲಿಗೆ	ಮುಂಜಾವು

(4) 1. ನಿಮಗೆ ಗೊತ್ತಿರುವ ಕೋಳಿಯ ಇನ್ನೊಂದು ಕಥೆ ಹೇಳಿರಿ.
2. ಕೋಳಿ ಮತ್ತು ನರಿಯ ಚಿತ್ರ ಬರೆಯಿರಿ ಮತ್ತು ಬಣ್ಣ ತುಂಬಿರಿ.

(5) ಶಬ್ದಗಳ ಅರ್ಥ :—

ಹೊಂಚುಹಾಕು—ಸಮಯ ಸಾಧಿಸು. ಸಂದೇಶ—ಸುದ್ದಿ.
ಕಾಲಿಗೆ ಬುದ್ಧಿ ಹೇಳು—ಓಡಿಹೋಗು.

---

6. ಮಕ್ಕಳಿಗೆ ದೇವಿ ಹಾಕಿಸುವುದು

ಸಂಗಪ್ಪನು ಹಳ್ಳಿಯ ಬಡರೈತನು. ನೀಲಮ್ಮ ಅವನ ಹೆಂಡತಿ. ಇವರು ಹೊಲಮನೆಗಳಲ್ಲಿ ಕೆಲಸ ಮಾಡಿಕೊಂಡು ಉಪಜೀವಿಸುತ್ತಿದ್ದರು. ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಲು ಆಗುತ್ತಿರಲಿಲ್ಲ. ಆರು ವರ್ಷದ ಮಗ ಲಿಂಗಣ್ಣನನ್ನು ಇನ್ನೂ ಶಾಲೆಗೆ ಸೇರಿಸಿರಲಿಲ್ಲ.

ಒಂದು ದಿನ ಶಾಲೆಯ ಗುರುಗಳು ಸಂಗಪ್ಪನ ಮನೆಗೆ ಹೋದರು. ಸಂಗಪ್ಪ ಗುರುಗಳನ್ನು ಅತೀ ಪ್ರೀತಿಯಿಂದ ಕರೆದು ಕುಳ್ಳಿರಿಸಿದನು. ಲಿಂಗಣ್ಣನ ಶಾಲಾ ಪ್ರವೇಶ ಪತ್ರವನ್ನು ಗುರುಗಳೇ ತುಂಬತೊಡಗಿದರು. ಗುರುಗಳು " ಸಂಗಪ್ಪ, ಲಿಂಗಣ್ಣನಿಗೆ ದೇವಿ ಹಾಕಿಸಿರುವೆಯಾ ? " ಎಂದು ಪ್ರಶ್ನಿಸಿದರು.

ಸಂಗಪ್ಪ : " ಇಲ್ಲ ಗುರುಗಳೇ ದೇವಿ ಹಾಕಿಸಿರುವುದಿಲ್ಲ " ಎಂದು ವಿನಯದಿಂದ ಹೇಳಿದನು.

ಗುರುಗಳು : ನೋಡು ಸಂಗಪ್ಪ, ದೇವಿ ಹಾಕಿಸದಿದ್ದರೆ ಸಿಡುಬು ರೋಗ ಬರುವ ಭಯ ಇದೆ. ರೋಗ ಬಂದವರು ಉಳಿಯುವುದು ಕಷ್ಟಸಾಧ್ಯ. ಉಳಿದವರು ಕೂಡ ಮೈ-ಮುಖಗಳ ಮೇಲೆಲ್ಲಾ ಕಲೆಗಳಾಗಿ ಕುರೂಪಿಗಳಾಗುತ್ತಾರೆ, ಇಲ್ಲವೆ ಕುರುಡರಾಗಬಹುದು. ಇಲ್ಲಿ ನೋಡು, ನನ್ನೊಡನೆ ಬಂದಿರುವ ತಳವಾರ ಭೀಮನಿಗೆ ಸಿಡುಬು ರೋಗದಿಂದಲೇ ಮುಖದ ಮೇಲೆ ಕಲೆಗಳಾಗಿವೆ.

ಸಂಗಪ್ಪ: ಗುರುಗಳೇ, ಸಿಡುಬುರೋಗ ಹೇಗೆ ಬರುತ್ತದೆ ?

ಗುರುಗಳು : ಈ ರೋಗವು ವೇರಿಯೋಲಾ ವೈರಸ್ ಎಂಬ ಸೂಕ್ಷ್ಮಾಣುವಿನಿಂದ ಬರುತ್ತದೆ. ಇದು ರೋಗಿಯಿಂದ ದೇವಿ ಹಾಕಿಸದ ನಿರೋಗಿಗೆ ಗಾಳಿಯ ಇಲ್ಲವೇ ಹತ್ತಿರದ ಸಾನಿಧ್ಯ-ಸ್ಪರ್ಶಗಳ ಮೂಲಕ ತಗಲುತ್ತದೆ. ರೋಗಿಯ ಸಂಪರ್ಕದ ಸುಮಾರು 14 ದಿನಗಳ ನಂತರ ದೇವಿ ಹಾಕಿಸದ ನಿರೋಗಿಯಲ್ಲಿ ಜ್ವರ, ತಲೆನೋವು, ಬೆನ್ನು ನೋವು ಕಾಣಿಸಿಕೊಳ್ಳುತ್ತದೆ. ಮೂರು ನಾಲ್ಕು ದಿನಗಳ ನಂತರ ಮುಖ ಕೈಕಾಲು ಹಾಗೂ ದೇಹದ ಇತರ ಭಾಗಗಳ ಮೇಲೆ ಕೆಂಪು ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ಈ ಗುಳ್ಳೆಗಳು ಉಬ್ಬಿ ಕೀವು ತುಂಬಿಕೊಂಡು,

ನಂತರ ಹಕ್ಕಳೆ ಗಟ್ಟಿ ಒಣಗಿ 21 ದಿನಗಳಲ್ಲಿ ಉದುರಿಹೋಗುತ್ತವೆ. ಈ ರೋಗ ಬಂದರೆ ಬಹಳ ಅಪಾಯವಾಗುವ ಸಂಭವ ಇರುತ್ತದೆ. ಈ ಮೊದಲೇ ಹೇಳಿದಂತೆ ಮೈಮೇಲೆಲ್ಲ ಕಲೆಗಳಾಗಬಹುದು, ಕಣ್ಣುಗಳು ಕುರುಡಾಗಬಹುದು. ಪ್ರತಿ ಮೂರು ರೋಗಿಗಳಲ್ಲಿ ಒಬ್ಬರಿಗೆ ಪ್ರಾಣಾಪಾಯದ ಭಯವಿದೆ. ಇದು ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ಸಾಂಕ್ರಾಮಿಕ ರೋಗ. ಜ್ವರವು ಕಾಣಿಸಿ ಕೊಂಡಾಗಿನಿಂದ ಹಕ್ಕಳು ಉದುರುವವರೆಗೆ ಇತರರಿಗೆ ಹರಡುವ ಸಂಭವವಿದೆ.

ಸಂಗಪ್ಪ : ಈ ರೋಗವು ಹರಡದಂತೆ ನೋಡಿಕೊಳ್ಳಲು ಯಾವ ಉಪಾಯ ಮಾಡಬೇಕು ?

ಗುರುಗಳು : ದೇವಿ ಹಾಕಿಸಿಕೊಳ್ಳುವುದೊಂದೇ ಈ ರೋಗವನ್ನು ತಡೆಗಟ್ಟುವ ಮಾರ್ಗ. ಚಿಕ್ಕಮಕ್ಕಳು ಮೂರು ತಿಂಗಳು ತುಂಬಿದ ನಂತರ ಆರೋಗ್ಯ ಇಲಾಖೆಯವರಿಂದ ದೇವಿ ಹಾಕಿಸಿಕೊಳ್ಳಬೇಕು. ಎಲ್ಲಿಯಾದರೂ ರೋಗ ಕಂಡು ಬಂದರೆ ಸಮೀಪದ ಡಾಕ್ಟರಿಗೆ ತೋರಿಸಿ ಅವರ ಅಭಿಪ್ರಾಯದಂತೆ ರೋಗಿಯನ್ನು ಪ್ರತ್ಯೇಕವಾದ ಕೋಣೆಯಲ್ಲಿರಿಸಿ ಉಪಚರಿಸಬೇಕು. ಅವನ ಬಟ್ಟೆ ಬರೆಗಳನ್ನು ಬೀಸಿನೀರಿನಲ್ಲಿ ಕುದಿಸಿ ಸಾಬೂನಿನಿಂದ ಒಗೆದು ಬಿಸಿಲಿನಲ್ಲಿ ಒಣಗಿಸಬೇಕು. ಇಲ್ಲವೇ ಸುಡಬೇಕು. ರೋಗಿಯನ್ನು ಉಪಚರಿಸುವವರು ಮೊದಲೇ ದೇವಿಯನ್ನು ಹಾಕಿಸಿ ಕೊಂಡವರಾಗಬೇಕು. ಅವರಿಗೆ ರೋಗ ತಡೆಗಟ್ಟುವ ಶಕ್ತಿಯಿರುವುದರಿಂದ ರೋಗ ತಗಲುವ ಭಯವಿಲ್ಲ. ದೇವಿಹಾಕಿಸಿಕೊಳ್ಳದವರು ಉಪಚರಿಸಿದರೆ ಅವರಿಗೆ ರೋಗ ತಗಲುವ ಭಯವಿದೆ. ರೋಗಿಯ ಗಾಯಗಳಿಂದ ಉದುರಿದ ಹಕ್ಕಳೆಗಳನ್ನು ಸಂಗ್ರಹಿಸಿ ಸುಡಬೇಕು.

ಸಂಗಪ್ಪ: ಇಷ್ಟು ದಿನಗಳಾದರೂ ಈ ರೋಗವನ್ನು ನಿರ್ಮೂಲನ ಮಾಡಿಲ್ಲವೇ ಗುರುಗಳೇ ?

ಗುರುಗಳು : ಸಾರ್ವಜನಿಕ ಆರೋಗ್ಯ ಇಲಾಖೆಯವರು ಈ ರೋಗ ನಿರ್ಮೂಲನಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಈ ಮೂಲಕವಾಗಿ ಕೈಗೊಂಡ ಕ್ರಮಗಳಿಂದ 23.4.1977 ರಿಂದ ಭಾರತ

ದೇಶವು ಸಿಡುಬು ರೋಗದಿಂದ ವಿಮೋಚನೆ ಪಡೆದಿದೆ ಎಂದು ಜಾಗತಿಕ ಆರೋಗ್ಯ ಸಂಸ್ಥೆಯ ತಜ್ಞರು ಘೋಷಿಸಿದ್ದಾರೆ. ಅವರು ಆದೇಶಿಸಿದ ಕ್ರಮಗಳಿಗನುಸಾರವಾಗಿ ಮಗು ಜನಿಸಿದ ಮೂರು ತಿಂಗಳ ನಂತರ ಪ್ರಥಮ ದೇವಿ ಹಾಕಿಸಬೇಕು. ಇದರಿಂದ ರೋಗ ತಡೆಗಟ್ಟುವ ಶಕ್ತಿ ಬರುತ್ತದೆ. ಹೀಗೆ ಎಲ್ಲರೂ ಮಾಡಿದರೆ ಈ ರೋಗ ಇನ್ನೊಮ್ಮೆ ಭಾರತ ದೇಶದಲ್ಲಿ ಕಾಣಿಸಿಕೊಳ್ಳುವುದೇ ಇಲ್ಲ. ಆದುದರಿಂದ ಲಿಂಗಣ್ಣನಿಗೆ ಈ ಕೂಡಲೇ ದೇವಿ ಹಾಕಿಸಬೇಕು.



ಸಂಗಪ್ಪ : ಹಾಗಾದರೆ ನಮ್ಮ ಲಿಂಗಣ್ಣನಿಗೆ ದೇವಿ ಹಾಕಿಸಿಬಿಡಿ, ಗುರುಗಳೆ.

ಗುರುಗಳು : ಶಾಲೆಯಲ್ಲಿ ಇನ್ನೂ ಕೆಲವು ಮಕ್ಕಳಿಗೆ ದೇವಿ ಹಾಕಿಸಿರುವುದಿಲ್ಲ. ಅವರೊಡನೆ ಲಿಂಗಣ್ಣನಿಗೂ ದೇವಿ ಹಾಕಿಸುವುದಕ್ಕೆ ನಾನೇ ಆರೋಗ್ಯ ಇಲಾಖೆಯ ಅಧಿಕಾರಿಗಳನ್ನು ಭೇಟಿಯಾಗಿ ವ್ಯವಸ್ಥೆ ಮಾಡುವೆ.

ಸಂಗಪ್ಪನಿಗೆ ಬಹಳ ಸಂತೋಷವಾಯಿತು. ಲಿಂಗಣ್ಣನನ್ನು ಗುರುಗಳೊಡನೆ ಶಾಲೆಗೆ ಕಳುಹಿಸಿ ಕೊಟ್ಟನು.

ಅಭ್ಯಾಸ

(1) ಪ್ರಶ್ನೆಗಳು

1. ಗುರುಗಳು ಸಂಗಪ್ಪನನ್ನು ಏನೆಂದು ಪ್ರಶ್ನಿಸಿದರು ?
2. ದೇವಿ ಹಾಕಿಸದಿದ್ದರೆ ಏನಾಗುತ್ತದೆ ?
3. ಸಿಡುಬುರೋಗ ಹೇಗೆ ಬರುತ್ತದೆ ?
4. ಈ ರೋಗ ಮತ್ತೊಬ್ಬರಿಗೆ ಹರಡದಂತೆ ಯಾವ ಉಪಾಯ ಮಾಡಬೇಕು ?
5. ಭಾರತ ದೇಶವು ಸಿಡುಬುರೋಗದಿಂದ ವಿಮೋಚನೆ ಪಡೆದಿದೆ ಎಂದು ಘೋಷಿಸಿದವರು ಯಾರು ?

(2) ಹೊಂದಿಸಿ ಬರೆಯಿರಿ

1. ವೇರಿಯೋಲಾ ವೈರಸ್ ಸೂಕ್ಷ್ಮಾಣುವಿನಿಂದ	1. ದೇವಿ ಹಾಕಿಸಿ ಕೊಳ್ಳಬೇಕು.
2. ಸಿಡುಬುರೋಗ ಬರದಂತೆ	2. ಸಿಡುಬುರೋಗ ಬರುತ್ತದೆ.
3. ಸಿಡುಬುರೋಗ ಒಬ್ಬರಿಂದ ಒಬ್ಬರಿಗೆ	3. ಸಿಡುಬುರೋಗ ನಿರ್ಮೂಲನ ಕಾರ್ಯಕ್ರಮ ಹಾಕಿಕೊಂಡಿದೆ.
4. ಸಾರ್ವಜನಿಕ ಆರೋಗ್ಯ ಇಲಾಖೆ	4. ಬಹುಬೇಗ ಹರಡುತ್ತದೆ.

(3) ಈ ಮಾತುಗಳನ್ನು ಸರಿಯಾಗಿ ಜೋಡಿಸಿ ಬರೆಯಿರಿ

1. ಸಂಗಪ್ಪನು ಬಡರೈತನು ಹಳ್ಳಿಯ.
2. ಗುರುಗಳು ಹೋದರು ಮನೆಗೆ ಸಂಗಪ್ಪನ.
3. ಗುರುಗಳೊಡನೆ ಕಳುಹಿಸಿಕೊಟ್ಟನು ಶಾಲೆಗೆ ಲಿಂಗಣ್ಣನನ್ನು

(4) ಶಬ್ದಗಳ ಅರ್ಥ

ಸಂಗ್ರಹಿಸು—ಕೂಡಿಸು, ಹಕ್ಕಳೆ—ಗಟ್ಟಿಯಾದ ಮೇಲ್ಭಾಗ

---

7. ಗಡ್ಡ ಎಳೆದವನಿಗೆ ಮಿಠಾಯಿ

ನೀವು ಅಕ್ಬರ ಚಕ್ರವರ್ತಿಯ ಹೆಸರನ್ನು ಕೇಳಿದ್ದೀರಾ ? ಅವನು ನಮ್ಮ ದೇಶವನ್ನು ಚೆನ್ನಾಗಿ ಆಳಿದ ಅರಸರಲ್ಲಿ ಒಬ್ಬನು.

ಅಕ್ಬರನ ಆಸ್ಥಾನದಲ್ಲಿ ಅನೇಕ ಮಂದಿ ಪಂಡಿತರೂ, ಬುದ್ಧಿವಂತರೂ ಇದ್ದರು. ಅವರಲ್ಲಿ ಚತುರನಾದ ಬೀರಬಲ್ಲನೂ ಒಬ್ಬನು. ಒಂದು ದಿನ ಚಕ್ರವರ್ತಿಯ ಓಲಗ ನಡೆಯಿತು. ಪಂಡಿತರು, ಮಂತ್ರಿಗಳು, ಸೇನಾಪತಿಗಳು ಮತ್ತು ಇತರ ಸಭಿಕರು ಓಲಗಕ್ಕೆ ಬಂದರು. ಚಕ್ರವರ್ತಿಯು ಮಾತ್ರ ಇನ್ನೂ ಓಲಗಕ್ಕೆ ಬಂದಿರಲಿಲ್ಲ. ಸಭಿಕರು ಚಕ್ರವರ್ತಿ ಬರುವುದನ್ನೇ ಇದಿರು ನೋಡುತ್ತಿದ್ದರು. ಕೊನೆಗೆ ಅಕ್ಬರ ಚಕ್ರವರ್ತಿಯು ಸಭೆಗೆ ಬಂದನು. ಅವನು ಸಿಂಹಾಸನದ ಮೇಲೆ ಕುಳಿತನು. ಅವನು ಸಭಿಕರನ್ನೆಲ್ಲ ಒಮ್ಮೆ ನೋಡಿದನು. ಅವನು ಗಡ್ಡವನ್ನು ಸವರಿಕೊಳ್ಳುತ್ತಾ "ಚಕ್ರವರ್ತಿಯ ಗಡ್ಡವನ್ನು ಎಳೆದವರಿಗೆ ಯಾವ ಶಿಕ್ಷೆಯನ್ನು ಕೊಡಬೇಕು ?" ಎಂದು ಕೇಳಿದನು.



ಒಬ್ಬ ಮಂತ್ರಿಯು " ಅವನಿಗೆ ಮರಣ ಶಿಕ್ಷೆ ಕೊಡಬೇಕು " ಎಂದು ಹೇಳಿದನು. ಇನ್ನೊಬ್ಬ ಮಂತ್ರಿಯು " ಆ ದುರುಳನನ್ನು ಸೆರೆಮನೆಗೆ ಕಳುಹಿಸಬೇಕು " ಎಂದು ಅಭಿಪ್ರಾಯಪಟ್ಟನು. ಮೂರನೆಯವನು " ಆ ಕೇಡಿಗನನ್ನು ದೇಶದಿಂದ ಓಡಿಸಬೇಕು " ಎಂದು ಸೂಚಿಸಿದನು.

ಹೀಗೆ ಸಭಿಕರಲ್ಲಿ ಒಬ್ಬೊಬ್ಬರು ಒಂದೊಂದು ಶಿಕ್ಷೆ ಕೊಡಬೇಕೆಂದು ಹೇಳಿದರು. ಆದರೆ ಬೀರಬಲ್ಲನು ತನ್ನ ಅಭಿಪ್ರಾಯವನ್ನು ಸೂಚಿಸಲಿಲ್ಲ. ಅಕ್ಬರನು ಬೀರಬಲ್ಲನನ್ನು ನೋಡಿ, " ಬೀರಬಲ್ಲ, ಗಡ್ಡವನ್ನು ಎಳೆದವನಿಗೆ ಯಾವ ಶಿಕ್ಷೆ ಕೊಡಬೇಕೆಂದು ನಿನ್ನ ಅಭಿಪ್ರಾಯ ? " ಎಂದು ಕೇಳಿದನು.

ಬೀರಬಲ್ಲನು ಚಕ್ರವರ್ತಿಯನ್ನು ನೋಡಿದನು. ಚಕ್ರವರ್ತಿಯ ದನಿ ಮಿದುವಾಗಿತ್ತು. ಮುಖದಲ್ಲಿ ಕೋಪವಿರಲಿಲ್ಲ. ಅವನ ಕಣ್ಣುಗಳಲ್ಲಿ ತುಂಟ ನಗು ಮಿನುಗುತ್ತಿತ್ತು.

ಬೀರಬಲ್ಲನು ಎದ್ದು ನಿಂತು " ಪ್ರಭುಗಳ ಗಡ್ಡವನ್ನು ಎಳೆದವನ ಬಾಯಿಗೆ ಮಿಠಾಯಿಯನ್ನು ಹಾಕಬೇಕು. ಇದೇ ಆ ತುಂಟನಿಗೆ ಸರಿಯಾದ ಶಿಕ್ಷೆ " ಎಂದು ಹೇಳಿದನು.

ಬೀರಬಲ್ಲನ ಉತ್ತರವನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು. ಚಕ್ರವರ್ತಿಯು " ಗಡ್ಡವನ್ನು ಎಳೆದವನಿಗೆ ಶಿಕ್ಷೆ ಕೊಡುವುದನ್ನು ಬಿಟ್ಟು ಮಿಠಾಯಿ ಕೊಡಬೇಕೆಂದು ಹೇಳುವೆಯಲ್ಲ ! " ಎಂದು ಕೇಳಿದನು.

ಬೀರಬಲ್ಲನು " ಮಹಾಪ್ರಭುಗಳೇ, ನಿಮ್ಮ ಗಡ್ಡವನ್ನು ಎಳೆಯಲು ನಿಮ್ಮ ಕುಮಾರನಿಗೆ ಅಲ್ಲದೆ ಬೇರೆ ಯಾರಿಗೆ ಸಾಧ್ಯ ? " ಎಂದನು.

ಚಕ್ರವರ್ತಿಯು " ಭೇಷ್, ಭೇಷ್ ! ಬೀರಬಲ್ಲ, ನೀನೊಬ್ಬನೇ ಈ ಓಲಗದಲ್ಲಿ ನನ್ನ ಪ್ರಶ್ನೆಗೆ ಸರಿಯಾದ ಉತ್ತರವನ್ನು ಹೇಳಿದೆ. ನಾನು ಇಲ್ಲಿಗೆ ಬರುವ ಮೊದಲು ಸಲೀಮ ಕುಮಾರನನ್ನು ಎತ್ತಿಕೊಂಡು ಆಟವಾಡಿಸುತ್ತಿದ್ದೆ. ಆಗ ಅವನು ನನ್ನ ಗಡ್ಡವನ್ನು ಹಿಡಿದು ಎಳೆದನು. ಸಭಿಕರ ಬುದ್ಧಿವಂತಿಕೆಯನ್ನು ಪರೀಕ್ಷಿಸಬೇಕೆಂದು ಈ ಪ್ರಶ್ನೆಯನ್ನು ಕೇಳಿದೆನು. ನೀನೊಬ್ಬನೇ ಸರಿಯಾದ ಉತ್ತರವನ್ನು ಹೇಳಿದೆ " ಎಂದು ಬೀರಬಲ್ಲನನ್ನು ಹೊಗಳಿದನು.

ಬೀರಬಲ್ಲನ ಉತ್ತರದಿಂದ ಅಕ್ಬರನಿಗೆ ತುಂಬ ಆನಂದವಾಯಿತು. ಸಭಿಕರು ಬೀರಬಲ್ಲನ ಬುದ್ಧಿವಂತಿಕೆಯನ್ನು ಹೊಗಳಿದರು. ಚಕ್ರವರ್ತಿಯು ಬೀರಬಲ್ಲನಿಗೆ ಬಹುಮಾನವನ್ನು ಕೊಟ್ಟು ಗೌರವಿಸಿದನು.

ಅಭ್ಯಾಸ

(1) ಪ್ರಶ್ನೆಗಳು :—

1. ಅಕ್ಬರನು ಯಾರು ?
2. ಚಕ್ರವರ್ತಿಯು ಸಭಿಕರಿಗೆ ಯಾವ ಪ್ರಶ್ನೆಯನ್ನು ಹಾಕಿದನು ?
3. ಮಂತ್ರಿಗಳು ಪ್ರಶ್ನೆಗೆ ಯಾವ ಯಾವ ಉತ್ತರ ಕೊಟ್ಟರು ?
4. ಬೀರಬಲ್ಲನು ಕೊಟ್ಟ ಉತ್ತರವೇನು ?

(2) ಕೆಳಗಿನ ಮಾತುಗಳನ್ನು ಯಾರು ಹೇಳಿದರು ? ಯಾರಿಗೆ ಹೇಳಿದರು ?

1. ಚಕ್ರವರ್ತಿಯ ಗಡ್ಡವನ್ನು ಎಳೆದವನಿಗೆ ಯಾವ ಶಿಕ್ಷೆ ಕೊಡಬೇಕು?
2. ಗಡ್ಡವನ್ನು ಎಳೆದವನ ಬಾಯಿಗೆ ಮಿಠಾಯಿ ಹಾಕಬೇಕು.
3. ನೀನೊಬ್ಬನೇ ಈ ಸಭೆಯಲ್ಲಿ ಬುದ್ಧಿವಂತ.

(3) ಕೆಳಗಿನ ವಾಕ್ಯಗಳಲ್ಲಿ ಸರಿ ಅಥವಾ ತಪ್ಪು ಎಂಬುದನ್ನು ಗುರುತಿಸಿರಿ :—

	ಸರಿ	ತಪ್ಪು
1. ಚಕ್ರವರ್ತಿಯು ಸಭಿಕರು ಬರುವುದನ್ನೇ ಇದಿರು ನೋಡುತ್ತಿದ್ದನು.	—	—
2. ಅವನ ಕಣ್ಣುಗಳಲ್ಲಿ ತುಂಟ ನಗು ಮಿನುಗುತ್ತಿತ್ತು.	—	—
3. ಬೀರಬಲ್ಲನ ಉತ್ತರದಿಂದ ಅಕ್ಬರನಿಗೆ ಆನಂದವಾಯಿತು.	—	—
4. ಸಭಿಕರು ಬೀರಬಲ್ಲನ ಜಾಣತನವನ್ನು ಹೊಗಳಲಿಲ್ಲ.	—	—

(4)
1. ಅಕ್ಬರ ಬೀರಬಲ್ಲರಿಗೆ ಸಂಬಂಧಿಸಿದ ಇತರ ಕಥೆಗಳನ್ನು ಓದಿರಿ.
2. ಈ ಪಾಠದಲ್ಲಿ ಬರುವ ಕಥೆಯನ್ನು ನಾಟಕ ರೂಪದಲ್ಲಿ ಅಭಿನಯಿಸಿರಿ.

(5) ಶಬ್ದಗಳ ಅರ್ಥ :—

ಓಲಗ—ರಾಜನ ಸಭೆ, ಆಸ್ಥಾನ. ದುರುಳ—ಕೆಟ್ಟವನು, ದುಷ್ಟ.

———

8. ಅನ್ನದಾತ



ಇವನೆ ನೋಡು ಅನ್ನದಾತ
ಹೊಲದಿ ದುಡಿದೆ ದುಡಿವನು
ನಾಡ ಜನರು ಬದುಕಲೆಂದು
ದವಸ ಧಾನ್ಯ ಬೆಳೆವನು

ಮಳೆಯ ಗುಡುಗು, ಚಳಿಯ ನಡುಗು
ಬಿಸಿಲ ಬೇಗೆ ಸಹಿಸುತ
ಬೆವರು ಸುರಿಸಿ ಕಷ್ಟ ಸಹಿಸಿ
ಒಂದೇ ಸವನೆ ದುಡಿಯುತ

ಗಟ್ಟಿ ದೇಹ ದೊಡ್ಡ ಮನಸು
ದೇವನಿಂದ ಪಡೆದನು
ಯೋಗಿಯಾಗಿ ತ್ಯಾಗಿಯಾಗಿ
ಅನ್ನ ನೀಡುತಿರುವನು

ಎತ್ತು ಎರಡು ಅವನ ಜೋಡು
ಕೂಡಿ ದುಡಿವ ಗೆಳೆಯರು
ಹಿಗ್ಗು ಕುಗ್ಗು ಏನೇಯಿರಲಿ
ಹೊಂದಿಕೊಂಡು ನಡೆವರು !

—ಸತ್ಯಾರ್ಥಿ

ಅಭ್ಯಾಸ

(1) ಪ್ರಶ್ನೆಗಳು :–

1. ಅನ್ನದಾತನೆಂದರೆ ಯಾರು ?
2. ರೈತನು ಮಾಡುವ ಕೆಲಸಗಳಾವುವು ?
3. ರೈತನು ಹೇಗೆ ದುಡಿಯುತ್ತಾನೆ ?
4. ರೈತನ ಗೆಳೆಯರು ಯಾರು ?

(2) ವಿರುದ್ಧಾರ್ಥ ಕೊಡುವ ಶಬ್ದಗಳನ್ನು ಬರೆಯಿರಿ :

ಹಿಗ್ಗು. ಸುಖ, ಹಗಲು, ಸತ್ಯ.

(3) 1. ಒಕ್ಕಲುತನಕ್ಕಾಗಿ ಬೇಕಾಗುವ ಸಾಮಾನುಗಳ ಪಟ್ಟಿ ಮಾಡಿರಿ.

2. ಹಳ್ಳಿಯಲ್ಲಿ ದುಡಿಯುತ್ತಿರುವ ಇತರ ಕಸಬುದಾರರ ಹೆಸರುಗಳನ್ನು ಬರೆಯಿರಿ.

(4) ಶಬ್ದಗಳ ಅರ್ಥ :–

ಅನ್ನದಾತ—ಅನ್ನವನ್ನು ಕೊಡುವವನು (ರೈತ).
ಬೇಗೆ—ಉರಿ. ತಾಪ.
ಯೋಗಿ—ತಪಸ್ವಿ (ಸಾಧನೆಯನ್ನು ಮಾಡುವವನು).
ತ್ಯಾಗಿ—ಬಿಟ್ಟವನು (ಸ್ವಂತ ಹಿತವನ್ನು ಬಿಟ್ಟವನು).

9. ಸೋಮನಗೌಡರ ನಾಯಿ

ಸೋಮನಗೌಡರು ಊರಿಗೆಲ್ಲ ದೊಡ್ಡ ಶ್ರೀಮಂತರು. ಅವರು ಒಂದು ನಾಯಿಯನ್ನು ಸಾಕಿದ್ದರು. ಅದರ ಹೆಸರು ಮೋತಿ. ಮೋತಿ ಬಲು ನಂಬಿಗೆಯ ಪ್ರಾಣಿ. ಜಾಣತನಕ್ಕೆ ಅದು ಊರಿಗೆಲ್ಲ ಹೆಸರಾಗಿತ್ತು. ಗೌಡರ ಮನೆ ಊರ ಹೊರಗೆ ಇತ್ತು. ಮೋತಿ ರಾತ್ರಿಯೆಲ್ಲ ಎಚ್ಚರವಾಗಿದ್ದು ಮನೆ ಕಾಯುತ್ತಿತ್ತು.

ಒಂದು ದಿನ ಆಪ್ತರ ಮದುವೆಗೆ ಗೌಡರ ಮನೆಯವರೆಲ್ಲ ನೆರೆಯೂರಿಗೆ ಹೋದರು. ಮೋತಿಯನ್ನು ಮನೆ ಕಾಯಲು ಬಿಟ್ಟು ಹೋದರು. ಗೌಡರ ಮನೆಯಲ್ಲಿ ಬಹಳ ಬಂಗಾರವಿತ್ತು. ಕಳ್ಳರು ಸಮಯ ಸಾಧಿಸುತ್ತಿದ್ದರು. ಮನೆಯಲ್ಲಿ ಯಾರೂ ಇಲ್ಲದ ಈ ಸಮಯ ನೋಡಿ ಗೌಡರ ಮನೆಗೆ ಹಿಂಬದಿಯಿಂದ ಕನ್ನ ಹಾಕಿದರು. ಕಳ್ಳರ ಗುಂಪಿನಲ್ಲಿ ಮೂರು ನಾಲ್ಕು ಜನರಿದ್ದರು. ಮೋತಿ ಅವರನ್ನು ನೋಡಿತು. ಆದರೆ ಬೊಗಳಲಿಲ್ಲ. ಎಲ್ಲವನ್ನು ನೋಡುತ್ತ ಮರೆಯಲ್ಲಿ ನಿಂತಿತು.

ಗೌಡರ ಬಂಗಾರ ಮತ್ತು ಹಣ ತುಂಬಿದ ಪೆಟ್ಟಿಗೆ ಭಾರವಾಗಿತ್ತು. ಕಳ್ಳರಿಗೆ ಅವಸರದಲ್ಲಿ ದೂರ ಒಯ್ಯಲು ಸಾಧ್ಯವಾಗಲಿಲ್ಲ. ಅವರಿಗೆ ಏನು ಮಾಡಬೇಕೆಂದು ತಿಳಿಯದಾಯಿತು. ಅಷ್ಟರಲ್ಲಿ ಬೆಳಗಾಗುತ್ತ ಬಂತು. ಬಹಳ ಯೋಚನೆ ಮಾಡಿದರು. ಕೊನೆಗೆ ಊರ ಹೊರಗಿನ ಗುಡ್ಡದ ಸಮೀಪ ಅದನ್ನು ಒಯ್ದರು. ಅಲ್ಲಿ ಅದನ್ನು ಹೂಳಿಟ್ಟರು. ಮೋತಿ ಗೊತ್ತಾಗದಂತೆ ಅವರನ್ನು ಹಿಂಬಾಲಿಸಿತು. ಹೂಳಿಟ್ಟ ಸ್ಥಳವನ್ನು ನೋಡಿತು. ಮರುದಿನ ಪೆಟ್ಟಿಗೆಯನ್ನು ಒಡೆದು ಕಳ್ಳರು ಅದನ್ನು ಹಂಚಿಕೊಳ್ಳುವವರಿದ್ದರು.

ಮದುವೆ ಮುಗಿಸಿ ಗೌಡರು ಮನೆಗೆ ಬಂದರು. ಮೋತಿ ಎಂದಿನಂತೆ ಒಡೆಯನನ್ನು ಸ್ವಾಗತಿಸಲಿಲ್ಲ. ಮೋತಿಯ ಜೋಲುಮೋರೆ ನೋಡಿ ಗೌಡರಿಗೆ ಗಾಬರಿಯಾಯಿತು. ಬಾಗಿಲು ತೆಗೆದು ಒಳಗೆ ಬಂದರು. ಹಿಂಬದಿಯ ಗೋಡೆ ಒಡೆದಿತ್ತು. ಪೆಟ್ಟಿಗೆ ಮಾಯವಾಗಿತ್ತು.

ಮೋತಿ ದೀನ ಸ್ವರದಿಂದ ಕೂಗಿತು. ಗೌಡರು ಹೊರಗೆ ಬಂದರು. ಮೋತಿ ಗೌಡರ ಧೋತರವನ್ನು ಹಿಡಿದೆಳೆಯಿತು. ಗೌಡರು ಮೋತಿಯ ಹಿಂದೆ ಹೋದರು. ಮೋತಿ ಪೆಟ್ಟಿಗೆ ಹುಗಿದ ಸ್ಥಳವನ್ನು ಕಾಲಿನಿಂದ ಕೆದರಿತು. ಗೌಡರಿಗೆ ಅನುಮಾನ ಬಂದಿತು. ತಮ್ಮ ಆಳುಗಳನ್ನು ಕರೆಯಿಸಿದರು. ಆ ಸ್ಥಳದಲ್ಲಿ ಅಗೆಯಿಸಿದರು. ಅಲ್ಲಿ ಅವರಿಗೆ ತಮ್ಮ ಪೆಟ್ಟಿಗೆಯು ಕಾಣಿಸಿತು. ಆಳುಗಳು ಪೆಟ್ಟಿಗೆಯನ್ನು ಹೊತ್ತುಕೊಂಡು ಗೌಡರ ಮನೆಗೆ ತಂದರು. ಗೌಡರು ಮೋತಿಯ ಜಾಣತನಕ್ಕೆ ಮೆಚ್ಚಿದರು. ಪ್ರೀತಿಯಿಂದ ಮೈಮೇಲೆ ಕೈಯಾಡಿಸಿದರು. ಮೋತಿಗೆ ಸಂತೋಷವಾಯಿತು.

ಅಭ್ಯಾಸ

(1) ಪ್ರಶ್ನೆಗಳು :—

1. ಮೋತಿ ಯಾರು ?
2. ಮೋತಿ ರಾತ್ರಿ ಏನು ಮಾಡುತ್ತಿತ್ತು ?
3. ಕಳ್ಳರು ಏಕೆ ಸಮಯ ಸಾಧಿಸುತ್ತಿದ್ದರು ?
4. ಕಳ್ಳರು ಹಣದ ಪೆಟ್ಟಿಗೆಯನ್ನು ಏನು ಮಾಡಿದರು ?
5. ಹಣದ ಪೆಟ್ಟಿಗೆಯನ್ನು ಗೌಡರಿಗೆ ಯಾರು ತೋರಿಸಿದರು ?

(2) ಈ ಮಾತುಗಳನ್ನು ಸರಿಯಾಗಿ ಜೋಡಿಸಿ ಬರೆಯಿರಿ :—

1. ನಂಬಿಗೆಯ ಬಲು ಮೋತಿ ಪ್ರಾಣಿ.
2. ಸ್ವರದಿಂದ ಮೋತಿ ಕೂಗಿತು ದೀನ.

(3) ಬಿಟ್ಟಿರುವ ಶಬ್ದಗಳನ್ನು ತುಂಬಿರಿ :—

1. ಗೌಡರ ಮನೆಗೆ ಹಿಂಬದಿಯಿಂದ———ಹಾಕಿದರು.
2. ಹಣದ ಪೆಟ್ಟಿಗೆ———ವಾಗಿತ್ತು.
3. ಮೋತಿ———ಸ್ವರದಿಂದ ಕೂಗಿತು.
4. ಗೌಡರು ಮೋತಿಯ———ಮೆಚ್ಚಿದರು.

(4) 1. ನಿಮಗೆ ಗೊತ್ತಿರುವ ಒಂದು ನಾಯಿಯ ಕಥೆ ಹೇಳಿರಿ.
2. ಮನೆ ಕಾಯುತ್ತಿರುವ ನಾಯಿಯ ಚಿತ್ರ ತೆಗೆಯಿರಿ.

(5) ಶಬ್ದಗಳ ಅರ್ಥ :—

ದೀನ—ದುಃಖಿತ. ಕನ್ನ—ಕಳ್ಳರು ಕೊರೆಯುವ ಕಿಂಡಿ,
ಹಿಂಬಾಲಿಸು—ಹಿಂದೆ ಹಿಂದೆ ಹೋಗು.

10. ರೈಲು ಪ್ರಯಾಣ

ಬೇಸಿಗೆ ರಜೆ ಬಂದಿತು. ಶಾಲೆಗೆ ಬಿಡುವು ಸಿಕ್ಕಿತು. ಮಕ್ಕಳಿಗೆ ಆನಂದವೇ ಆನಂದ. ಮಹೇಶನು ರಾಯಚೂರಿಗೆ ಹೋಗಲು

ಇಚ್ಛಿಸಿದನು. ತನ್ನ ಗೆಳೆಯ ರಾಜಶೇಖರನನ್ನು ನೋಡಲು ಹಂಬಲಿಸಿದನು. ತಂದೆ ಅವನನ್ನು ರೈಲಿನಲ್ಲಿ ಕಳುಹಿಸಲು ನಿಶ್ಚಯಿಸಿದನು. ತಾಯಿ ಊರಿಗೆ ಕಳುಹಿಸುವ ವ್ಯವಸ್ಥೆ ಮಾಡಿದಳು. ಮಹೇಶನು ಗುಲಬರ್ಗಾ ರೈಲು ನಿಲ್ದಾಣಕ್ಕೆ ಹೋದನು. ನಿಲ್ದಾಣದಲ್ಲಿ ಜನರು ಟಿಕೆಟ್ ಪಡೆಯಲು ಸಾಲಾಗಿ ನಿಂತಿದ್ದರು. ಮಹೇಶನು ಸರತಿಯ ಸಾಲಿನಲ್ಲಿ ನಿಂತು ತನ್ನ ಟಿಕೆಟ್ ಪಡೆದನು. ನಿಲ್ದಾಣದ ಒಳಗೆ ಜನರ ಸದ್ದುಗದ್ದಲ ಹೆಚ್ಚಾಗಿತ್ತು. ರೈಲು ಹಿಂದಿನ ನಿಲ್ದಾಣ ಬಿಟ್ಟಂತೆ ಗಂಟೆ ಬಾರಿಸಿತು. ಸರಿಯಾದ ಸಮಯಕ್ಕೆ ರೈಲು ಗಾಡಿಯು "ಭುಕ್ ಚುಕ್ ಭುಕ್ ಚುಕ್" ಎಂದು ಧ್ವನಿ ಮಾಡುತ್ತ ನಿಲ್ದಾಣದೊಳಗೆ ಬಂದಿತು. ರೈಲುಗಾಡಿಯ ಬಾಗಿಲ ಹತ್ತಿರ ಜನರು ಗುಂಪುಗುಂಪಾಗಿ ಸೇರಿದರು. ಒಳಗೆ ನುಗ್ಗಲು ಕೆಲವರು ಪ್ರಯತ್ನಪಟ್ಟರು. ಕೆಳಗೆ ಇಳಿಯುತ್ತಿದ್ದ ಒಬ್ಬ ಪ್ರಯಾಣಿಕನು, " ಸ್ವಲ್ಪ ತಾಳಿರಿ, ಬಹಳ ಜನರು ಇಳಿಯುತ್ತಿದ್ದಾರೆ. ನಿಮಗೆಲ್ಲರಿಗೆ ಸ್ಥಳ ಸಿಕ್ಕುತ್ತದೆ " ಎಂದನು. ಕೆಳಗೆ ನಿಂತಿದ್ದ ಹಿರಿಯರೊಬ್ಬರು, " ತಡೆಯಿರಿ, ಒಳಗಿನ ಪ್ರಯಾಣಿಕರು ಇಳಿಯಲಿ. ಆಮೇಲೆ ನಾವು ಒಳಗೆ ಹೋಗೋಣ" ಎಂದರು. ಮಹೇಶನು ಗಾಡಿಯ ಒಳಗೆ ಹತ್ತಿದನು. ಕಿಟಕಿಯ ಹತ್ತಿರ ಸ್ಥಳ ಪಡೆದನು. ಗಾರ್ಡ್ ಹಸಿರು ಧ್ವಜ ತೋರಿಸಿದ ಕೂಡಲೆ ರೈಲು ಗಾಡಿ ಸಿಳ್ಳು ಹಾಕಿತು. " ಭುಕ್ ಚುಕ್ ಭುಕ್ ಚುಕ್ " ಎಂದು ಶಬ್ದ ಮಾಡುತ್ತ ಹೊರಟಿತು.

ರೈಲುಡಬ್ಬಿಯೊಳಗೆ ಕುರುಡ ಭಿಕ್ಷುಕನೊಬ್ಬನು ಬಂದನು. ಒಂದು ಹಾಡನ್ನು ಹಾಡಿದನು. ಕೆಲವರು ಭಿಕ್ಷೆಯನ್ನು ಹಾಕಿದರು. ಮಹೇಶನೂ ಐದು ಪೈಸೆ ಕೊಟ್ಟನು. ಮುಂದಿನ ನಿಲ್ದಾಣದಲ್ಲಿ ರೈಲುಗಾಡಿ ನಿಂತಿತು. ಜನರು ಗುಂಪುಗುಂಪಾಗಿ ಡಬ್ಬಿಯಲ್ಲಿ ನುಗ್ಗಿದರು. ಸ್ಥಳಕ್ಕಾಗಿ ಜಗಳ ಮಾಡಿದರು. ಹಿರಿಯರೊಬ್ಬರು ಎಲ್ಲರನ್ನೂ ಸಮಾಧಾನ ಪಡಿಸಿ ಮೂರು ನಾಲ್ಕು ಜನಕ್ಕೆ ಸ್ಥಳ ಮಾಡಿಕೊಟ್ಟರು. ವಾಡಿ ಜಂಕ್ಷನ್

ಬಂದಿತು. ಕಾಫಿ, ತಿಂಡಿ ಮತ್ತು ಹಣ್ಣು ಮಾರಲು ಅಂಗಡಿಯ ಹುಡುಗರು ಕೂಗುತ್ತ ಬಂದರು. ರೈಲು ಹೆಚ್ಚು ಸಮಯ ಅಲ್ಲಿ ನಿಂತಿತು. ಮಹೇಶನು ತಾಯಿಯು ಕೊಟ್ಟ ತಿಂಡಿಯ ಪೊಟ್ಟಣವನ್ನು ಬಿಚ್ಚಿದನು. ಸಹ ಪ್ರಯಾಣಿಕರ ಜೊತೆಯಲ್ಲಿ ತಿಂಡಿಯನ್ನು ತಿಂದನು. ರೈಲು ಪುನಃ ಹೊರಟಿತು. ಟಿಕೆಟ್ ಪರೀಕ್ಷಕನು ರೈಲುಡಬ್ಬಿಯೊಳಗೆ ಬಂದನು. ಎಲ್ಲರ ಟಿಕೆಟ್‌ಗಳನ್ನು ಪರೀಕ್ಷಿಸಿದನು. ಒಬ್ಬನ ಹತ್ತಿರ ಟಿಕೆಟ್ ಇರಲಿಲ್ಲ. ಟಿಕೆಟ್ ಇಲ್ಲದ ಪ್ರಯಾಣ ಅಪರಾಧ. ಅದಕ್ಕಾಗಿ ಅವನು ಟಿಕೆಟ್ ಹಣ ಮತ್ತು ದಂಡ ಕೊಡಬೇಕಾಯಿತು.

ರೈಲುಗಾಡಿಯು ಸರಿಯಾದ ಸಮಯಕ್ಕೆ ರಾಯಚೂರು ನಿಲ್ದಾಣವನ್ನು ತಲುಪಿತು. ಮಹೇಶನ ಗೆಳೆಯ ರಾಜಶೇಖರ ನಿಲ್ದಾಣಕ್ಕೆ ಬಂದಿದ್ದನು. ಅವನಿಗೆ ಮಹೇಶನ ಕಾಗದ ತಲುಪಿದ್ದಿತು. ಮಹೇಶನು ಅವನನ್ನು ಕಂಡ ಕೂಡಲೇ ಕೈ ಅಲುಗಾಡಿಸುತ್ತ ಕೂಗಿದನು. ಅಷ್ಟರಲ್ಲಿ ರಾಜಶೇಖರನು ಕಿಟಕಿಯ ಹತ್ತಿರ ಬಂದನು. ಮಹೇಶನು ಕಿಟಕಿಯಿಂದ ತನ್ನ ಕೈಚೀಲವನ್ನು ಕೊಟ್ಟನು. ಗಾಡಿಯಿಂದ ಇಳಿಯುತ್ತ ಮಹೇಶನು ರೈಲು ಪ್ರಯಾಣದ ಅನುಭವ ಹೇಳತೊಡಗಿದನು. ದೂರದ ಪ್ರಯಾಣಕ್ಕೆ ರೈಲು ಉತ್ತಮ ಸಾಧನವೆಂದು ಹೇಳಿದನು. ಇಬ್ಬರೂ ನಿಲ್ದಾಣದ ಹೊರಗೆ ಹೋದರು. ರಿಕ್ಷಾ ಒಂದರಲ್ಲಿ ಕುಳಿತು ಮನೆಗೆ ಹೋದರು.

ಅಭ್ಯಾಸ

(1) ಪ್ರಶ್ನೆಗಳು :—

1. ಮಹೇಶನು ಬೇಸಿಗೆ ರಜೆಯಲ್ಲಿ ಯಾವ ಊರಿಗೆ ಹೋಗಲು ಇಚ್ಛಿಸಿದನು ?
2. ರೈಲುಗಾಡಿಯಿಂದ ಇಳಿಯುತ್ತಿದ್ದ ಒಬ್ಬ ಪ್ರಯಾಣಿಕನು ಏನೆಂದು ಹೇಳಿದನು ?
3. ರೈಲು ಹೊರಡುವ ಮುಂಚೆ ಗಾರ್ಡ್ ಏನನ್ನು ತೋರಿಸಿದನು ?
4. ಟಿಕೆಟ್ ಇಲ್ಲದೆ ಪ್ರಯಾಣ ಮಾಡುತ್ತಿದ್ದವನಿಗೆ ಏನಾಯಿತು ?

(2) ಹೊಂದಿಸಿ ಬರೆಯಿರಿ :—

1. ರೈಲುಗಾಡಿಯು	1. ಪ್ರಯಾಣಿಕರ ಟಿಕೆಟ್‌ಗಳನ್ನು ಪರೀಕ್ಷಿಸಿದನು.
2. ನಿಲ್ದಾಣದಲ್ಲಿ ಜನರು ಟಿಕೆಟ್ ಪಡೆಯಲು	2. ಶಾಲೆಗೆ ಬಿಡುವು ಸಿಕ್ಕುತ್ತದೆ.
3. ಬೇಸಿಗೆ ರಜೆ ಬಂದಾಗ	3. ಭುಕ್ ಚುಕ್, ಭುಕ್, ಚುಕ್ ಎಂದು ಧ್ವನಿಮಾಡುತ್ತ ಹೊರಟಿತು.
4. ಟಿಕೆಟ್ ಪರೀಕ್ಷಕನು	4. ಸಾಲಾಗಿ ನಿಂತಿದ್ದರು.

(3) 1. ರೈಲುಗಾಡಿಯ ಚಿತ್ರವನ್ನು ತೆಗೆಯಿರಿ.
2. ರೈಲುಗಾಡಿಯ ಆಟವನ್ನು ಆಡಿರಿ.
3. ಹತ್ತಿರವಿರುವ ರೈಲು ನಿಲ್ದಾಣಕ್ಕೆ ಭೇಟಿ ಕೊಡಿರಿ.

(4) ಶಬ್ದಗಳ ಅರ್ಥ :—

ಜಂಕ್ಷನ್—ಒಂದಕ್ಕಿಂತ ಹೆಚ್ಚು ರೈಲು ಮಾರ್ಗಗಳು ಸೇರುವ ಸ್ಥಳ.
ಗಾರ್ಡ್ — ರೈಲುಗಾಡಿಯನ್ನು ರಕ್ಷಿಸುವ ಅಧಿಕಾರಿ.
ಇಚ್ಛಿಸು—ಬಯಸು.
ನಿಲ್ದಾಣ—ನಿಲ್ಲುವ ಸ್ಥಳ.
ನಿಶ್ಚಯಿಸು—ನಿರ್ಧಾರ ಮಾಡು.
ಹಂಬಲಿಸು—ಬಯಸು, ಅಪೇಕ್ಷಿಸು.

---

11. ರವಿಯ ಪತ್ರ

ವಿಜಾಪುರ,
ಅಕ್ಟೋಬರ 10–1974.

ಶೀರ್ಘರೂಪು ಅವರಿಗೆ

ನಮಸ್ಕಾರಗಳು

ಮೊನ್ನೆ ಸಾಯಂಕಾಲ ಸುರಕ್ಷಿತವಾಗಿ ಇಲ್ಲಿಗೆ ಬಂದು ತಲುಪಿದೆವು. ಇಲ್ಲಿಯ ಸರಕಾರಿ ಪ್ರೌಢಶಾಲೆಯಲ್ಲಿ ನಮಗೆ ಇಳಿದುಕೊಳ್ಳಲು ಒಂದು ವರ್ಗದ ಕೋಣೆಯನ್ನು ಕೊಟ್ಟಿದ್ದಾರೆ.

ನಿನ್ನೆ ಬೆಳಗ್ಗೆ ಒಂದು ಫಲಾಹಾರಮಂದಿರದಲ್ಲಿ ತಿಂಡಿಯನ್ನು ತಿಂದು ಮೊದಲು ಗೋಲಗುಮ್ಮಟವನ್ನು ನೋಡಲು ಹೋದೆವು. ದೂರದಿಂದಲೇ

ಕಾಣುತ್ತಿರುವ ಆ ಗುಮ್ಮಟವನ್ನು ನೋಡಲು ನಮ್ಮೆಲ್ಲರ ತವಕವು ಹೆಚ್ಚಾಯಿತು. ಹತ್ತಿರ ಹೋಗಿ ನೋಡಿದ ಕೂಡಲೇ ಆಶ್ಚರ್ಯ ವಾಯಿತು. ಆ ಭವ್ಯ ಕಟ್ಟಡವನ್ನು ನೋಡಿ ಕೆಲವರಿಗೆ ಭಯವೂ ಆಯಿತು.



ನಮ್ಮ ಗುರುಗಳು ಹೋಗಿ ಪ್ರವೇಶ ಫೀಯನ್ನು ಕೊಟ್ಟು ಪ್ರತಿಯೊಬ್ಬರಿಗೂ ಟಿಕೇಟು ತೆಗೆದುಕೊಂಡು ಬಂದರು. ನಾವು ಆ ಗುಮ್ಮಟವನ್ನು ಚಕ್ರಾಕಾರವಾಗಿ ತಿರುಗುತ್ತ ಹತ್ತಲಾರಂಭಿಸಿದೆವು. ಮೊದಲು ಉತ್ಸಾಹದ ಭರದಲ್ಲಿ ಅವಸರದಿಂದಲೇ ಹತ್ತಿದೆವು. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ನಮಗೆ ದಣಿವಾಯಿತು. ಸಾವಕಾಶವಾಗಿ ಏರಿ ಎತ್ತರದಲ್ಲಿರುವ ಮೊಗಸಾಲೆಯನ್ನು ಪ್ರವೇಶಿಸಿದೆವು. ಗುರುಗಳು 'ಎಲ್ಲರೂ ಒಳಗೆ ಬಂದಿರಾ ?' ಎಂದು ಪ್ರಶ್ನಿಸಿದರು.

ಕೂಡಲೇ 'ಎಲ್ಲರೂ ಒಳಗೆ ಬಂದಿರಾ ?' ಎಂಬ ಮಾತು ಪ್ರತಿಧ್ವನಿತವಾಯಿತು. ಅದನ್ನು ಕೇಳಿದ ನಮಗೆ ಆಶ್ಚರ್ಯವಾಯಿತು. ಎಲ್ಲ ಹುಡುಗರು ಒಂದೊಂದು ರೀತಿಯ ಧ್ವನಿ ಮಾಡಿದರು. ನಾನು 'ಅವ್ವಾ' ಎಂದು ಕೂಗಿದೆನು. 'ಅವ್ವಾ.' ಎಂಬ ಧ್ವನಿಯು ಏಳು ಸಲ ಕೇಳಿಸಿತು.

ಸ್ವಲ್ಪ ಹೊತ್ತಿನ ನಂತರ ಗುರುಗಳು ಕೆಲವು ಹುಡುಗರಿಗೆ ಅಲ್ಲಿಯೇ ಇದ್ದ ಆಸನದ ಮೇಲೆ ಗೋಡೆಗೆ ಆತು ಕೂಡಲು ಹೇಳಿದರು. ಇನ್ನುಳಿದವರಿಗೆ ಆದರ ಎದುರಿಗೆ ದೂರದಲ್ಲಿರುವ ಇನ್ನೊಂದು ಆಸನದ ಮೇಲೆ ಗೋಡೆಗೆ ಕಿವಿ ಹಚ್ಚಿ ಕೂಡಲು ಹೇಳಿದರು. ಗೋಡೆಗೆ ಮುಖವಿಟ್ಟು ಪಿಸುಮಾತನಾಡಲು ಹುಡುಗರಿಗೆ ಹೇಳಿ, ಆಚೆಗೆ ಕುಳಿತವರಿಗೆ ಕಿವಿಯಿಟ್ಟು ಕೇಳಲು ಹೇಳಿದರು. ನಾನು 'ಮನೋಜ, ಉಂಡಿ ತಿಂದೆಯಾ ?' ಎಂದು ಕೇಳಿದೆನು. ಆತನು ಅದನ್ನು ಕೇಳಿ 'ನಾನು ತಿಂದೆನು ; ನೀನೂ ತಿಂದೆಯಾ?' ಎಂದು ತಿರುಗಿ ಕೇಳಿದನು. ಹೀಗೆ ಒಬ್ಬರಿಗೊಬ್ಬರು ಮಾತನಾಡಿ ಕೇಳಿದೆವು. ಇದನ್ನು ಕೇಳಿ ನಮಗೆ ಅತ್ಯಂತ ಆನಂದಾಶ್ಚರ್ಯಗಳಾದವು. ಇದನ್ನು 'ಪಿಸುಮಾತಿನ ಮೊಗಸಾಲೆ' ಎಂದು ಕರೆಯುವರು.

ಸುಲ್ತಾನ ಮಹಮ್ಮದ ಆದಿಲ್‌ಶಹಾನು ಈ ಗುಮ್ಮಟವನ್ನು ತನ್ನ ಸಮಾಧಿಗಾಗಿಯೆಂದೇ ಕಟ್ಟಿಸಿದನು. ಕ್ರಿ. ಶ. 1626ರಲ್ಲಿ ಅದನ್ನು ಕಟ್ಟುವ ಕೆಲಸವು ಪ್ರಾರಂಭವಾಯಿತು. ಕಟ್ಟುವ ಕೆಲಸವು ಮೂವತ್ತು ವರ್ಷಗಳ ಕಾಲ ನಡೆಯಿತು. ಕಂಬಗಳ ಆಧಾರವಿಲ್ಲದೆ ನಿರ್ಮಾಣವಾಗಿರುವದರಿಂದ ಇದು ವಿಸ್ಮಯಕಾರಿಯಾಗಿದೆ ಎಂದು ಗುರುಗಳು ತಿಳಿಸಿದರು.

ಗೋಲಗುಮ್ಮಟದ ಪರಿಚಯವನ್ನು ಮಾಡಿಕೊಂಡು ನಾವು ಜುಮ್ಮಾಮಸೀದಿ, ಆಸರಮಹಾಲ, ತಾಸಬಾವಡಿ, ಉಪ್ಪಲಿ ಬುರುಜು, ಇಬ್ರಾಹಿಂರೋಜಾ, ಮಲ್ಲಿಕ್-ಇ-ಮೈದಾನ, ಬಾರಾಕಮಾನ, ಜೋಡುಗುಮ್ಮಟ ಮೊದಲಾದವುಗಳನ್ನು ಸಾಯಂಕಾಲದವರೆಗೂ ಸುತ್ತಾಡಿ ನೋಡಿದೆವು. ಎಷ್ಟು ಅಡ್ಡಾಡಿದರೂ ನಮಗೆ ದಣಿವೇ ಅನಿಸಲಿಲ್ಲ. ಹಸಿವೆಯ ಪರಿವೆಯೂ ಇರಲಿಲ್ಲ.

ನಾಳೆ ಬೆಳಗ್ಗೆ ಇಲ್ಲಿಂದ ನಾವು ಬಾದಾಮಿಗೆ ತೆರಳುವೆವು. ನನ್ನ ಆರೋಗ್ಯವು ಚೆನ್ನಾಗಿದೆ. ಮನೆಯಲ್ಲಿ ಹಿರಿಯರೆಲ್ಲರಿಗೂ ನನ್ನ

ನಮಸ್ಕಾರಗಳನ್ನು ತಿಳಿಸಿರಿ. ವಿಜಯದಶಮಿಯ ಹಬ್ಬದ ಹೊತ್ತಿಗೆ ನಾನು ಊರಿಗೆ ಬರುತ್ತೇನೆ.

ನಿಮ್ಮ ಪ್ರೀತಿಯ ಮಗು.
ರವಿ.

ಅಭ್ಯಾಸ

(1) ಪ್ರಶ್ನೆಗಳು :—

1. ರವಿಯು ಯಾವ ಊರಿಗೆ ಹೋಗಿದ್ದನು ?
2. ರವಿಯು ಗೋಲಗುಮ್ಮಟದಲ್ಲಿ ಕಂಡ ಆಶ್ಚರ್ಯಕರವಾದ ಸಂಗತಿಗಳು ಯಾವುವು ?
3. ಗೋಲಗುಮ್ಮಟವನ್ನು ಯಾರು ಕಟ್ಟಿಸಿದರು ? ಮತ್ತು ಎಂದು ಕಟ್ಟಿಸಿದರು ?
4. ಗೋಲಗುಮ್ಮಟವು ಏಕೆ ವಿಸ್ಮಯಕರವಾಗಿದೆ ?
5. ವಿಜಾಪುರದಲ್ಲಿ ನೋಡತಕ್ಕಂಥ ಸ್ಥಳಗಳು ಯಾವುವು ?

(2) ಕಂಸದಲ್ಲಿ ಕೊಟ್ಟ ಪದಗಳಲ್ಲಿ ಸರಿಯಾದ ಒಂದನ್ನು ಆಯ್ದು ಬಿಟ್ಟ ಸ್ಥಳವನ್ನು ತುಂಬಿರಿ :—

1. ಗೋಲಗುಮ್ಮಟವನ್ನು ನೋಡಲು ನಮ್ಮೆಲ್ಲರ ——— ಹೆಚ್ಚಾಯಿತು.
   (ಆನಂದವು. ತವಕವು. ಭಯವು)
2. ಆದಿಲ್‌ಶಹಾನು ತನ್ನ ——————— ಕಟ್ಟಿಸಿದನು.
   (ಸೌಂದರ್ಯಕ್ಕಾಗಿ. ಸಂತೋಷಕ್ಕಾಗಿ. ಸಮಾಧಿಗಾಗಿ)
3. ಕಂಬಗಳ ——— ಇಲ್ಲದೆ ಕಟ್ಟಿರುವುದರಿಂದ ವಿಸ್ಮಯಕಾರಿಯಾಗಿದೆ.
   (ಆಧಾರ, ಸಹಾಯ, ಹೊದಿಕೆ)

(3) 1. ಗೋಲಗುಮ್ಮಟದ ಚಿತ್ರವನ್ನು ಬರೆಯಿರಿ.
2. ನಿಮ್ಮ ಊರ ಜಾತ್ರೆಯನ್ನು ಕುರಿತು ನಿಮ್ಮ ಗೆಳೆಯನಿಗೆ ಪತ್ರ ಬರೆಯಿರಿ.

(4) ಶಬ್ದಗಳ ಅರ್ಥ :—

ತವಕ—ಕುತೂಹಲ, ಇಚ್ಛೆ. ವಿಸ್ಮಯ—ಆಶ್ಚರ್ಯ.
ಭವ್ಯ—ದೊಡ್ಡದಾದ. ನಿರ್ಮಾಣ—ಸಿದ್ಧ.

12. ಕರಡಿಯ ಕುಣಿತ

ಕರಡಿಯು ತಕತಕ ಕುಣಿಸುತ ಬಂದನು
ಸಿದ್ದಿದ್ದಿ ಬಾವಾ ಬಾಲರ ಬಾವಾ
ಬಾವಾ ಬಾವಾ ಬಾಲರ ಜೀವಾ
ಕರಡಿಯು ಕುಣಿಸುತ ಬಾ ಬಾ
ಊರಿನ ಹುಡುಗರ ಹಿಗ್ಗನು ಹೆಚ್ಚಿಸಿ
ಉಬ್ಬಿಸಿ ಹಾರಿಸಿ ಬಾ ಬಾ
ಬಾ ಬಾ ಬಾವಾ ಬಾಲರ ಜೀವಾ

ಕರಡಿಯು ಕೊರಳೊಳು ಕವಡೆಯ ಸರವು
ಕಾಲಿನ ಗೆಜ್ಜೆಯ ನುಡಿಸುತ ಬಾ
ಎರಡೇ ಕಾಲಲಿ ನಿಲ್ಲಿಸಿ ನಡೆಸುತ
ನಮ್ಮನು ನಗಿಸಲು ಬಾ ಬಾ
ಬಾ ಬಾ ಬಾವಾ ಬಾಲರ ಜೀವಾ

ಮೂಗಿನ ಮೇಗಡೆ ಮುಂಗಾಲಿರಿಸಿ
ಸಲಾಮು ಹೊಡೆಸಲು ಬಾ ಬಾ
ಮೈಯ ಕೂದಲನು ಪಟಪಟ ಜಾಡಿಸಿ
ನಮ್ಮನು ನಲಿಸಲು ಬಾ ಬಾ
ಬಾ ಬಾ ಬಾವಾ ಬಾಲರ ಜೀವಾ

ಡಮಡಮ ಡಮರುಗ ಬಾರಿಸಿ ಬಾವಾ
ಊರಿಗೆ ಊರನೆ ಎಬ್ಬಿಸಿ ಬಾ
ವರುಷಕ್ಕೊಮ್ಮೆ ಕರಡಿಯ ಕುಣಿಸಿ
ನಮ್ಮನು ನಗಿಸಲು ಬಾ ಬಾ
ಬಾ ಬಾ ಬಾವಾ ಬಾಲರ ಜೀವಾ
ಕರಡಿಯ ಕುಣಿಸುತ ಬಾ ಬಾ

—ಸಿದ್ಧಯ್ಯ ಪುರಾಣಿಕ

ಅಭ್ಯಾಸ

(1) ಪ್ರಶ್ನೆಗಳು :—

1. ಕರಡಿಯನ್ನು ಕುಣಿಸುತ್ತ ಯಾರು ಬಂದರು ?
2. ಕರಡಿಯ ಕೊರಳಲ್ಲಿ ಮತ್ತು ಕಾಲಲ್ಲಿ ಏನಿದ್ದವು ?
3. ಸಿದ್ದಿದ್ದಿ ಬಾವಾ ಕರಡಿಯನ್ನು ಯಾವ ರೀತಿ ಕುಣಿಸಿದನು ?

(2) ಬಿಟ್ಟ ಶಬ್ದಗಳನ್ನು ತುಂಬಿರಿ :—

1. ಡಮಡಮ——ಬಾರಿಸಿ ಬಾವಾ
2. ಊರಿಗೆ ಊರನೆ——ಬಾ
3. ವರುಷಕ್ಕೊಮ್ಮೆ——ಕುಣಿಸಿ
4. ನಮ್ಮನು——ಬಾ ಬಾ

(3) 1. ಕರಡಿಯ ಚಿತ್ರವನ್ನು ಬರೆಯಿರಿ.
2. ಕರಡಿಯ ಕಥೆಗಳನ್ನು ಸಂಗ್ರಹಿಸಿರಿ.

(4) ಶಬ್ದಗಳ ಅರ್ಥ :—

ಹಿಗ್ಗು—ಸಂತೋಷ. ಮುಂಗಾಲು—ಕಾಲಿನ ಮುಂಭಾಗ.
ಉಬ್ಬಿಸಿ—ಹುರಿದುಂಬಿಸಿ. ಡಮರುಗ—ಡಕ್ಕೆ, ಚರ್ಮದ ವಾದ್ಯ.

---

13. ಶಾಲೆಯ ಕೈತೋಟ

ಅಂದು ಸೋಮವಾರ. ಮೂರನೆಯ ವರ್ಗದ ಮಕ್ಕಳಿಗೆ ಕಾರ್ಯಾನುಭವದ ಅವಧಿಗಳಿದ್ದವು. ಗುರುಗಳು ಮಕ್ಕಳಿಗೆ ಶಾಲೆಯ ಕೈತೋಟಕ್ಕೆ ಹೋಗಲು ಹೇಳಿದರು. ಸಂಗನು 'ಗುರುಗಳೆ, ಅಲ್ಲಿ ನಾವು ಏನು ಮಾಡಬೇಕು ?' ಎಂದು ಕೇಳಿದನು.



ಗುರು :—ಶನಿವಾರದಿನವೇ ನೀವು ಮಡಿಗಳನ್ನು ಮಾಡಿರುವಿರಿ. ಇಂದು ನೀವು ಅಲ್ಲಿ ಬೀಜಗಳನ್ನು ಬಿತ್ತಬೇಕು.

ಬಸವ :—ಯಾವ ಬೀಜಗಳನ್ನು ಬಿತ್ತೋಣ, ಗುರುಗಳೆ ?

ಗುರು :—ಮೆಂತೆಯ ಬೀಜಗಳನ್ನು ಬಿತ್ತಿರಿ. ಕರೀಮ, ನೀನು ಬೀಜಗಳನ್ನು ಎಲ್ಲರಿಗೂ ಕೊಡು.

ಕರೀಮ :—ಬೀಜಗಳು ಎಲ್ಲಿವೆ, ಗುರುಗಳೆ ?

ಗುರು :—ನಿನ್ನೆದುರು ಕಾಣುವ ಕಪಾಟಿನಲ್ಲಿವೆ. ಅದನ್ನು ತೆಗೆ. ಅಲ್ಲಿ ಬೀಜದ ಪೊಟ್ಟಣಗಳಿವೆ. ಒಂದೊಂದು ಪೊಟ್ಟಣದಲ್ಲಿ ನಾಲ್ಕು ಜನರಿಗೆ ಸಮವಾಗಿ ಹಂಚಿಕೊಡು.

ರಾಜಶೇಖರ :—ಈ ಬೀಜಗಳು ಎಲ್ಲಿ ಸಿಗುತ್ತವೆ ?

ಗುರು :—ಈ ಬೀಜಗಳನ್ನು ಸರಕಾರದ ತೋಟಗಾರಿಕೆ ಇಲಾಖೆಯವರು ಮಾರುತ್ತಾರೆ. ಅಲ್ಲದೆ ಅಂಗಡಿಗಳಲ್ಲಿಯೂ ಮಾರಲಿಕ್ಕೆ ಸಿಗುತ್ತವೆ.

ಕರೀಮನಿಂದ ಎಲ್ಲರೂ ಬೀಜಗಳನ್ನು ತೆಗೆದುಕೊಂಡರು. ಗುರುಗಳೊಂದಿಗೆ ಕೈತೋಟಕ್ಕೆ ನಡೆದರು. ಮೊದಲು ಗುರುಗಳು ತಮ್ಮ ಮಡಿಯಲ್ಲಿ ಸಾಲಾಗಿ ಗೆರೆಗಳನ್ನು ಎಳೆದರು. ಆ ಗೆರೆಗಳಲ್ಲಿ ಬೀಜಗಳನ್ನು ಹಾಕಿದರು. ಅದರ ಮೇಲೆ ನಿಧಾನವಾಗಿ ಸ್ವಲ್ಪ ಮಣ್ಣು ಮತ್ತು ಗೊಬ್ಬರವನ್ನು ಹಾಕಿದರು. ಕೊಡದಿಂದ ನೀರು ಚಿಮುಕಿಸಿದರು. ಎಲ್ಲ ಮಕ್ಕಳಿಗೂ ಬೀಜ ಹಾಕುವ ರೀತಿಯನ್ನು ತೋರಿಸಿ ಕೊಟ್ಟರು. ಮಕ್ಕಳೂ ತಮ್ಮ ತಮ್ಮ ಮಡಿಗಳಲ್ಲಿ ಬೀಜ ಬಿತ್ತಿದರು. ಸಮೀಪದಲ್ಲಿದ್ದ ನೀರಿನ ಗುಂಡಿಯಿಂದ ಕೊಡದಲ್ಲಿ ನೀರು ತಂದರು. ಮಡಿಗಳಿಗೆ ನೀರು ಚಿಮುಕಿಸಿದರು. ಸ್ವಲ್ಪ ಗೊಬ್ಬರವನ್ನೂ ಹಾಕಿದರು. ಕೈತೊಳೆದುಕೊಂಡು ಸಾಲಾಗಿ ಎಲ್ಲರೂ ವರ್ಗಕ್ಕೆ ಬಂದರು.

ಯಮುನಾ :—ಗುರುಗಳೆ. ನಾವು ಬಿತ್ತಿದ ಮೆಂತೆಬೀಜವು ಎಷ್ಟು ದಿನಗಳಲ್ಲಿ ಬೆಳೆದು ಪಲ್ಲೆಯಾಗುವುದು?

ಗುರು :—ಸುಮಾರು ಮೂರು ನಾಲ್ಕು ವಾರಗಳಲ್ಲಿ ತಿನ್ನಲು ಯೋಗ್ಯವಾದ ಪಲ್ಲೆಯಾಗುವುದು. ಆದರೆ ಮಡಿಗಳಿಗೆ ಕಾಲಕಾಲಕ್ಕೆ ನೀರು ಮಾತ್ರ ಹಾಕಬೇಕು.

ಕರೀಮ :—ನೀರು ಹಾಕದಿದ್ದರೆ ಏನಾಗುತ್ತದೆ ?

ಗುರು :—ಮೊಳಕೆಯೊಡೆದವರೂ ಮೇಲೆದ್ದು ಬರುವುದಿಲ್ಲ. ಬೆಳೆಯು ಕಮರುತ್ತದೆ. ಬೆಳೆಗೆ ನೀರು, ಬೆಳಕು, ಆಹಾರ ಇವು ಮುಖ್ಯ.

ಗುರುಪಾದ :—ಬೆಳೆಯ ಆಹಾರವು ಯಾವುದು ? ಗುರುಗಳೆ, ಬೆಳೆಯು ಆಹಾರವನ್ನು ಹೇಗೆ ಪಡೆಯುತ್ತದೆ ?

ಗುರು :—ನೀವು ಹಾಕಿದ ಗೊಬ್ಬರವು ಬೆಳೆಯ ಆಹಾರವು. ಅದು ಭೂಮಿಯಿಂದಲೂ ಆಹಾರವನ್ನು ದೊರಕಿಸಿಕೊಳ್ಳುತ್ತದೆ. ಬೇರುಗಳ ಮುಖಾಂತರ ಬೆಳೆಯು ಆಹಾರವನ್ನು ಪಡೆಯುತ್ತದೆ.

ರೂಪಾ :—ಪಲ್ಲೆಯನ್ನು ನಾವು ಏಕೆ ತಿನ್ನಬೇಕು ? ಗುರುಗಳೆ.

ಗುರು :—ಪಲ್ಲೆಯಲ್ಲಿ ಜೀವಸತ್ವಗಳಿರುತ್ತವೆ. ತೊಪ್ಪಲು ಪಲ್ಲೆಯಂತೂ ಆರೋಗ್ಯಕ್ಕೆ ಪೂರ್ಣ ಹಿತಕಾರಿಯು. ತಿಂದ ಆಹಾರವು ಜೀರ್ಣವಾಗಿ ರಕ್ತವಾಗುತ್ತದೆ. ಕೆಲವು ಭಾಗವು ಮಲವಾಗಿ ಹೊರಗೆ ಬರುತ್ತದೆ. ಈ ಮಲವು ಬೇಗ ಹೊರಬೀಳದಿದ್ದರೆ ರೋಗಗಳುಂಟಾಗುತ್ತವೆ. ಅದಕ್ಕಾಗಿ ವೈದ್ಯರು ಊಟದಲ್ಲಿ ತೊಪ್ಪಲು ಪಲ್ಲೆಯನ್ನು ತಿನ್ನಲು ಹೇಳುತ್ತಾರೆ.

ರಾಜಶೇಖರ :—ಗುರುಗಳೆ. ಕೆಲವರು ಬೇಯಿಸದೆ ಹಸಿ ಪಲ್ಲೆಯನ್ನೇ ತಿನ್ನುವರಲ್ಲಾ?

ಗುರು :—ಬೇಯಿಸಿ ತಿನ್ನುವದಕ್ಕಿಂತಲೂ ಹಸಿ ಪಲ್ಲೆಯನ್ನು ತಿನ್ನುವದೇ ಲೇಸು. ಬೇಯಿಸುವುದರಿಂದ ಜೀವಸತ್ವಗಳು ಕಡಿಮೆಯಾಗುತ್ತವೆ. ಮೂಲಂಗಿ, ಗಜ್ಜರಿ, ಸವತೆಕಾಯಿಗಳನ್ನು ಬೇಯಿಸದೆ ತಿನ್ನುವುದು ಉತ್ತಮ.

ಮಕ್ಕಳು :—ಗುರುಗಳೆ. ನಾವೆಲ್ಲರೂ ನಮ್ಮ ನಮ್ಮ ಮಡಿಗಳಲ್ಲಿ ಕಾಯಿಪಲ್ಲೆಗಳನ್ನು ಚೆನ್ನಾಗಿ ಬೆಳೆಸುತ್ತೇವೆ.

ಗುರು :—ಒಳ್ಳೆಯದು. ನೀವು ನಿಮ್ಮ ಮನೆಯಲ್ಲಿಯೂ ಇದೇ ರೀತಿ ಕೈತೋಟವನ್ನು ಮಾಡಿರಿ. ಹೆಚ್ಚು ಹೆಚ್ಚಾಗಿ ಕಾಯಿಪಲ್ಲೆಯನ್ನು ಬೆಳೆಸಿರಿ. ಇದರಿಂದ ನಮ್ಮೆಲ್ಲರ ಆರೋಗ್ಯಕ್ಕೆ ಹಿತವಾಗುತ್ತದೆ. ನಾವೆಲ್ಲರೂ ಆರೋಗ್ಯದಿಂದಿದ್ದರೆ ನಮ್ಮ ದೇಶದ ಸಂಪತ್ತು ಹೆಚ್ಚುತ್ತದೆ.

ಮಕ್ಕಳು :— ಆಗಲಿ ಗುರುಗಳೆ, ಇನ್ನು ಮೇಲೆ ನಮ್ಮ ಮನೆಯಲ್ಲಿಯೂ ಇದೇ ರೀತಿ ಕೈತೋಟಗಳನ್ನು ಮಾಡಿ ಕಾಯಿಪಲ್ಲೆಯನ್ನು ಬೆಳೆಸುತ್ತೇವೆ.

ಅಭ್ಯಾಸ

(1) ಪ್ರಶ್ನೆಗಳು :—

1. ಸೋಮವಾರದಿವಸ ಮಧ್ಯಾಹ್ನದಲ್ಲಿ ಮೂರನೆಯ ವರ್ಗದ ಮಕ್ಕಳಿಗೆ ಯಾವ ಅವಧಿಗಳಿದ್ದವು ?
2. ಅಂದು ಅವರು ಕೈತೋಟದಲ್ಲಿ ಯಾವ ಕೆಲಸವನ್ನು ಮಾಡಿದರು ?
3. ನಾವು ಪಲ್ಲೆಗಳನ್ನು ಏಕೆ ತಿನ್ನಬೇಕು ?
4. ವೈದ್ಯರು ತೊಪ್ಪಲು ಪಲ್ಲೆಯನ್ನು ತಿನ್ನಲು ಏಕೆ ಹೇಳುತ್ತಾರೆ ?

(2) ಕೆಳಗಿನ ಮಾತುಗಳನ್ನು ಸರಿಪಡಿಸಿ ಬರೆಯಿರಿ :—

1. ರೂಪಾ ಮಡಿಗಳಿಗೆ ನೀರು ಹಣಿಸಿದನು.
2. ರಾಜಶೇಖರನು ಪಲ್ಲೆಯನ್ನು ತಿನ್ನುತ್ತದೆ.
3. ವೈದ್ಯರು ತೊಪ್ಪಲು ಪಲ್ಲೆಯನ್ನು ತಿನ್ನಲು ಹೇಳುವನು.
4. ಪಲ್ಲೆಗಳಲ್ಲಿ ಜೀವಸತ್ವವಿರುತ್ತದೆ.

(3) 1. ನಿಮ್ಮ ಮನೆಯ ಹಿತ್ತಲದಲ್ಲಿ ಒಂದು ಮಡಿ ಮಾಡಿರಿ.
2. ಕಾಯಿಪಲ್ಲೆ ಬೀಜಗಳನ್ನು ಸಂಗ್ರಹಿಸಿರಿ.
3. ಬದನೆಕಾಯಿಯ ಚಿತ್ರವನ್ನು ತೆಗೆಯಿರಿ. ಅದಕ್ಕೆ ಬಣ್ಣವನ್ನು ಹಚ್ಚಿರಿ.

(4) ಶಬ್ದಗಳ ಅರ್ಥ :—

ಕಾರ್ಯಾನುಭವ—ಕೆಲಸದ ಅನುಭವ.

ಕಮರು—ಬಾಡು. ಅವಧಿ—ಕಾಲ

---

14. ಬ್ರಾಹ್ಮಣನೂ ಹುಲಿಯೂ

ಒಮ್ಮೆ ಒಂದು ಹುಲಿಯು ಬೇಟೆಗಾರನ ಬಲೆಯಲ್ಲಿ ಸಿಕ್ಕಿಬಿದ್ದಿತ್ತು. ಅವನು ಅದನ್ನು ತಂದು ಗಟ್ಟಿಯಾದ ಪಂಜರದಲ್ಲಿ ಇಟ್ಟನು. ಹುಲಿಯು ಪಂಜರದಿಂದ ಪಾರಾಗಿ ಹೋಗಲು ಯತ್ನಿಸಿತು. ಆದರೆ ಸಾಧ್ಯವಾಗಲಿಲ್ಲ.

ಒಂದು ದಿನ ಒಬ್ಬ ಬ್ರಾಹ್ಮಣನು ಅದೇ ದಾರಿಯಿಂದ ಹಾದು ಹೋಗುತ್ತಿದ್ದನು.

ಹುಲಿ :—ಎಲೈ ದಯಾಳುವಾದ ಬ್ರಾಹ್ಮಣನೆ, ನನ್ನನ್ನು ಈ ಪಂಜರದಿಂದ ಹೊರಗೆ ಬಿಡು.

ಬ್ರಾಹ್ಮಣ :—ನಿನ್ನನ್ನು ಹೊರಗೆ ಬಿಡುವುದೆ ? ಛೇ ! ಛೇ ! ನೀನು ನನ್ನನ್ನು ತಿಂದು ಬಿಡುವೆ. ಪಂಜರವೇ ನಿನಗೆ ಯೋಗ್ಯವಾದ ಸ್ಥಳ. ಅಲ್ಲಿಯೇ ಇರು.



ಹುಲಿ :—ಛೇ ! ಎಂದಾದರೂ ಉಂಟೇ ? ಉಪಕಾರ ಮಾಡಿದವರನ್ನು ತಿಂದರೆ ಪಾಪ ಬರುವುದಿಲ್ಲವೆ ? ದಯಮಾಡಿ ನನ್ನನ್ನು ಹೊರಗೆ ಬಿಡು. ನಾನು ನಿನ್ನನ್ನು ತಿನ್ನುವುದಿಲ್ಲ.

ಬ್ರಾಹ್ಮಣನು ಒಂದು ಕ್ಷಣ ಯೋಚಿಸಿದನು. ಪ್ರಾಣಿಗಳಿಗೆ ದಯೆ ತೋರಿಸಬೇಕೆಂದು, ಪಂಜರದ ಬಾಗಿಲನ್ನು ತೆರೆದನು.

ಕೂಡಲೆ, ಆ ಹಸಿದ ಹುಲಿ ಹೊರಗೆ ಬಂದು, ಬ್ರಾಹ್ಮಣನನ್ನು ತಿನ್ನಲು ಅವನ ಮೇಲೆ ಜಿಗಿಯಿತು.

ಬ್ರಾಹ್ಮಣ :—ಅಯ್ಯೋ ಪಾಪಿ ! ನನ್ನನ್ನು ತಿನ್ನುವುದಿಲ್ಲವೆಂದು, ಈಗೊಂದು ನಿಮಿಷದ ಹಿಂದೆ ನೀನು ಮಾತು ಕೊಡಲಿಲ್ಲವೇ ?

ಹುಲಿ :—ಹೌದು, ಮಾತು ಕೊಟ್ಟಿದ್ದೆನು. ಮನುಷ್ಯರಾದ ನೀವೇ ಆಡಿದಂತೆ ನಡೆದುಕೊಳ್ಳುವುದಿಲ್ಲ. ಮನುಷ್ಯರೇ ಉಪಕಾರ ಮಾಡಿದ ವರಿಗೆ ಅಪಕಾರ ಮಾಡುತ್ತಾರೆ. ನಾನು ಏಕೆ ಮಾಡಬಾರದು ? ಬೇಕಾದರೆ ಸಮೀಪದಲ್ಲಿರುವ ಮಾವಿನಮರವನ್ನು ಕೇಳು.

ಬ್ರಾಹ್ಮಣ :—ಎಲೈ ಮಾವಿನಮರವೆ, ನೀನೇ ಹೇಳು, ಉಪಕಾರ ಮಾಡಿದವರನ್ನು ಯಾರಾದರೂ ಕೊಲ್ಲುತ್ತಾರೆಯೇ ?

ಮಾವಿನಮರ :—ಬ್ರಾಹ್ಮಣೋತ್ತಮಾ, ಮಾವಿನಮರಗಳು ನಿಮಗೆ ನೆರಳನ್ನು ಕೊಡುತ್ತವೆ. ರುಚಿಯಾದ ಹಣ್ಣುಗಳನ್ನು ಕೊಡುತ್ತವೆ. ಆದರೆ ನೀವು ಅವನ್ನು ಕಡಿದು ಸುಡುವಿರಿ. ಉಪಕಾರ ಮಾಡಿದವರನ್ನು ಕೊಲ್ಲಬೇಕೆಂದು ನೀವೇ ಕಲಿಸುವಿರಿ.

ಬಡಬ್ರಾಹ್ಮಣನು ಮಾವಿನಮರದ ಮಾತುಗಳನ್ನು ಕೇಳಿ " ಅಯ್ಯೋ ಇನ್ನೇನು ಮರಣವೇ ಗತಿ" ಎಂದು ಗೋಳಾಡಿದನು. ಅಷ್ಟರಲ್ಲಿ ಒಂದು ನರಿಯು ಅಲ್ಲಿಗೆ ಬಂದಿತು.

ಬ್ರಾಹ್ಮಣ :—ನರಿಯಣ್ಣಾ, ನಾನು ಈ ಹುಲಿಯನ್ನು ಪಂಜರದಿಂದ ಹೊರಗೆ ಬಿಟ್ಟಿದ್ದೇನೆ. ಈಗ ಅದು ನನ್ನನ್ನು ತಿನ್ನಬೇಕೆನ್ನುತ್ತದೆ ? ನೀನಾದರೂ ಹೇಳು, ಉಪಕಾರ ಮಾಡಿದವರನ್ನು ಕೊಲ್ಲಬಹುದೋ ?

ಬ್ರಾಹ್ಮಣನ ಸಂಕಟವನ್ನು ನೋಡಿ ನರಿಗೆ ಮರುಕ ಹುಟ್ಟಿತು.

ನರಿ :—ಬ್ರಾಹ್ಮಣೋತ್ತಮ, ನೀನು ಹೇಳಿದ ವಿಷಯ ನನಗೆ ಸರಿಯಾಗಿ ತಿಳಿಯಲಿಲ್ಲ. ಹುಲಿಯಣ್ಣಾ, ನೀನಾದರೂ ಏನೇನು ನಡೆಯಿತೆಂಬುದನ್ನು ಸರಿಯಾಗಿ ತಿಳಿಸು. ಆಮೇಲೆ ನಾನು ನನ್ನ ನಿರ್ಣಯವನ್ನು ಕೊಡುತ್ತೇನೆ.

ನರಿಯ ಈ ಮಾತಿಗೆ ಹುಲಿ ಒಪ್ಪಿಕೊಂಡಿತು.

ಹುಲಿ :—ನೋಡು ನರಿಯಣ್ಣಾ, ನಾನು ಮೊದಲು ಪಂಜರದಲ್ಲಿ ಹೀಗೆ ಇದ್ದೆನು ಎಂದು ಹೇಳಿ ಪಂಜರದಲ್ಲಿ ಹೋಗಿ ನಿಂತಿತು.

ಬ್ರಾಹ್ಮಣ :—ನಾನು ಬಂದಾಗ ಬಾಗಿಲು ಹೀಗೆ ಮುಚ್ಚಿತ್ತು ಎಂದು ಹೇಳಿ ಪಂಜರದ ಬಾಗಿಲನ್ನು ಮುಚ್ಚಿದನು.

ಹುಲಿ :—ಎಲೈ ಬ್ರಾಹ್ಮಣನೆ, ಇನ್ನು ಬಾಗಿಲನ್ನು ತೆರೆ.

ನರಿ :— (ನಗುತ್ತ) ಹುಲಿಯಣ್ಣಾ, ಈ ಬ್ರಾಹ್ಮಣನಿಗೆ ಸಾಯುವುದು ಬೇಕಿಲ್ಲ. ನೀನು ಪಂಜರದಲ್ಲಿಯೇ ಇರು. ಅದೇ ನಿನಗೆ ಯೋಗ್ಯವಾದ ಸ್ಥಳ.

ಬ್ರಾಹ್ಮಣನು ನರಿಯ ಉಪಕಾರವನ್ನು ನೆನಸುತ್ತ ಹೊರಟು ಹೋದನು.

ಅಭ್ಯಾಸ

(1) ಪ್ರಶ್ನೆಗಳು :—

1. ಬ್ರಾಹ್ಮಣನು ಹುಲಿಯ ಮಾತನ್ನು ಏಕೆ ನಂಬಿದನು ?
2. ಪಂಜರದ ಬಾಗಿಲನ್ನು ತೆರದ ಕೂಡಲೆ ಹುಲಿ ಏನು ಮಾಡಿತು ?
3. ಮಾವಿನಮರವು ಬ್ರಾಹ್ಮಣನಿಗೆ ಏನು ಹೇಳಿತು ?
4. ನರಿಯು ಬ್ರಾಹ್ಮಣನನ್ನು ಹೇಗೆ ಪಾರು ಮಾಡಿತು ?

(2) ಸರಿಯಾದ ಶಬ್ದಗಳನ್ನು ಆರಿಸಿ ತುಂಬಿರಿ :—

1. ಆ ಪಂಜರದೊಳಗಿಂದ ಹುಲಿಯು——ಹೋಗಲು ಯತ್ನಿಸಿತು.
   (ಓಡಿ, ಪಾರಾಗಿ, ಹಾರಿ)
2. ಉಪಕಾರ ಮಾಡಿದವರಿಗೆ——ಮಾಡಬಾರದು,
   (ದ್ರೋಹ, ಅಪಕಾರ, ಪಾಪ)
3. ಆ ಬ್ರಾಹ್ಮಣನ ಕಥೆಯನ್ನು ಕೇಳಿ ನರಿಗೆ——ಹುಟ್ಟಿತು.
   (ಮರುಕ. ಕ್ರೋಧ, ಪ್ರೀತಿ)
4. ಪ್ರಾಣಿಗಳಿಗೆ——ತೋರಬೇಕು.
   (ದಯೆ, ದಾರಿ, ಮಮತೆ)
5. ಬ್ರಾಹ್ಮಣನು ನರಿಯ——ನೆನಸುತ್ತ ಹೊರಟನು,
   (ಮೋಸವನ್ನು, ಜಾಣತನವನ್ನು, ಉಪಕಾರವನ್ನು)

(3) ಹೊಂದಿಸಿ ಬರೆಯಿರಿ :—

ಗಟ್ಟಿಯಾದ	—	ದಯೆ ತೋರು
ರುಚಿಯಾದ	—	ಗತಿ
ದಯಾಳುವಾದ	—	ಪಂಜರ
ಪ್ರಾಣಿಗಳಿಗೆ	—	ಬ್ರಾಹ್ಮಣ
ಮರಣವೇ	—	ಹಣ್ಣು

(4) 1. ಕಷ್ಟದಲ್ಲಿರುವ ನಿಮ್ಮ ಗೆಳೆಯರಿಗೆ ಸಹಾಯ ಮಾಡಿರಿ.
2. ನಿಮ್ಮೂರಿಗೆ ಬಂದ ಸರ್ಕಸನ್ನು ನೋಡಿರಿ.
3. ಪಂಜರದೊಳಗಿದ್ದ ಹುಲಿಯ ಚಿತ್ರವನ್ನು ತೆಗೆಯಿರಿ.
4. ನಿಮ್ಮ ವರ್ಗದಲ್ಲಿ ಈ ಕತೆಯನ್ನು ಅಭಿನಯಿಸಿರಿ.

---

15. ಅಜ್ಜಿ ಹೇಳಿದ ಸಂಗತಿ

ಶಂಕರ, ರಾಜು, ಶೈಲಜ ಮತ್ತು ಉಷೆ ಓಡುತ್ತ ಬಂದರು. ಅಜ್ಜಿಯನ್ನು ಮುತ್ತಿದರು. ಅಜ್ಜಿ ಎಲ್ಲರನ್ನು ಸಾಲಾಗಿ ಕೂಡಿಸಿದಳು. ಎಂದಿನಂತೆ ಹೊಸ ಹೊಸ ಸಂಗತಿಗಳನ್ನು ಹೇಳಲು ಪ್ರಾರಂಭಿಸಿದಳು.

ತಾವರೆಗೆರೆ ಎಂಬುದು ಒಂದು ಚಿಕ್ಕ ಹಳ್ಳಿ. ಅಲ್ಲಿಯ ಸಂಗನಬಸವನ ಜಾತ್ರೆ ಪ್ರಸಿದ್ಧ. ಶ್ರಾವಣಮಾಸದಲ್ಲಿ ಜಾತ್ರೆಯಾಗುತ್ತದೆ. ಸುತ್ತಮುತ್ತಲಿನ ಜನರು ಭಕ್ತಿಯಿಂದ ಸೇರುತ್ತಾರೆ. ಸಿದ್ಧನ ತಂದೆ ಸಂಗಪ್ಪ ಪ್ರತಿವರ್ಷ ಜಾತ್ರೆಗೆ ಹೋಗುತ್ತಿದ್ದನು. ಈ ಸಲವೂ ಜಾತ್ರೆಗೆ ಹೊರಡಲು ಚಕ್ಕಡಿ ಹೂಡಿದನು. ಸಿದ್ಧ, ಅವನ ತಂಗಿ ಶೀಲಾ ಮತ್ತು ಅವರ ತಾಯಿ ಚಕ್ಕಡಿಯಲ್ಲಿ ಕುಳಿತರು. ಶಿವಪುರದಿಂದ ತಾವರೆಗೆರೆಗೆ ಹೋದರು. ಜಾತ್ರೆಯಲ್ಲಿ ಜನರು ಗುಂಪುಗುಂಪಾಗಿ ಸೇರಿದ್ದರು. ಜನರ ಗುಂಪಿನಲ್ಲಿ ನಿಂತು ತೇರು ಎಳೆಯುವುದನ್ನು ನೋಡಿದರು. ಹಣ್ಣು ಮತ್ತು ಉತ್ತತ್ತಿಗಳನ್ನು ತೇರಿನ ಮೇಲೆ ಹಾರಿಸಿದರು. ಸಂಗನಬಸವನಿಗೆ ಕಾಯಿ ಕರ್ಪೂರ ಅರ್ಪಿಸಿದರು. ದೇವರ ದರ್ಶನ ಪಡೆದರು. ಜಾತ್ರೆಯಲ್ಲಿ ಆಟದ ಸಾಮಾನುಗಳನ್ನು ತಿಂಡಿತಿನಿಸುಗಳನ್ನು ಕೊಂಡರು.

ಅಷ್ಟರಲ್ಲಿ ಸಿದ್ಧನಿಗೆ ನೀರಡಿಕೆಯಾಯಿತು. ಸಂಗಪ್ಪ ತಿಂಡಿಯನ್ನು ಕೊಟ್ಟು ನೀರನ್ನು ಕುಡಿಸಿದನು. ರಾತ್ರಿ ಎಂಟು ಗಂಟೆಗೆ ಎಲ್ಲರೂ ತಮ್ಮ ಊರಿಗೆ ಹಿಂತಿರುಗಿ ಬಂದರು.

ಮರುದಿನ ಬೆಳಗ್ಗೆ ಸಿದ್ಧನಿಗೆ ಹೊಟ್ಟೆ ಹಿಂಡಿದಂತಾಗಿ ಭೇದಿ ಆರಂಭ ವಾಯಿತು. ವಾಂತಿಯೂ ಆಯಿತು. ಕೂಡಲೆ ರಾಮಣ್ಣ ಗುರುಗಳು ಬಂದರು. ಪ್ರಥಮ ಚಿಕಿತ್ಸೆ ಮಾಡಿದರು. ಕಾಸಿ ಆರಿಸಿದ ನೀರಿಗೆ ನಿಂಬೆ ಹಣ್ಣನ್ನು ಹಿಂಡಿ ಕುಡಿಸಿದರು. ನಾಲ್ಕು ಕಿಲೋಮೀಟರ ದೂರದಲ್ಲಿ ರುವ ರಾಂಪುರಕ್ಕೆ ಹೋಗಿ ವೈದ್ಯರನ್ನು ಕರೆದುಕೊಂಡು ಬಂದರು. ವೈದ್ಯರು ಸಿದ್ಧನ ಕಣ್ಣು ನಾಲಗೆ ಪರೀಕ್ಷಿಸುತ್ತ ಕೇಳಿದರು :—



ವೈದ್ಯ :— ಸಿದ್ಧ ಜಾತ್ರೆಯಲ್ಲಿ ಏನನ್ನು ತಿಂದೆ ?

ಸಿದ್ಧ :—ಮಿಠಾಯಿಯನ್ನು.

ವೈದ್ಯ :—ಎಲ್ಲಿಯ ನೀರನ್ನು ಕುಡಿದೆ ?

ಸಿದ್ಧ :—ಕೊಳದ ನೀರನ್ನು.

ವೈದ್ಯ :—ಜಾತ್ರೆಯೊಳಗೆ ಹೋಗುವ ಮೊದಲು ಚುಚ್ಚುಮದ್ದು ಹಾಕಿಸಿಕೊಂಡೆಯಾ ?

ಸಂಗಪ್ಪ :—ನೋವಾಗುತ್ತದೆಯೆಂದು ನಾವು ಯಾರೂ ಹಾಕಿಸಿ ಕೊಳ್ಳಲಿಲ್ಲ.

ವೈದ್ಯ :—ಸಿದ್ಧ ನಿನಗೆ ಎಲ್ಲಿ ನೋವಾಗುತ್ತದೆ ?

ಸಿದ್ಧ :—(ಹೊಟ್ಟೆಯನ್ನು ತೋರಿಸುತ್ತ) ಇಲ್ಲಿ, ಹೊಟ್ಟೆ ಹಿಂಡಿದಂತಾಗಿ ನೋಯುತ್ತಿದೆ.

ವೈದ್ಯ :—ಭೇದಿಯಾಗಿದೆಯೆ ?

ಸಂಗಪ್ಪ :—ಐದಾರು ಸಲ ಭೇದಿಯಾಗಿದೆ, ವಾಂತಿಯೂ ಆಗಿದೆ.

ವೈದ್ಯರಿಗೆ ಇದು ಕಾಲರಾ ರೋಗವೆಂದು ತಿಳಿಯಿತು. ಕುಡಿಯಲು ಹೇರಳವಾಗಿ ನೀರು ಕೊಡಲು ಹೇಳಿದರು. ಔಷಧ ಕೊಟ್ಟು ಪಥ್ಯವನ್ನು ಹೇಳಿ ಹೋದರು.

ವೈದ್ಯರ ಸಲಹೆಯಂತೆ ಮೂರು ದಿನಗಳವರೆಗೆ ಉಪಚಾರ ಮಾಡಿದ ನಂತರ ಸಿದ್ಧನಿಗೆ ಕಾಯಿಲೆ ವಾಸಿಯಾಯಿತು.

ಶಂಕರ :—ಅಜ್ಜಿ ಕಾಲರಾ ರೋಗ ಹೇಗೆ ಹರಡುತ್ತದೆ ?

ಅಜ್ಜಿ :—'ಅಶುದ್ಧವಾದ ನೀರಿನಿಂದ ಮತ್ತು ನೊಣಗಳಿಂದ ಕಾಲರಾ ರೋಗ ಹರಡುತ್ತದೆ.' ರೋಗಿಯ ಮಲ, ಮೂತ್ರ, ವಾಂತಿ ಮುಂತಾದವುಗಳ ಮೇಲೆ ಕುಳಿತ ನೊಣಗಳು ನಾವು ತಿನ್ನುವ ಆಹಾರ ವಸ್ತುಗಳ ಮೇಲೆ ಕೂಡುವುದರಿಂದ ಮತ್ತು ಅಂಥ ಆಹಾರವನ್ನು ನಾವು ಸೇವಿಸುವುದರಿಂದ ಇದು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ.

ರಾಜು :—ಈ ರೋಗ ಹರಡದಂತೆ ತಡೆಗಟ್ಟುವುದು ಹೇಗೆ ?

ಅಜ್ಜಿ :—ಕಾಲರಾ ವಿರುದ್ಧ ಚುಚ್ಚುಮದ್ದು ಹಾಕಿಸಿಕೊಳ್ಳಬೇಕು. ಮನೆಗಳಲ್ಲಿ ನೊಣಗಳು ಹೆಚ್ಚಾಗದಂತೆ ಫಿನಾಯಿಲ್ ಸಿಂಪಡಿಸಬೇಕು. ಈ ರೋಗ ಬಂದವರನ್ನು ಪ್ರತ್ಯೇಕವಾಗಿ ವೈದ್ಯರ ಸಲಹೆಯಂತೆ ಉಪಚರಿಸಬೇಕು.

ಶೈಲಜ :—ಹಾಗಾದರೆ ಕಾಲರಾ ಭಯಂಕರವಾದ ರೋಗ !

ಅಜ್ಜಿ :—ನಿಜ, ಅದು ಭಯಂಕರವಾದ ಅಂಟುರೋಗ. ನಾವೆಲ್ಲರು ಶುದ್ಧವಾದ ನೀರನ್ನು ಮತ್ತು ಶುಚಿಯಾದ ಆಹಾರವನ್ನು ಸೇವಿಸಬೇಕು. ನೊಣಗಳು ಕುಳಿತಿರುವ ತಿಂಡಿಯನ್ನು ತಿನ್ನಬಾರದು.

ಉಷೆ :—ಅಜ್ಜಿ, ನಾಳೆಯೂ ಒಂದು ಸಂಗತಿಯನ್ನು ಹೇಳಬೇಕು.

ಅಜ್ಜಿ :—ಹಾಗೆಯೆ ಆಗಲಿ. ನಾಳೆ ನೀವೆಲ್ಲರೂ ಮತ್ತೆ ಬನ್ನಿರಿ.

ಅಭ್ಯಾಸ

(1) ಪ್ರಶ್ನೆಗಳು :—

1. ಸಂಗನಬಸವನ ಜಾತ್ರೆಯನ್ನು ನೋಡಲು ಯಾರು ಹೋದರು ?
2. ಸಿದ್ಧನು ಜಾತ್ರೆಯಲ್ಲಿ ಏನೇನು ನೋಡಿದನು ?
3. ಕಾಲರಾ ರೋಗ ಹೇಗೆ ಹರಡುತ್ತದೆ ?
4. ಕಾಲರಾ ರೋಗವನ್ನು ತಡೆಗಟ್ಟುವುದು ಹೇಗೆ ?

(2) ಸರಿಯಾದ ಶಬ್ದಗಳನ್ನು ಆರಿಸಿ ತುಂಬಿರಿ :—

1. ಸಿದ್ಧನು ತಾವರೆಗೆರೆಗೆ——ನೋಡಲು ಹೋದನು. (ಜಾತ್ರೆಯನ್ನು, ಜನರನ್ನು)
2. ತಾವರೆಗೆರೆಯೆಂಬುದು ಒಂದು——. (ಚಿಕ್ಕಹಳ್ಳಿ, ದೊಡ್ಡಪಟ್ಟಣ)
3. ಸಂಗನಬಸವನ ಜಾತ್ರೆ——ಮಾಸದಲ್ಲಿ ಜರುಗುತ್ತದೆ. (ಶ್ರಾವಣ, ಭಾದ್ರಪದ)
4. ಕಾಲರಾರೋಗ——ಹರಡುತ್ತದೆ. (ಅಶುದ್ಧವಾದ ನೀರಿನಿಂದ, ಅಶುದ್ಧವಾದ ಗಾಳಿಯಿಂದ)

(3) ಸರಿಪಡಿಸಿ ಬರೆಯಿರಿ :—

1. ಸಿದ್ಧನು ಜಾತ್ರೆಗೆ ಹೋದಳು.
2. ಶೀಲಾ ಜಾತ್ರೆಗೆ ಹೋದನು.
3. ಅವರು ಆಟದ ಸಾಮಾನುಗಳನ್ನು ತಂದಳು.
4. ಶೀಲಾ ಆಟದ ಸಾಮಾನುಗಳನ್ನು ತಂದರು.

(4) ಶಬ್ದಗಳ ಅರ್ಥ :—

ದರ್ಶನ—ನೋಟ. ಪ್ರತ್ಯೇಕ—ಬೇರೆಬೇರೆ.

ಭಯಂಕರ—ಭಯ ಹುಟ್ಟಿಸುವ. ಪ್ರಥಮಚಿಕಿತ್ಸೆ—ಮೊದಲು ಮಾಡುವ ಉಪಚಾರ.

ಅಂಟುರೋಗ—ಒಬ್ಬರಿಂದ ಒಬ್ಬರಿಗೆ ಹಬ್ಬುವ ರೋಗ.

16. ಸುಂಟರ ಗಾಳಿ

ಏನಿದು ಧೂಳಿ ? ಓಹೋ ಗಾಳಿ !
ತಿರ್ರನೆ ಬಂತೈ ಸುಂಟರಗಾಳಿ ‖ ಪ ‖

ತೆಂಗಿನ ಮರಗಳು, ಕಂಗಿನ ಮರಗಳು,
ಬಾಳೆಯು ತಾಳೆಯು ಮಾವು ಹಲಸುಗಳು
ಎಲ್ಲಾ ತೂಗಿವೆ, ತಲೆಗಳ ಬಾಗಿವೆ !
ಏನಿದು ಧೂಳಿ ? ಓಹೋ ಗಾಳಿ !
ಸುಳಿಯುತ ಬಂತೈ ಸುಂಟರ ಗಾಳಿ !

ಕಣ್ಣನು ಮುಚ್ಚುತ ಬಾಲವನೆತ್ತಿ !
ದನ ಓಡುತ್ತಿದೆ ಎತ್ತಲೊ ಸುತ್ತಿ !
'ಅಂಬಾ' ಎನುತಿದೆ ಕರು ಬೆಂಬತ್ತಿ
ಏನಿದು ಧೂಳಿ ?

ಹೋಯಿತು ಹೆಂಚು ! ಹಾರಿತು ಹುಲ್ಲು !
ಬೊಬ್ಬೆಯೆ ಬೊಬ್ಬೆಯು ಭಯವೆಲ್ಲೆಲ್ಲು
ಕೇಳುವರಾರೀ ಮಂದಿಯು ಗುಲ್ಲು ?
ಏನಿದು ಧೂಳಿ ?

ಏನಿದು ಕೋಪ ? ಯಾರಲಿ ಶಾಪ ?
ಓಹೋ. ಹೆಚ್ಚಿತೆ ಭೂಮಿಯ ತಾಪ ?
ತಡೆಯುವರುಂಟೆ ? ಅಯ್ಯೋ ತಾಪ !
ಏನಿದು ಧೂಳಿ ?



ಬಾನಿನ ಬಯಲಿಂದಿಳಿಯುತ ಬಂತೋ ?
ಪಾತಾಳದ ಹೊಟ್ಟೆಯೊಳಗಡಗಿತ್ತೊ ?
ಕಡಲು ಕಡೆಯುತಲಿರೆ ಹುಟ್ಟಿತ್ತೊ ?
ಏನಿದು ಧೂಳಿ ? ಓಹೋ ಗಾಳಿ !
ಸುಳಿಯುತ ಬಂತೈ ಸುಂಟರ ಗಾಳಿ !

—ಕಯ್ಯಾರ ಕಿಞ್ಞಣ್ಣ ರೈ

ಅಭ್ಯಾಸ

(1) ಪ್ರಶ್ನೆಗಳು :—

1. ಸುಂಟರಗಾಳಿ ಏನನ್ನು ಎಬ್ಬಿಸಿತು ?
2. ಸುಂಟರಗಾಳಿ ಯಾವ ಯಾವ ಮರಗಳನ್ನು ತೂಗಿ ಬಾಗಿಸಿತು ?
3. ಸುಂಟರಗಾಳಿ ಬೀಸಿದಾಗ ದನ ಏನು ಮಾಡಿತು ?
4. ಸುಂಟರಗಾಳಿ ಬೀಸಿದಾಗ ಜನರು ಏಕೆ ಬೊಬ್ಬೆ ಹಾಕಿದರು ?
5. ಸುಂಟರಗಾಳಿ ಎಲ್ಲಿಂದ ಬಂತು ?

(2) ನೀವು ದಾರಿಯಲ್ಲಿ ಹೋಗುವಾಗ ಸುಂಟರಗಾಳಿ ಬೀಸಿದರೆ ಏನು ಮಾಡುವಿರಿ ?

(3) ಶಬ್ದಗಳ ಅರ್ಥ :— ಸುಂಟರಗಾಳಿ—ಸುತ್ತುತ್ತ ರಭಸದಿಂದ ಬೀಸುವ ಗಾಳಿ. ಬೆಂಬತ್ತು— ಹಿಂಬಾಲಿಸು. ಗುಲ್ಲು—ಗದ್ದಲ. ಬಾನು—ಆಕಾಶ. ಕಡಲು—ಸಮುದ್ರ. ಕಂಗು—ಅಡಿಕೆ.

17. ವಿಜಯದಶಮಿ

"ಆಡ ಪೋಗೋಣ, ಬಾರೋ ರಂಗಾ
ಕೂಡಿ ಯಮುನೆ ತೀರದಲ್ಲಿ ...."

ಎಂದು ಹಾಡುತ್ತ ಕೋಲು ಹಾಕುತ್ತ ಹೆಣ್ಣುಮಕ್ಕಳ ಗುಂಪೊಂದು ಗುಡಿಯ ಕಡೆಗೆ ನಡೆದಿತ್ತು. ಓಣಿಯಲ್ಲಿಂದ ಹೆಣ್ಣುಮಕ್ಕಳು, ಹುಡುಗರು ಅವಸರದಿಂದ ನೋಡಲು ಬಂದರು. ಕೋಲು ಹಾಕುವ ಮಕ್ಕಳು ಬಣ್ಣಬಣ್ಣದ ಹೊಸ ಬಟ್ಟೆಗಳನ್ನು ಧರಿಸಿದ್ದರು. ಮಧ್ಯದಲ್ಲಿ ಕೃಷ್ಣನ ಪಾತ್ರ ಹಾಕಿದ ಹುಡುಗಿಯೋರ್ವಳು ಕೃಷ್ಣನಂತೆ ಕೊಳಲನೂದುತ್ತ ಸಾಗಿದ್ದಳು. ಕಳೆದ ಎಂಟು ದಿನಗಳಿಂದ ಇಂಥ ಕಾರ್ಯಕ್ರಮಗಳು ಜರುಗಿದ್ದವು. ಜನರು ಇದನ್ನು ನೋಡಿ ಆನಂದಪಡುತ್ತಿದ್ದರು. ಈ ಗುಂಪು ಶಂಕರನ ಮನೆಯ ಮುಂದೆ ಬಂದಿತು. ಶಂಕರ, ರವಿ, ನಾಗರತ್ನ ಮತ್ತು ಅವರ ತಾಯಿ ಮನೆಯಿಂದ ಹೊರಗೆ ಬಂದರು.

ಶಂಕರ :—ಅಮ್ಮ, ಈ ಕೋಲಾಟದ ಮೆರವಣಿಗೆಯು ಎಲ್ಲಿಗೆ ಹೊರಟಿದೆ ?

ತಾಯಿ :—ಲಕ್ಷ್ಮೀನಾರಾಯಣನ ಗುಡಿಯ ಕಡೆಗೆ.

ರವಿ :—ಈ ಮೆರವಣಿಗೆಯನ್ನು ಏಕೆ ತೆಗೆದಿದ್ದಾರೆ ?

ತಾಯಿ :—ನವರಾತ್ರಿಯ ಹಬ್ಬದಲ್ಲಿ ಚಿಕ್ಕಮಕ್ಕಳು ಪಾತ್ರ ಹಾಕಿ ಕೋಲು ಹಾಕುವರು. ಹಾಡು ಹೇಳುವರು. ಗುಡಿಗೆ ಹೋಗಿ ಬರುವರು. ಇದು ಕೃಷ್ಣನ ಲೀಲೆಯನ್ನು ನೆನಪಿಗೆ ತರುತ್ತದೆ. ನಾಳೆಯೇ ಈ ಹಬ್ಬದ ಕೊನೆಯ ದಿನವು. ಅದನ್ನು ವಿಜಯದಶಮಿ ಎಂದು ಕರೆಯುವರು.

ನಾಗರತ್ನ :—ವಿಜಯದಶಮಿಯ ಹಬ್ಬವನ್ನು ಹೇಗೆ ಆಚರಿಸುತ್ತಾರೆ.

ತಾಯಿ :—ಅಂದು ಸರಸ್ವತಿಯ ಪೂಜೆಯನ್ನು, ಬನ್ನೀಗಿಡದ ಪೂಜೆಯನ್ನು ಮಾಡುತ್ತಾರೆ. ಸಾಯಂಕಾಲ ಜನರು ಬನ್ನಿಯನ್ನು ಒಬ್ಬರಿಗೊಬ್ಬರು ಕೊಟ್ಟು ಪ್ರೀತಿಯನ್ನು ತೋರಿಸುತ್ತಾರೆ.

ಶಂಕರ :—ಸರಸ್ವತಿಯ ಪೂಜೆಯನ್ನು ಏಕೆ ಮಾಡುತ್ತಾರೆ ?

ತಾಯಿ :—ಸರಸ್ವತಿಯು ವಿದ್ಯಾಧಿದೇವತೆಯು. ವಿದ್ಯಾಬುದ್ಧಿಗಳನ್ನು ದಯಪಾಲಿಸಲೆಂದು ಜನರು ಅವಳನ್ನು ಪೂಜಿಸುತ್ತಾರೆ.

ನಾಗರತ್ನ :—ಬನ್ನಿಯ ಗಿಡವನ್ನೇ ಏಕೆ ಪೂಜಿಸಬೇಕು ?

ತಾಯಿ :—ಹಿಂದಕ್ಕೆ ಪಾಂಡವರು ಅಜ್ಞಾತವಾಸದಲ್ಲಿದ್ದಾಗ ತಮ್ಮ ಆಯುಧಗಳನ್ನು ಬನ್ನೀಗಿಡದಲ್ಲಿ ಅಡಗಿಸಿಟ್ಟಿದ್ದರು. ಅಜ್ಞಾತವಾಸವು ಮುಗಿದ ಬಳಿಕ ಅವರು ಆ ವೃಕ್ಷವನ್ನು ಪೂಜಿಸಿ ತಮ್ಮ ಆಯುಧಗಳನ್ನು ತೆಗೆದುಕೊಂಡು ಯುದ್ಧಮಾಡಿದರು. ಅವರಿಗೆ ಜಯವು ದೊರೆಯಿತು.

ರವಿ :—ಬನ್ನೀಗಿಡದ ಪೂಜೆಯನ್ನು ಎಲ್ಲಿ ಮಾಡುತ್ತಾರೆ ?

ತಾಯಿ :—ಸಾಯಂಕಾಲ ಊರ ಹೊರಗೆ ಹೋಗಿ ಬನ್ನೀಗಿಡದ ಪೂಜೆಯನ್ನು ಮಾಡುತ್ತಾರೆ. ಹಾಗೆ ಪೂಜಿಸಿಬರುವದಕ್ಕೆ ಸೀಮೋಲ್ಲಂಘನವೆನ್ನುತ್ತಾರೆ.

ಶಂಕರ :—ಸೀಮೋಲ್ಲಂಘನವೆಂದರೇನು ?

ತಾಯಿ :—ವಿಜಯದಶಮಿ ಹಬ್ಬದ ದಿನ ಅರಸರು ತಮ್ಮ ಸೀಮೆಯನ್ನು ದಾಟಿ ಬೇರೆ ಪ್ರದೇಶಗಳನ್ನು ಗೆಲ್ಲಲು ಹೊರಡುತ್ತಿದ್ದರು. ಅಂದು ಹೊರಟರೆ ಗೆಲುವು ಸಿಗುವುದು ಖಂಡಿತ ಎಂಬ ಭಾವನೆಯುಂಟು. ಈ ರೀತಿ ನಾವು ನಮ್ಮ ಊರ ಹೊರಗೆ ಹೋಗಿ ಬನ್ನೀಗಿಡವನ್ನು ಪೂಜಿಸುವದರಿಂದ ನಮ್ಮ ಕಾರ್ಯಗಳಲ್ಲಿ ಜಯವು ದೊರೆಯುವದು ನಿಶ್ಚಿತ. ಹೀಗೆ ಸೀಮೆಯನ್ನು ದಾಟಿ ಹೋಗಿ ಬನ್ನೀಗಿಡವನ್ನು ಪೂಜಿಸುವದಕ್ಕೆ ಸೀಮೋಲ್ಲಂಘನವೆನ್ನುವರು.

ನಾಗರತ್ನ :—ಬನ್ನಿಯನ್ನು ಏಕೆ ಕೊಡುತ್ತಾರೆ ?

ತಾಯಿ :—ಬನ್ನಿಯನ್ನು ಬಂಗಾರವೆಂದು ಭಾವಿಸುತ್ತಾರೆ. ಬಂಗಾರವು ಬೆಲೆಯುಳ್ಳ ವಸ್ತುವು. ಅದನ್ನು ಪಡೆಯುವುದರಿಂದ ಯಾವ ರೀತಿಯ ಸಂತೋಷವಾಗುತ್ತದೆಯೋ ಅದೇ ರೀತಿಯ ಸಂತೋಷವಾಗಲೆಂದು ಬನ್ನಿಯನ್ನು ಕೊಡುತ್ತಾರೆ.

ಮಕ್ಕಳು :—ಹಾಗಾದರೆ, ನಾಳೆ ನಾವು ನಮ್ಮ ಗೆಳೆಯರ ಮನೆಗೆ ಹೋಗಿ ಬನ್ನೀ ಕೊಟ್ಟು ಬರುತ್ತೇವೆ.

ತಾಯಿ :—ಅವಶ್ಯವಾಗಿ ಹೋಗಿ ಬನ್ನಿ. ನಾನು ನಿಮಗೆ ಹೊಸ ಬಟ್ಟೆಗಳನ್ನು ಹಾಕಿ ಕಳಿಸುತ್ತೇನೆ.

ಬನ್ನಿ ತನ್ನಿ ಮಕ್ಕಳೆಲ್ಲ
ಗೆಳೆಯರೆಲ್ಲ ಕೂಡಿ ಬನ್ನಿ
ಪ್ರೀತಿಯಿಂದ ಹೋಗಿ ನೀವು
ವಿಜಯದಶಮಿ ಮಾಡಿರಿ.

ಅಭ್ಯಾಸ

(1) ಪ್ರಶ್ನೆಗಳು :—

1. ಕೋಲಾಟದ ಗುಂಪು ಎಲ್ಲಿಗೆ ನಡೆದಿತ್ತು ?
2. ನವರಾತ್ರಿಯ ಹಬ್ಬದ ಕೊನೆಯ ದಿನವನ್ನು ಯಾವ ಹೆಸರಿನಿಂದ ಕರೆಯುವರು ?
3. ಜನರು ವಿಜಯದಶಮಿಯನ್ನು ಹೇಗೆ ಆಚರಿಸುತ್ತಾರೆ ?
4. ವಿದ್ಯಾಧಿದೇವತೆಯು ಯಾರು ? ಅವಳನ್ನು ಏಕೆ ಪೂಜಿಸುತ್ತಾರೆ ?
5. ಸೀಮೋಲ್ಲಂಘನವೆಂದರೇನು ?

(2) ಕಂಸದಲ್ಲಿ ಕೊಟ್ಟ ಪದಗಳಲ್ಲಿ ಸರಿಯಾದ ಒಂದನ್ನು ಆಯ್ದು ಬಿಟ್ಟ ಸ್ಥಳವನ್ನು ತುಂಬಿರಿ :—

1. ಜನರು ಬನ್ನಿಯನ್ನು ———— ಎಂದು ಭಾವಿಸುವರು.
   (ಪ್ರೀತಿ, ಬಂಗಾರ, ತೊಪ್ಪಲು)
2. ಪಾಂಡವರು ತಮ್ಮ ——ಬನ್ನೀಗಿಡದಲ್ಲಿ ಅಡಗಿಸಿಟ್ಟಿದ್ದರು.
   (ಆಭರಣಗಳನ್ನು, ಆಯುಧಗಳನ್ನು, ಆಸನಗಳನ್ನು)
3. ಸರಸ್ವತಿಯು ——
   (ಧನಾಧಿದೇವತೆಯು, ವನದೇವತೆಯು, ವಿದ್ಯಾಧಿದೇವತೆಯು)
4. ದಸರೆಯ ಹಬ್ಬದ ದಿನ ನಾವು ಹೊರಟರೆ ನಮ್ಮ ಕಾರ್ಯಕ್ಕೆ —— ಸಿಗುವುದು ಖಂಡಿತ.
   (ಜಯವು, ಸಂಪತ್ತು, ಊರು)

(3) 1. ನಿಮಗೆ ಗೊತ್ತಿದ್ದ ಬೇರೆ ಕೋಲಾಟದ ಹಾಡನ್ನು ಹೇಳಿರಿ.
2. ಬೇರೆ ಊರಿನಲ್ಲಿರುವ ನಿಮ್ಮ ಮಿತ್ರನಿಗೆ ಬನ್ನಿಯನ್ನು ಕಳಿಸಲು ಒಂದು ಪಾಕೀಟನ್ನು ಸಿದ್ಧಗೊಳಿಸಿರಿ.

(4) ಶಬ್ದಗಳ ಅರ್ಥ :—

ಆಡ—ಆಡಲು.
ಪೋಗೋಣ—ಹೋಗೋಣ.
ಖಂಡಿತ—ನಿಶ್ಚಿತ.
ದಯಪಾಲಿಸು—ಕೊಡು
ಭಾವಿಸು—ತಿಳಿ.
ಸೀಮೋಲ್ಲಂಘನ—ಗಡಿಯನ್ನು ದಾಟುವುದು.
ಅಜ್ಞಾತವಾಸ — ಇನ್ನೊಬ್ಬರಿಗೆ ಗೊತ್ತಾಗದಂತೆ ಇರುವುದು.
ವೃಕ್ಷ — ಗಿಡ.

18. ವಿಮಾನ ನಿಲ್ದಾಣ

ಗುರುಗಳು ವರ್ಗದ ಕೋಣೆಯೊಳಗೆ ಪಾಠ ಹೇಳುತ್ತಿದ್ದರು. ಹೊರಗೆ ಆಕಾಶದಲ್ಲಿ ವಿಮಾನ ಹಾರಾಡುವ ಸದ್ದಾಯಿತು. ಮಕ್ಕಳೆಲ್ಲರು "ವಿಮಾನ", "ವಿಮಾನ" ಎಂದು ಕೂಗಿದರು. ಗುರುಗಳು ಮಕ್ಕಳೊಂದಿಗೆ ಹೊರಗೆ ಬಂದರು. ವಿಮಾನ ಹಾರಾಡುವುದನ್ನು ತೋರಿಸಿದರು. ವಿಮಾನ ಬಹಳ ಹತ್ತಿರದಲ್ಲಿ ಹಾರಾಡುತ್ತಿತ್ತು. ಸ್ವಲ್ಪ ಸಮಯದ ನಂತರ ನಿಧಾನವಾಗಿ ಕೆಳಗೆ ಇಳಿಯುತ್ತಿದ್ದಂತೆ ಮರೆಯಾಯಿತು.



ಸಿದ್ಧ :—ಗುರುಗಳೇ, ಈಗ ವಿಮಾನ ಎಲ್ಲಿಗೆ ಹೋಯಿತು ?

ಗುರುಗಳು :—ಬೆಂಗಳೂರು ವಿಮಾನ ನಿಲ್ದಾಣಕ್ಕೆ.

ಶಂಕರ :—ವಿಮಾನ ನಿಲ್ದಾಣವೆಂದರೆ ಏನು ಗುರುಗಳೆ ?

ಗುರುಗಳು :—ವಿಮಾನಗಳು ನಿಲ್ಲುವ ಸ್ಥಳ.

ಶೈಲಜ :—ಗುರುಗಳೇ, ನಮ್ಮನ್ನು ವಿಮಾನ ನಿಲ್ದಾಣಕ್ಕೆ ಕರೆದುಕೊಂಡು ಹೋಗಿರಿ. ವಿಮಾನಗಳನ್ನು ಹತ್ತಿರದಿಂದ ನೋಡಬೇಕೆಂಬ ಆಸೆ.

ಗುರುಗಳು :—ಆಗಲಿ, ರವಿವಾರ ವಿಮಾನ ನಿಲ್ದಾಣಕ್ಕೆ ಹೋಗೋಣ. ನಾಳೆ ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಪತ್ರ ಬರೆದು ಅಪ್ಪಣೆ ಪಡೆಯುವೆ.

ಮಕ್ಕಳೆಲ್ಲರು ಹಿರಿಹಿರಿ ಹಿಗ್ಗಿದರು.

ರವಿವಾರ ಮಕ್ಕಳೆಲ್ಲರು ಬಸ್ಸಿನಲ್ಲಿ ಕುಳಿತು ಗುರುಗಳೊಂದಿಗೆ ಬೆಂಗಳೂರು ವಿಮಾನ ನಿಲ್ದಾಣ ನೋಡಲು ಹೊರಟರು. ಬಸ್ಸು ನಿಲ್ದಾಣದ ಹತ್ತಿರ ನಿಂತಿತು. ಮಕ್ಕಳೆಲ್ಲರು ಕೆಳಗೆ ಇಳಿದರು. ಗುರುಗಳ ಹಿರಿತನದಲ್ಲಿ ನಿಲ್ದಾಣದ ಒಳಗೆ ಹೋದರು. ವಿಮಾನಗಳು ಇಳಿಯುವ ಬಯಲಿನಲ್ಲಿ ಕೆಲವು ವಿಮಾನಗಳು ನಿಂತಿದ್ದವು.

ಜಯಶ್ರೀ :—ಗುರುಗಳೇ, ವಿಮಾನಕ್ಕೆ ಗಾಲಿಗಳಿವೆಯಲ್ಲ ?

ಗುರುಗಳು :—ಹೌದು. ಗಾಲಿಗಳ ಸಹಾಯದಿಂದ ವಿಮಾನವು ಮೋಟಾರು ಓಡಿದಂತೆ ಓಡಿ, ಮೇಲಕ್ಕೆ ಹಾರುತ್ತದೆ. ಕೆಳಗೆ ಇಳಿಯುವಾಗ ನಿಧಾನವಾಗಿ ಇಳಿದು ಗಾಲಿಗಳ ಮೇಲೆ ನಿಲ್ಲುತ್ತದೆ.

ವಸಂತ :–ಮೇಲೆ ಹಾರಾಡುವಾಗ ಗಾಲಿಗಳು ಕಾಣಿಸುವುದಿಲ್ಲವಲ್ಲ?

ಗುರುಗಳು : --ಹೌದು, ಮೇಲೆ ಹಾರಿದಾಗ ಗಾಲಿಗಳು ಒಳಗೆಸೇರಿ ಕೊಳ್ಳುತ್ತವೆ. ಕೆಳಗೆ ಇಳಿಯುವಾಗ ಹೊರಗೆ ಕಾಣಿಸುತ್ತವೆ. ವಿಮಾನ ಚಾಲಕನು ಯಂತ್ರದ ಸಹಾಯದಿಂವ ಈ ರೀತಿ ಮಾಡುತ್ತಾನೆ.

ಅಷ್ಟರಲ್ಲಿ ವಿಮಾನವೊಂದು ಹಾರಾಡುತ್ತ ಬಂದು ನಿಧಾನವಾಗಿ ಕೆಳಗಿಳಿಯಿತು. ಸೇವಕರು ಏಣಿಯೊಂದನ್ನು ವಿಮಾನದ ಬಾಗಿಲಿಗೆ ಜೋಡಿಸಿದರು. ಪ್ರಯಾಣಿಕರು ಒಬ್ಬೊಬ್ಬರಾಗಿ ಇಳಿದರು. ವಿಮಾನ ನಿಲ್ದಾಣದ ಅಧಿಕಾರಿ ಮುನಿಸ್ವಾಮಿ ಮಕ್ಕಳನ್ನು ವಿಮಾನದ ಹತ್ತಿರ ಕರೆದುಕೊಂಡು ಹೋದನು.

ರಮೇಶ :—ಅಬ್ಬಾ! ವಿಮಾನ ಎಷ್ಟು ದೊಡ್ಡದಾಗಿದೆ !

ಸತೀಶ :—ಓಹೋ, ಇದರ ರೆಕ್ಕೆಗಳು ಎಷ್ಟು ಉದ್ದವಾಗಿವೆ !

ಮಕ್ಕಳೆಲ್ಲ ವಿಮಾನದ ಸುತ್ತ ಓಡಾಡಿದರು. "ಇನ್ನು ನಾವು ವಿಮಾನದ ಒಳಗೆ ಹೋಗೋಣ. ಒಬ್ಬೊಬ್ಬರಾಗಿ ಏಣಿಯನ್ನು ಹತ್ತಿ ಬರಬೇಕು" ಎಂದು ಮುನಿಸ್ವಾಮಿ ಹೇಳಿದನು. ಮಕ್ಕಳು ಆನಂದ ದಿಂದ ಕುಣಿದಾಡಿದರು. ಏಣಿಯನ್ನು ಹತ್ತಿ ಒಳಗೆ ಹೋದರು. ವಿಮಾನದ ಒಳಗೆ ಸುಂದರವಾದ ಬಣ್ಣಬಣ್ಣದ ಆಸನಗಳನ್ನು ಸಾಲಾಗಿ ಜೋಡಿಸಿದ್ದರು.

ಸಿದ್ಧ :—ಗುರುಗಳೇ,ಆಸನಗಳಿಗೆ ಪಟ್ಟಿಗಳನ್ನು ಏಕೆ ಜೋಡಿಸಿದ್ದಾರೆ?

ಗುರುಗಳು :—ಪ್ರಯಾಣಿಕರ ನಡುವಿಗೆ ಈ ಪಟ್ಟಿಗಳನ್ನು ಕಟ್ಟುತ್ತಾರೆ. ಇದರಿಂದ ವಿಮಾನ ಮೇಲಕ್ಕೆ ಹಾರುವಾಗ ಕೆಳಕ್ಕೆ ಇಳಿಯುವಾಗ ಆಸನದಿಂದ ಬೀಳುವುದಿಲ್ಲ.

ಶಂಕರ :—ಗುರುಗಳೇ, ವಿಮಾನ ಮೇಲಕ್ಕೆ ಹಾರಿದಂತೆಲ್ಲ ಕುಳಿತವರಿಗೆ ಭಯವಾಗುವುದಿಲ್ಲವೆ ?

ಗುರುಗಳು :—ಹೌದು, ಮೊದಲ ಸಲ ಪ್ರಯಾಣ ಮಾಡುವವರಿಗೆ ಭಯವೆನಿಸುತ್ತದೆ. ಒಮ್ಮೊಮ್ಮೆ ವಾಂತಿಯೂ ಆಗುತ್ತದೆ. ಆದರೆ ಪ್ರಯಾಣಿಕರ ಯೋಗಕ್ಷೇಮವನ್ನು ನೋಡಿಕೊಳ್ಳಲು ಸೇವಕರಿರುತ್ತಾರೆ. ಕಾಫಿ, ಟೀ, ಹಣ್ಣುಗಳನ್ನು ಒದಗಿಸುತ್ತಾರೆ.

ಶೈಲಜ :—ಗುರುಗಳೇ, ಜನರು ವಿಮಾನದಲ್ಲಿ ಏಕೆ ಪ್ರಯಾಣ ಮಾಡುತ್ತಾರೆ.

ಗುರುಗಳು :—ಬಹಳ ದೂರದ ಪ್ರವಾಸವನ್ನು ಬಹಳ ಕಡಿಮೆ ಸಮಯದಲ್ಲಿ ಸುಖಕರವಾಗಿ ಮಾಡುವುದಕ್ಕಾಗಿ.

ಜಯಶ್ರೀ :–ಗುರುಗಳೇ, ವಿಮಾನ ಸಂಚಾರ ಅಪಾಯಕಾರಿಯಲ್ಲವೆ?

ಗುರುಗಳು :—ವಿಜ್ಞಾನಯುಗದಲ್ಲಿ ನಾವು ಮುಂದುವರೆದಿದ್ದೇವೆ. ವಿಮಾನಗಳ ಸಂಚಾರದಲ್ಲಿ ಸಾಕಷ್ಟು ಮುಂಜಾಗ್ರತೆಯನ್ನು ವಹಿಸು ತ್ತಿದ್ದಾರೆ.

ಎಲ್ಲರೂ ವಿಮಾನದಿಂದ ಕೆಳಗಿಳಿದರು. ನಿಲ್ದಾಣದ ಒಳಗೆ ಬಂದರು. ಗುರುಗಳು ಮುನಿಸ್ವಾಮಿಯನ್ನು ವಂದಿಸಿದರು. ಮಕ್ಕಳೆಲ್ಲರು ಬಸ್ಸಿನಲ್ಲಿ ಕುಳಿತು ಮನೆಗೆ ಹಿಂತಿರುಗಿದರು.

ಅಭ್ಯಾಸ

(1) ಪ್ರಶ್ನೆಗಳು :—

1. ವಿಮಾನ ನಿಲ್ದಾಣವೆಂದರೇನು ?
2. ಮಕ್ಕಳೆಲ್ಲರು ಏಕೆ ಹಿರಿಹಿರಿ ಹಿಗ್ಗಿದರು ?
3. ವಿಮಾನದ ಆಸನಗಳಿಗೆ ಪಟ್ಟಿಗಳನ್ನು ಏಕೆ ಜೋಡಿಸಿರುತ್ತಾರೆ ?
4. ಜನರು ವಿಮಾನದಲ್ಲಿ ಏಕೆ ಪ್ರಯಾಣ ಮಾಡುತ್ತಾರೆ ?

(2) 1. ವಿಮಾನದ ಚಿತ್ರ ತೆಗೆದು ಬಣ್ಣ ಹಾಕಿರಿ.
2. ವಿಮಾನದಂತೆ ಸದ್ದು ಮಾಡುತ್ತ ಓಡಿರಿ.

(3) ಬಿಟ್ಟ ಶಬ್ದಗಳನ್ನು ತುಂಬಿರಿ :--

1. ವಿಮಾನದ ಒಳಗೆ ಏರಲು——ಸಹಾಯ ಬೇಕು.
2. ವಿಮಾನ——ಮೇಲೆ ನಿಲ್ಲುತ್ತದೆ.
3. ವಿಮಾನದ——ಉದ್ದವಾಗಿವೆ.
4. ವಿಮಾನಗಳ ಸಂಚಾರದಲ್ಲಿ——ವಹಿಸುತ್ತಾರೆ.

(4) ಶಬ್ದಗಳ ಅರ್ಥ :—

ಸಂಚಾರ—ಪ್ರವಾಸ. ತಿರುಗಾಟ.
ಯೋಗಕ್ಷೇಮ—ಆರೈಕೆ. ಉಪಚಾರ.

———

19. ನದೀದೇವತೆ

ಒಂದು ಊರಿನಲ್ಲಿ ಒಬ್ಬ ಸಾಹುಕಾರನಿದ್ದನು. ಅವನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಅಣ್ಣನು ಒಳ್ಳೆಯವನು. ತಮ್ಮನು ಕೆಟ್ಟವನಾಗಿದ್ದನು. ಅವರಿಬ್ಬರ ಸ್ವಭಾವದಲ್ಲಿ ಅಜಗಜಾಂತರವಿತ್ತು. ತಮ್ಮನು ತಪ್ಪು ಮಾಡುತ್ತಿದ್ದನು. ಆದರೆ ಅಣ್ಣನು ತಮ್ಮನನ್ನು ಬೈಯುತ್ತಿರಲಿಲ್ಲ.

ಒಂದು ದಿನ ಅವರ ತಂದೆ ಸತ್ತುಹೋದನು. ಅಂದಿನಿಂದ ಅಣ್ಣನು ಮನೆಯ ಯಜಮಾನನಾದನು. ಇದರಿಂದ ತಮ್ಮನಿಗೆ ಅಸಮಾಧಾನ ವಾಯಿತು. ಇವರ ತಂದೆಗೆ ಒಬ್ಬರಿಂದ ಸಾವಿರ ಹೊನ್ನು ಬರಬೇಕಾಗಿತ್ತು. ಅದನ್ನು ತರಲು ಅಣ್ಣತಮ್ಮಂದಿರಿಬ್ಬರೂ ಹೋದರು. ಅವನು ಸಾವಿರ ಹೊನ್ನನ್ನು ಒಂದು ಚೀಲದಲ್ಲಿಟ್ಟು ಕೊಟ್ಟನು. ಅದನ್ನು ತೆಗೆದುಕೊಂಡು ಅವರಿಬ್ಬರೂ ತಮ್ಮ ಊರಿಗೆ ಹೊರಟರು. ದಾರಿಯಲ್ಲಿ ಒಂದು ಹೊಳೆ ದಾಟಬೇಕಾಯಿತು. ದೋಣಿ ಆಚೆಯ ದಡದಿಂದ ಬರಲಿ ಎಂದು ದಡದಲ್ಲಿ ಕುಳಿತರು. ತಾವು ತಂದ ಬುತ್ತಿಯನ್ನು ಬಿಚ್ಚಿಕೊಂಡು ತಿಂದರು. ಅಣ್ಣನು ತಿನ್ನುವ ಮೊದಲು ಎರಡು ತುತ್ತುಗಳನ್ನು ನದಿಯಲ್ಲಿ ಹಾಕಿದನು. ಮೀನುಗಳು ಅದನ್ನು ತಿಂದವು. ಇದನ್ನು ನೋಡಿ ನದೀ ದೇವತೆಗೆ ಸಂತೋಷವಾಯಿತು. ಆದರೆ ತಮ್ಮನು ತನ್ನ ಬುತ್ತಿಯನ್ನು ಒಂದು ಅಗಳೂ ಬಿಡದ ಹಾಗೆ ತಿಂದನು.



ಅಷ್ಟರಲ್ಲಿ ದೋಣಿ ಬಂದಿತು. ಅಣ್ಣನು ನೀರು ಕುಡಿಯಲು ಹೋದನು. ತಮ್ಮನ ಮನಸ್ಸಿನಲ್ಲಿ ಕೆಟ್ಟ ವಿಚಾರ ಮೂಡಿತು. ಹೊನ್ನಿನ ಚೀಲದ ಹಾಗೆಯೇ ಇದ್ದ ಇನ್ನೊಂದು ಚೀಲದಲ್ಲಿ ಮರಳನ್ನು ತುಂಬಿ ಕೊಂಡನು. ಹೊನ್ನಿನ ಚೀಲವು ಅಣ್ಣನಿಗೆ ಕಾಣದಂತೆ ತನ್ನ ಹತ್ತಿರ ಇಟ್ಟುಕೊಂಡನು. ದೋಣಿ ಹೊರಟಿತು. ದೋಣಿ ನಡು ಹೊಳೆಗೆ

ಬಂದೊಡನೆ, ತಮ್ಮನು ಏನೋ ನೆವ ಮಾಡಿ ಅವಸರದಲ್ಲಿ ಉಸುಕಿನ ಚೀಲವನ್ನು ಹೊಳೆಯಲ್ಲಿ ಬೀಳಿಸಿದನು. "ಅಯ್ಯೋ ! ಹೊನ್ನಿನ ಚೀಲ ನೀರಿನಲ್ಲಿ ಬಿದ್ದು ಹೋಯಿತು !" ಎಂದು ಬೊಬ್ಬೆ ಹಾಕಿದನು.

"ದುಃಖಿಸಬೇಡ, ಕೈಮೀರಿ ಹೋಯಿತು. ಇರಲಿ, ಬಿಡು ; ಹೋದದ್ದು ಹೋಗಲಿ" ಎಂದು ಅಣ್ಣನು ಸಮಾಧಾನ ಮಾಡಿದನು.

ತಮ್ಮನು ಮನೆಗೆ ಹೋಗಿ ಬಚ್ಚಿಟ್ಟುಕೊಂಡು ತಂದ ಚೀಲವನ್ನು ಬಿಚ್ಚಿದನು. ಅದನ್ನು ಕಂಡು ಅವನಿಗೆ ಹುಚ್ಚು ಹಿಡಿದ ಹಾಗಾಯಿತು. ತಾನು ಹೊಳೆಯಲ್ಲಿ ಬೀಳಿಸಿದ್ದು ಉಸುಕಿನ ಚೀಲ ಎಂದುಕೊಂಡಿದ್ದನು. ಆದರೆ ನಿಜವಾಗಿಯೂ ಬಿದ್ದದ್ದು ಹೊನ್ನಿನ ಚೀಲವಾಗಿತ್ತು. ಅದನ್ನು ನದೀದೇವತೆ ಕಂಡಿದ್ದಳು. ಆ ನದೀದೇವತೆ ಆ ಹೊನ್ನಿನ ಚೀಲವನ್ನು ಒಂದು ದೊಡ್ಡ ಮೀನು ನುಂಗುವಂತೆ ಮಾಡಿದಳು.

ಮೀನುಗಾರರು ಆ ಮೀನನ್ನು ಹಿಡಿದರು. ಅಣ್ಣತಮ್ಮಂದಿರಿದ್ದ ಊರಿಗೆ ಮಾರಲು ಬಂದರು. ಅಣ್ಣನು ಆ ಮೀನನ್ನು ಕೊಂಡು ಕೊಂಡನು. ಮನೆಯಲ್ಲಿ ಅದನ್ನು ಕತ್ತರಿಸಿದನು. ಅದರ ಹೊಟ್ಟೆ ಯಲ್ಲಿ ಹೊನ್ನಿನ ಚೀಲ ಸಿಕ್ಕಿತು. ಅಣ್ಣನಿಗೆ ಸಂತೋಷವಾಯಿತು. ತಮ್ಮನಿಗೆ ಅರ್ಧ ಕೊಟ್ಟು ಬರೋಣ ಎಂದು ತಮ್ಮನ ಮನೆಗೆ ಹೊರಟನು.

ದಾರಿಯಲ್ಲಿ ನದೀದೇವತೆ ಪ್ರತ್ಯಕ್ಷಳಾದಳು.

ನದೀದೇವತೆ :—ನಿನ್ನ ತಮ್ಮ ನಿನಗೆ ಮೋಸ ಮಾಡಿರುವನು. ಅವನಿಗೆ ಏನೂ ಕೊಡಬೇಡ.

ಅಣ್ಣ :—ತಮ್ಮ ಮೋಸ ಮಾಡಿದನೆಂದರೆ ಅಣ್ಣನಾದ ನಾನೂ ಮೋಸ ಮಾಡಬೇಕೆ ? ಏನೇ ಆದರೂ ನಾವು ಸಹೋದರರಲ್ಲವೇ ?

ಅಣ್ಣನು ನದೀದೇವತೆಯ ಮಾತನ್ನು ಒಪ್ಪದೆ, ತಮ್ಮನಿಗೆ ಅರ್ಧ ಹೊನ್ನುಗಳನ್ನು ಕೊಟ್ಟನು.

ತಮ್ಮನ ಮನಸ್ಸು ಬದಲಾಯಿತು. ತನ್ನ ತಪ್ಪಿಗೆ ಕ್ಷಮೆ ಕೇಳಿದನು. ದೇವತೆಗೂ ಸಂತೋಷವಾಯಿತು.

ಅಣ್ಣತಮ್ಮಂದಿರಿಬ್ಬರೂ ಪ್ರೀತಿಯಿಂದಿದ್ದರು. ತಮ್ಮನು ಅಂದಿನಿಂದ ಒಳ್ಳೆಯ ಕೆಲಸಗಳನ್ನು ಮಾಡಲು ತೊಡಗಿದನು.

ಅಭ್ಯಾಸ

(1) ಪ್ರಶ್ನೆಗಳು :—

1. ತಮ್ಮನಿಗೆ ಏಕೆ ಅಸಮಾಧಾನವಾಯಿತು ?
2. ಅಣ್ಣನು ತಾನು ತಿನ್ನುವುದಕ್ಕೆ ಮೊದಲು ಏನು ಮಾಡಿದನು ?
3. ಹೊನ್ನಿನ ಚೀಲ ಬಿದ್ದುದನ್ನು ಯಾರು ಕಂಡರು ?
4. ತಮ್ಮನಿಗೆ ಏಕೆ ಹುಚ್ಚು ಹಿಡಿದ ಹಾಗಾಯಿತು ?
5. ತಮ್ಮನ ಮನಸ್ಸು ಏಕೆ ಬದಲಾಯಿತು ?

(2) ಸರಿ ಅಥವಾ ತಪ್ಪು ಎಂಬುದನ್ನು ಬರೆಯಿರಿ :—

	ಸರಿ	ತಪ್ಪು
1. ಅಣ್ಣತಮ್ಮಂದಿರ ಸ್ವಭಾವದಲ್ಲಿ ಅಜಗಜಾಂತರವಿತ್ತು.	——	——
2. ತಮ್ಮನು ಬುತ್ತಿಯನ್ನು ತಿನ್ನುವ ಮೊದಲು ಎರಡು ತುತ್ತನ್ನು ನದಿಯಲ್ಲಿ ಹಾಕಿದನು.	——	——
3. ಹೊನ್ನಿನ ಚೀಲ ಹೊಳೆಯಲ್ಲಿ ಬಿದ್ದುದಕ್ಕೆ ಅಣ್ಣನಿಗೆ ಹುಚ್ಚು ಹಿಡಿದ ಹಾಗಾಯಿತು.	——	——
4. ಅಣ್ಣನು ನದೀದೇವತೆಯ ಮಾತನ್ನು ಒಪ್ಪಲಿಲ್ಲ.	——	——
5. ಅಣ್ಣನು ತಮ್ಮನಿಗೆ ಅರ್ಧ ಹೊನ್ನುಗಳನ್ನು ಕೊಡಲು ಒಪ್ಪಲಿಲ್ಲ.	——	——

(3) 1. ದೋಣಿಯ ಚಿತ್ರ ತೆಗೆಯಿರಿ.
2. ಕಾಗದಗಳಿಂದ ದೋಣಿ ಮಾಡುವುದನ್ನು ಕಲಿಯಿರಿ.
3. ನಿಮಗೆ ಗೊತ್ತಿರುವ ಅಣ್ಣತಮ್ಮಂದಿರ ಪ್ರೀತಿಯ ಒಂದು ಕತೆಯನ್ನು ಹೇಳಿರಿ.

(4) ಶಬ್ದಗಳ ಅರ್ಥ :—

ಮರಳು—ಉಸುಕು
ಪ್ರತ್ಯಕ್ಷ—ಕಣ್ಣಿಗೆ ಕಾಣುವುದು
ಅಜ—ಆಡು. ಮೇಕೆ
ಗಜ—ಆನೆ
ಹೊನ್ನು—ಚಿನ್ನ
ಬೊಬ್ಬೆಹಾಕು—ಕೂಗಿಕೊಳ್ಳು

20. ಕನ್ನಡ

ಕನ್ನಡ ಎನೆ ಕುಣಿದಾಡುವುದೆನ್ನೆದೆ.
ಕನ್ನಡ ಎನೆ ಕಿವಿ ನಿಮಿರುವುದು !
ಕಾಮನ ಬಿಲ್ಲನು ಕಾಣುವ ಕವಿಯೊಲು
ತೆಕ್ಕನೆ ಮನ ಮೈ ಮರೆಯುವುದು.

ಕನ್ನಡ ! ಕನ್ನಡ ! ಹಾ. ಸವಿಗನ್ನಡ !
ಕನ್ನಡದಲಿ ಹರಿ ಬರೆಯುವನು ;
ಕನ್ನಡದಲಿ ಹರ ತಿರಿಯುವನು !
ಕನ್ನಡದಲ್ಲಿಯೆ ಬಿನ್ನಹಗೈದೊಡೆ
ಹರಿ ವರಗಳ ಮಳೆ ಕರೆಯುವನು !

ಹರ ಮುರಿಯದೆ ತಾ ಪೊರೆಯುವನು !
ಬಾಳುವುದೇತಕೆ ?   ನುಡಿ, ಎಲೆ ಜೀವ
ಸಿರಿಗನ್ನಡದಲಿ ಕವಿತೆಯ ಹಾಡೆ !
ಸಿರಿಗನ್ನಡದೇಳಿಗೆಯನು ನೋಡೆ !
ಕನ್ನಡ ತಾಯಿಯ ಸೇವೆಯ ಮಾಡೆ !

—**ಕುವೆಂಪು**

ಅಭ್ಯಾಸ

(1) ಪ್ರಶ್ನೆಗಳು :—

1. ಯಾವ ಭಾಷೆಯಲ್ಲಿ ಕೇಳಿದರೆ ದೇವರು ವರಗಳನ್ನು ಕೊಡುತ್ತಾನೆ ?
2. ಕಾಮನಬಿಲ್ಲನ್ನು ಕಂಡ ಕೂಡಲೆ ನಮ್ಮ ಮನಸ್ಸಿಗೆ ಏನಾಗುತ್ತದೆ ?
3. ನಾವು ಏತಕ್ಕಾಗಿ ಬಾಳಬೇಕೆಂದು ಕವಿ ಹೇಳುತ್ತಾನೆ ?

(2) ಈ ಪದ್ಯವನ್ನು ನಿಮ್ಮ ಗೆಳೆಯರ ಮುಂದೆ ಓದಿ ಆನಂದಪಡಿರಿ.

(3) ಬಿಟ್ಟ ಶಬ್ದಗಳನ್ನು ತುಂಬಿರಿ :—

1. ಕನ್ನಡ ಎನೆ——
2. ಕನ್ನಡದಲಿ——ಬರೆಯುವನು.
3. ಹರ ಮುರಿಯದೆ ತಾ— —

(4) ಶಬ್ದಗಳ ಅರ್ಥ :—

ನಿಮಿರು— ಹಿಗ್ಗು
ತೆಕ್ಕನೆ— ಕೂಡಲೆ
ಪೊರೆ— ಕಾಪಾಡು
ಮುರಿ— ಕೊಲ್ಲು
ತಿರಿ— ಬೇಡು
ಏಳಿಗೆ— ಅಭಿವೃದ್ಧಿ
ಬಿನ್ನಹ— ಪ್ರಾರ್ಥನೆ

---

21. ಗಣಪತಿಯ ಹಬ್ಬ

ಢಂ ! ಢಂ !! ಎಲ್ಲಿ ನೋಡಿದಲ್ಲಿ ಪಟಾಕಿಗಳ ಸಪ್ಪಳವೇ ಸಪ್ಪಳ ! ಮಕ್ಕಳು, ದೊಡ್ಡವರು ಕೂಡಿಯೇ ಪಟಾಕಿಗಳನ್ನು ಹಾರಿಸುತ್ತಿದ್ದಾರೆ. ತಂಡತಂಡವಾಗಿ ಜನರು ಊದುತ್ತ, ಬಾರಿಸುತ್ತ ಪೇಟೆಯಿಂದ ಗಣಪತಿಯನ್ನು ತರುತ್ತಿದ್ದಾರೆ. ಇಂದು ಭಾದ್ರಪದ ಶುದ್ಧ ಚತುರ್ಥಿಯು.



ಈ ಚತುರ್ಥಿಯು ದಿನವೇ ಗಣಪತಿಯ ಹಬ್ಬವು ಪ್ರಾರಂಭವಾಗುವುದು. ಗಣಪತಿಯನ್ನು ತರುವ ಮೊದಲು ಮನೆಗಳಿಗೆ ಸುಣ್ಣ ಬಣ್ಣಗಳನ್ನು ಹಚ್ಚುತ್ತಾರೆ. ಗಣಪತಿಯನ್ನು ಕೂಡಿಸುವ ಸ್ಥಳದಲ್ಲಿ ಮಂಟಪವನ್ನು ಕಟ್ಟುತ್ತಾರೆ. ತರತರದ ಬಣ್ಣದ ಆಟಿಗೆಗಳನ್ನು ಮುಂದಿಟ್ಟು ಸಿಂಗರಿಸುತ್ತಾರೆ. ಚತುರ್ಥಿಯಿಂದ ಅಷ್ಟಮಿಯವರೆಗೆ ಐದು ದಿನ ಗಣಪತಿಯ ಹಬ್ಬವನ್ನು ಆಚರಿಸುವರು.

ಬೇವೂರ ಶಾಲೆಯ ಮಕ್ಕಳು ಬೆಳಿಗ್ಗೆ ಶಾಲೆಯಲ್ಲಿ ಕೂಡಿದರು. ಎಲ್ಲರೂ ಶಾಲೆಯ ಸಮವಸ್ತ್ರವನ್ನು ಧರಿಸಿದ್ದರು. ಗಣಪತಿಯನ್ನು ಪೇಟೆಯಿಂದ ತರುವುದಕ್ಕಾಗಿ ಒಂದು ಚಕ್ಕಡಿಯನ್ನು ಸಿಂಗರಿಸಿದರು.

ಏಳನೆಯ ವರ್ಗದವರು ಡೋಲು, ತಮ್ಮಟೆ, ತಾಳವಾದ್ಯಗಳನ್ನು ಬಾರಿಸುತ್ತಿದ್ದರು. ಉಳಿದವರು ಲೇಜೀಮು ಹಾಕುತ್ತ ನಡೆದರು. ಸಜ್ಜನ ಸಂಗಮೇಶನು ಉತ್ಸಾಹದಿಂದ ಚಕ್ಕಡಿಯನ್ನು ಹೊಡೆಯುತ್ತಿದ್ದನು. ಪೇಟೆಯಿಂದ ಮೆರವಣಿಗೆಯಲ್ಲಿ ಗಣಪತಿಯನ್ನು ತೆಗೆದುಕೊಂಡು ಬಂದರು. ಪ್ರಾರ್ಥನಾ ಮಂದಿರದಲ್ಲಿ ಸುಂದರವಾಗಿ ಸಿಂಗರಿಸಿದ ಮಂಟಪದಲ್ಲಿ ಗಣಪತಿಯನ್ನು ಕೂಡಿಸಿದರು. ಜೋಯಿಸರ ಶ್ಯಾಮನು ಪೂಜೆಯನ್ನು ಮಾಡಿದನು. ಎಲ್ಲರೂ ಗಣಪತಿಗೆ ಕೆಂಪು ಅಕ್ಕಿಕಾಳುಗಳನ್ನು ಹಾಕಿ ನಮಸ್ಕಾರ ಮಾಡಿದರು. ಗುರುಗಳು ಎಲ್ಲರಿಗೂ ಪ್ರಸಾದವನ್ನು ಹಂಚಿದರು.

ಗುರುಗಳು ಅಂದು ಮಧ್ಯಾಹ್ನದಲ್ಲಿ ಮೃತ್ಯುಂಜಯ ಸ್ವಾಮಿಗಳ ಭಾಷಣವನ್ನು ಏರ್ಪಡಿಸಿದ್ದರು. ಸಮಯಕ್ಕೆ ಸರಿಯಾಗಿ ಎಲ್ಲ ಬಾಲಕರು, ಗುರುಗಳು ಶಾಲೆಗೆ ಬಂದರು. ಮುಖ್ಯಾಧ್ಯಾಪಕರು ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು.

"ಗಣಪತಿಯು ಶಿವಪಾರ್ವತಿಯರ ಮಗನು. ತಾಯಿಯ ಅಚ್ಚುಮೆಚ್ಚಿನ ಮಗನು. ಪ್ರಾಣ ಕೊಟ್ಟು ತಾಯಿಯ ಮಾತನ್ನು ನಡಿಸಿಕೊಟ್ಟವನು. ಆತನು ವಿದ್ಯಾಧಿದೇವತೆಯು. ಆತನನ್ನು ಭಕ್ತಿಯಿಂದ ಪೂಜಿಸಿದರೆ ಕೆಲಸದಲ್ಲಿ ಬರುವ ವಿಘ್ನಗಳು ದೂರಾಗುವವು. ಗಣಪತಿಯ ರೂಪವು

ಬಲು ವಿಚಿತ್ರ. ಆತನಿಗೆ ದೊಡ್ಡ ಹೊಟ್ಟೆಯಿದೆ, ಆನೆ ಮುಖವಿದೆ. ಆತನಿಗಿರುವ ಹಲ್ಲು ಒಂದೇ. ಆತನ ವಾಹನವು ಮೂಷಕವು. ಅದ್ದರಿಂದ ಗಣಪತಿಗೆ ಲಂಬೋದರ. ಗಜಾನನ. ಏಕದಂತ. ಮೂಷಕ ವಾಹನ ಎಂಬ ಬೇರೆ ಬೇರೆ ಹೆಸರುಗಳಿವೆ. ಒಂದು ಸಲ ಗಣಪತಿಯು ಇಲಿಯ ಮೇಲೆ ಕುಳಿತು ಹೊರಟಾಗ ಚಂದ್ರನು ಅವನನ್ನು ನೋಡಿ ನಕ್ಕನಂತೆ. ಆಗ ಗಣಪತಿಯು ಚತುರ್ಥಿಯ ದಿನ ನಿನ್ನನ್ನು ಯಾರು ನೋಡುವರೋ ಅವರಿಗೆ ಏನಾದರೂ ಒಂದು ಅಪವಾದವು ಬರಲಿ ಎಂದು ಶಾಪವನ್ನು ಕೊಟ್ಟನು. ಶ್ಯಮಂತಕೋಪಾಖ್ಯಾನವೆಂಬ ಒಂದು ಅಪವಾದ ತಗುಲಿದ ಸುಂದರ ಕಥೆಯಿದೆ. ಆ ಕಥೆಯನ್ನು ನೀವು ಓದಿ ತಿಳಿದುಕೊಳ್ಳಿರಿ. ಗಣಪತಿಯು ನಿಮಗೆ ವಿದ್ಯಾಬುದ್ಧಿಗಳನ್ನು ದಯಪಾಲಿಸಲಿ " ಎಂದು ಹೇಳಿ ಅತಿಥಿಗಳು ತಮ್ಮ ಭಾಷಣವನ್ನು ಮುಗಿಸಿದರು. ಗಿರೀಶನೆಂಬ ವಿದ್ಯಾರ್ಥಿಯು ವಂದನಾರ್ಪಣೆ ಮಾಡಿದನು.

ಗುರುಗಳು, ಮಕ್ಕಳು ಕೂಡಿ ಕಾವ್ಯಗಾಯನ. ನೃತ್ಯ. ನಾಟಕ, ವಸ್ತು ಪ್ರದರ್ಶನ ಮೊದಲಾದ ಕಾರ್ಯಕ್ರಮಗಳನ್ನು ಒಂದೊಂದಾಗಿ ಐದು ದಿನವೂ ಜರುಗಿಸಿದರು. ಬೇವೂರ ಶಾಲೆಯ ಮಕ್ಕಳ ಗಜಾನನೋತ್ಸವವು ಎಲ್ಲರಿಗೂ ಸಂಭ್ರಮವನ್ನುಂಟುಮಾಡಿತು.

ಅಭ್ಯಾಸ

(1) ಪ್ರಶ್ನೆಗಳು :—

1 ಗಣಪತಿಯ ಹಬ್ಬವು ಎಂದು ಪ್ರಾರಂಭವಾಗುವುದು ?

2. ಗಣಪತಿಯನ್ನು ತರುವ ಮೊದಲು ಯಾವ ಕೆಲಸಗಳನ್ನು ಮಾಡುತ್ತಾರೆ ?

3. ಗಣಪತಿಯು ಯಾರ ಮಗನು ?

4. ಗಣಪತಿಗಿರುವ ಬೇರೆ ಬೇರೆ ಹೆಸರುಗಳು ಯಾವುವು ?

5. ಬೇವೂರ ಶಾಲೆಯ ಮಕ್ಕಳು ಯಾವ ಯಾವ ಕಾರ್ಯಕ್ರಮಗಳನ್ನು ಜರುಗಿಸಿದರು ?

(2) ಕೆಳಗಿನ ಪಟ್ಟಿಯಲ್ಲಿಯ ಪದಗಳನ್ನು ಹೊಂದಿಸಿ ಬರೆಯಿರಿ :—

ಗಣಪತಿಯು	ವಂದನಾರ್ಪಣೆ ಮಾಡಿದನು.
ಸಂಗಮೇಶನು	ಗಣಪತಿಗಿರುವ ಹೆಸರು
ಏಕದಂತ	ಉತ್ಸಾಹದಿಂದ ಚಕ್ಕಡಿಯನ್ನು
ಗಿರೀಶನು	ಹೊಡೆಯುತ್ತಿದ್ದನು.
	ಶಿವಪಾರ್ವತಿಯರ ಮಗನು.

(3) 1. ಅರಳೆಯಿಂದ ಇಲಿಯನ್ನು ಮಾಡಿರಿ.

2. ಶ್ಯಮಂತಕೋಪಾಖ್ಯಾನ ಕಥೆಯನ್ನು ಓದಿ ತಿಳಿದುಕೊಳ್ಳಿರಿ.

(4) ಶಬ್ದಗಳ ಅರ್ಥ :—

ಅಚ್ಚುಮೆಚ್ಚಿನ—ಪ್ರೀತಿಯ	ಚಕ್ಕಡಿ—ಗಾಡಿ
ವಿಘ್ನ—ಆತಂಕ. ಅಡ್ಡಿ	ಮೂಷಕ—ಇಲಿ
ದಂತ—ಹಲ್ಲು	ಉದರ—ಹೊಟ್ಟೆ
ಆನನ—ಮುಖ	

ಶ್ಯಮಂತಕೋಪಾಖ್ಯಾನ—ಶ್ಯಮಂತಕವೆಂಬ ಮಣಿಯ ಕಥೆ.

---

22. ಹನುಮಣ್ಣನ ಸಾಹಸ

ಶನಿವಾರ ಮಧ್ಯಾಹ್ನ ಶಾಲೆಗೆ ಬಿಡುವು. ವಾಮನ ಗುರುಗಳು ಹುಡುಗರಿಗೆ ಮಹಾಲಿಂಗನ ದಿಬ್ಬವನ್ನು ತೋರಿಸಲು ಕರೆದುಕೊಂಡು ಹೋದರು. ಮೂರನೆಯ ತರಗತಿಯ ರವಿಯೂ ಅವರ ಜೊತೆಗೆ ಹೋದನು. ಮಹಾಲಿಂಗನ ದಿಬ್ಬ ಬಹಳ ಕಡಿದಾದುದು. ದಿಬ್ಬದ ತುದಿಯಲ್ಲಿ ಒಂದು ದೊಡ್ಡ ಬಂಡೆ. ಆ ಬಂಡೆಯನ್ನು ಹತ್ತುವುದೆಂದರೆ ಅದೊಂದು ಸಾಹಸದ ಕೆಲಸ.

ಹುಡುಗರು ಶ್ರಮಪಟ್ಟು ಮಹಾಲಿಂಗನ ದಿಬ್ಬವನ್ನು ಹತ್ತಿದರು. ಅವರು ದಿಬ್ಬದ ನೆತ್ತಿಯ ಮೇಲೆ ಕುಳಿತು ವಿಶ್ರಮಿಸಿಕೊಂಡರು. ತಾವು ಕಟ್ಟಿ ತಂದ ತಿಂಡಿ ತಿನಸುಗಳನ್ನು ಹಂಚಿಕೊಂಡರು. ದಿಬ್ಬದ ನೆತ್ತಿಯಿಂದ ಕಾಣಿಸುವ ಸುಂದರ ನೋಟವನ್ನು ಕಂಡು ಹಿಗ್ಗಿದರು. ಕೇಕೆ

ಹಾಕಿ ಕುಣಿದಾಡಿದರು. ದಿಬ್ಬದ ನೆತ್ತಿಯ ಮೇಲೆಲ್ಲ ಓಡಾಡಿದರು. ಕೆಲವರು ಬಂಡೆಯನ್ನು ಹತ್ತಲು ಹೋದರು. ವಾಮನ ಗುರುಗಳು "ಮಕ್ಕಳೆ, ಬಂಡೆಯನ್ನು ಹತ್ತಬೇಡಿರಿ. ಹತ್ತಲು ಹೋಗಿ ಜಾರಿ ಬಿದ್ದೀರಿ. ನೀವೆಲ್ಲರು ಇಲ್ಲಿ ಬನ್ನಿರಿ. ನಾನು ನಿಮಗೆ ತೇನಸಿಂಗನು ಹಿಮಾಲಯವನ್ನು ಹತ್ತಿದ ಸಾಹಸದ ಕಥೆಯನ್ನು ಹೇಳುವೆನು" ಎಂದರು.

ಮಕ್ಕಳೆಲ್ಲರು ಬಂದು ವಾಮನ ಗುರುಗಳ ಸುತ್ತ ಕುಳಿತರು. ಗುರುಗಳು ಅವರಿಗೆ ತೇನಸಿಂಗನ ಸಾಹಸದ ಕಥೆಯನ್ನು ಹೇಳ ತೊಡಗಿದರು. ಅವರು ಕಥೆಯನ್ನು ಹೇಳುತ್ತಿದ್ದಾಗ ರವಿ ಮತ್ತು ಅವನ ಗೆಳೆಯ ರಂಗ ಅಲ್ಲಿಂದ ಮೆಲ್ಲನೆ ನುಸುಳಿದರು. ಅವರಿಬ್ಬರು ಇನ್ನೊಂದು ಮಗ್ಗುಲಿನಿಂದ ಆ ದೊಡ್ಡ ಬಂಡೆಯನ್ನು ಹತ್ತುವ ಸಾಹಸ ಮಾಡಿದರು. ತೇನಸಿಂಗನ ಕಥೆಯನ್ನು ಕೇಳುವುದರಲ್ಲಿ ಮೈಮರೆತ ಹುಡುಗರಿಗೆ ಅವರಿಬ್ಬರು ಹೊರಟುಹೋದುದು ಗೊತ್ತಾಗಲಿಲ್ಲ.

ಸ್ವಲ್ಪ ವೇಳೆ ಕಳೆಯಿತು. ರವಿಯ ಗೆಳೆಯ ರಂಗನು ಓಡಿ ಬಂದು "ಗುರುಗಳೇ, ಗುರುಗಳೇ !" ಎಂದು ಗಾಬರಿಯಿಂದ ಕೂಗಿದನು.

ಗುರುಗಳು :—ರಂಗ, ಏಕೆ ಓಡಿಬರುತ್ತೀಯೆ ? ಏನಾಯಿತು ?

ರಂಗ :—ಗುರುಗಳೆ, ರವಿಯು ಬಿದ್ದುಬಿಟ್ಟನು !

ಗುರುಗಳು :—ಎಲ್ಲಿ ! ಹೇಗೆ ?

ರಂಗ :—ರವಿಯು ಬಂಡೆಯ ಮೇಲೆ ಹತ್ತಿದನು. ಬಂಡೆಯ ಅಂಚಿನಲ್ಲಿದ್ದ ಸೀತೆಹೂವನ್ನು ಕೀಳಲು ಹೋದನು. ಅಲ್ಲಿಂದ ಜಾರಿ ಬಿದ್ದುಬಿಟ್ಟನು.

ಗುರುಗಳು ಮತ್ತು ಹುಡುಗರು ಅವಸರದಿಂದ ರಂಗನ ಜೊತೆಗೆ ಹೋದರು. ರವಿಯು ಬಂಡೆಯಿಂದ ಜಾರಿದ್ದನು. ಪ್ರಪಾತಕ್ಕೆ ಬೀಳದಂತೆ ಅವನು ಮಧ್ಯದಲ್ಲಿ ತುರುಚಿಗಿಡವೊಂದನ್ನು ಬಿಗಿಯಾಗಿ ಹಿಡಿದುಕೊಂಡಿದ್ದನು. ಜಾರಿ ಬಿದ್ದುದರಿಂದ ಅವನ ಮೈಕೈಗಳಿಗೆ ಗಾಯವಾಗಿದ್ದುವು. ಅವನು ದಿಬ್ಬದ ನೆತ್ತಿಯಿಂದ ನಾಲ್ಕೈದು ಅಡಿ

ಕೆಳಗಿದ್ದನು. ಅಲ್ಲಿಗಿಳಿದು ಅವನನ್ನು ಎತ್ತುವುದೆಂದರೆ ಅದು ಅಪಾಯದ ಕೆಲಸವಾಗಿತ್ತು. ಗುರುಗಳು ಅವನನ್ನು ಎತ್ತುವುದು ಹೇಗೆಂದು ಚಿಂತಿಸಿದರು.

ಅಷ್ಟರಲ್ಲಿ ಐದನೆಯ ತರಗತಿಯ ಹನುಮಣ್ಣನು ಮುಂದೆ ಬಂದು "ಗುರುಗಳೆ, ಇದು ಯಾವ ದೊಡ್ಡ ಕೆಲಸ ? ನಾನು ರವಿಯನ್ನು ಎತ್ತಿ ತರುತ್ತೇನೆ" ಎಂದು ಹೇಳಿದನು. ಅವನು ಗುರುಗಳ ಅನುಮತಿಗೆ ಕಾಯಲಿಲ್ಲ. ಕಿರುಗಲ್ಲುಗಳ ಮೇಲೆ ಎಚ್ಚರಿಕೆಯಿಂದ ಹೆಜ್ಜೆಯಿಡುತ್ತಾ, ರವಿಯಿದ್ದಲ್ಲಿಗೆ ಹೋದನು. ಆಚೆ ಈಚೆ ಚಾಚಿದ ಎರಡು ಕಲ್ಲುಗಳ ಮೇಲೆ ಕಾಲಿಟ್ಟು ರವಿಯನ್ನು ಹಿಡಿದುಕೊಂಡನು.

ರವಿಯನ್ನು ಹಿಡಿದುಕೊಂಡಿದ್ದೇನೋ ಆಯಿತು. ಆದರೆ ಅವನನ್ನು ಮೇಲೆ ಎತ್ತಿಕೊಂಡು ಬರುವುದು ಹನುಮಣ್ಣನಿಂದ ಆಗದ ಕೆಲಸ. ಅಷ್ಟರಲ್ಲಿ ಗುರುಗಳು ತಮ್ಮ ತಲೆಯ ಮೇಲಿದ್ದ ಮುಂಡಾಸನ್ನು ತೆಗೆದು ಬಿಚ್ಚಿದರು. ಅವರು ಅದರ ಒಂದು ತುದಿಯನ್ನು ಕೈಯಲ್ಲಿ ಹಿಡಿದು ಇನ್ನೊಂದು ತುದಿಯನ್ನು ಹನುಮಣ್ಣನಿದ್ದಲ್ಲಿಗೆ ಎಸೆದರು. ಅವನು ಮುಂಡಾಸನ್ನು ರವಿಯ ಸೊಂಟಕ್ಕೆ ಕಟ್ಟಿದನು. ದಿಬ್ಬದ ಮೇಲಿದ್ದ ಗುರುಗಳು ಮತ್ತು ಇತರ ಮಕ್ಕಳು ಇನ್ನೊಂದು ತುದಿಯನ್ನು ಹಿಡಿದು ಮೆಲ್ಲನೆ ಎಳೆದರು. ಅವರು ರವಿಯನ್ನು ಮೇಲೆತ್ತಿ ಅಪಾಯದಿಂದ ಪಾರು ಮಾಡಿದರು. ಹನುಮಣ್ಣನು ಒಂದು ಕಲ್ಲಿನಿಂದ ಇನ್ನೊಂದು ಕಲ್ಲಿಗೆ ಮೆಲ್ಲನೆ ಹೆಜ್ಜೆಯಿಡುತ್ತ ಮೇಲೇರಿ ಬಂದನು.

ಗುರುಗಳು ಹನುಮಣ್ಣನ ಈ ಕೆಲಸದಿಂದ ಸಂತೋಷಪಟ್ಟರು. ಹುಡುಗರೆಲ್ಲರು ಅವನ ಧೈರ್ಯವನ್ನು ಹೊಗಳಿದರು. ಗುರುಗಳು ಅವನ ಬೆನ್ನು ತಟ್ಟಿ "ಹನುಮಣ್ಣ, ಈ ಹೊತ್ತು ನೀನು ರವಿಯ ಜೀವವನ್ನು ಉಳಿಸಿದೆ. ನಿನ್ನ ಧೈರ್ಯ ನನಗೆ ಮೆಚ್ಚುಗೆಯಾಯಿತು.

ನೀನು ರಾಮಾಯಣದ ಹನುಮಂತನ ಹಾಗೆ ಧೈರ್ಯವಂತನೂ, ಸಾಹಸವಂತನೂ ಆಗು " ಎಂದು ಹೊಗಳಿ ಹರಸಿದರು.

ಅಭ್ಯಾಸ

(1) ಪ್ರಶ್ನೆಗಳು :–

1. ವಾಮನ ಗುರುಗಳು ಹುಡುಗರನ್ನು ಎಲ್ಲಿಗೆ ಕರೆದುಕೊಂಡು ಹೋದರು ?
2. ರವಿಯು ಬಂಡೆಯನ್ನು ಹತ್ತಿದುದು ಗುರುಗಳಿಗೂ, ಇತರ ಹುಡುಗರಿಗೂ ಏಕೆ ಗೊತ್ತಾಗಲಿಲ್ಲ ?
3. ರವಿಯು ಯಾವ ಅಪಾಯಕ್ಕೆ ಒಳಗಾದನು ?
4. ಹನುಮಣ್ಣನು ರವಿಯನ್ನು ಹೇಗೆ ಅಪಾಯದಿಂದ ಪಾರುಮಾಡಿದನು?

2) ಕೆಳಗಿನ ಮಾತುಗಳನ್ನು ಯಾರು ಹೇಳಿದರು ? ಯಾರಿಗೆ ಹೇಳಿದರು ?

1. ಗುರುಗಳೆ, ರವಿಯು ಬಿದ್ದುಬಿಟ್ಟನು.
2. ಗುರುಗಳೆ, ಇದು ಯಾವ ದೊಡ್ಡ ಕೆಲಸ ?
3. ನೀನು ರಾಮಾಯಣದ ಹನುಮಂತನ ಹಾಗೆ ಧೈರ್ಯವಂತನೂ, ಸಾಹಸವಂತನೂ ಆಗು.

(3) ಕೆಳಗಿನ ವಾಕ್ಯಗಳಲ್ಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಅರ್ಥ ಕೊಡುವ ಪದಗಳನ್ನು ತುಂಬಿರಿ :—

1. ಹುಡುಗರು ಮಹಾಲಿಂಗನ ದಿಬ್ಬವನ್ನು——.
(ಹತ್ತಿದೆವು, ಹತ್ತಿದಿರಿ, ಹತ್ತಿದರು)

2. ರವಿಯು ಬಂಡೆಯಿಂದ ಜಾರಿ——. (ಬಿದ್ದಳು, ಬಿದ್ದನು, ಬಿದ್ದಿತು)

(4) 1. ತೇನಸಿಂಗನು ಹಿಮಾಲಯವನ್ನು ಹತ್ತಿದ ಸಾಹಸದ ಕಥೆಯನ್ನು ಓದಿ ತಿಳಿದುಕೊಳ್ಳಿರಿ.

2. ಕನ್ನಡನಾಡಿನ ಸಾಹಸ ಪುರುಷರ ಹೆಸರುಗಳನ್ನು ಬರೆಯಿರಿ.

(5) ಶಬ್ದಗಳ ಅರ್ಥ :—

ನುಸುಳು—ತಪ್ಪಿಸಿಕೊಂಡು ಹೋಗು, ಸೀತೆಹೂವು—ಒಂದು ಬಗೆಯ ಹೂವು. ಪ್ರಪಾತ—ಆಳವಾದ ಹಳ್ಳ ಅಥವಾ ಗುಂಡಿ, ಅನುಮತಿ—ಅಪ್ಪಣೆ. ಮುಂಡಾಸು—ಪೇಟ, ರುಮಾಲು.

---

23. ಮೋಸಹೋದ ಕಳ್ಳರು

ತೆನಾಲಿ ರಾಮಕೃಷ್ಣನು ಒಬ್ಬ ಹಾಸ್ಯಗಾರನು. ಅವನು ವಿಜಯನಗರದ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದನು. ರಾಜನನ್ನು ಅವನು ತನ್ನ ಹಾಸ್ಯದ ಮಾತುಗಳಿಂದ ಸಂತೋಷಗೊಳಿಸುತ್ತಿದ್ದನು. ರಾಜನು ಅವನಿಗೆ ಆಗಾಗ ರತ್ನ ಆಭರಣಗಳನ್ನು ಬಹುಮಾನವಾಗಿ ಕೊಡುತ್ತಿದ್ದನು. ರಾಜನು ಕೊಟ್ಟ ಬಹುಮಾನಗಳಿಂದ ರಾಮಕೃಷ್ಣನು ದೊಡ್ಡ ಶ್ರೀಮಂತನಾದನು.

ಆ ಊರಿನಲ್ಲಿ ನಾಲ್ಕು ಜನ ಪ್ರಸಿದ್ಧ ಕಳ್ಳರಿದ್ದರು. ಅವರು ರಾಮಕೃಷ್ಣನ ಹಣವನ್ನು ದೋಚಬೇಕೆಂದು ಆಲೋಚನೆ ಮಾಡಿದರು. ಒಂದು ದಿನ ರಾತ್ರಿಯ ವೇಳೆಯಲ್ಲಿ ಕಳ್ಳರು ರಾಮಕೃಷ್ಣನ ಮನೆಯ ಹಿತ್ತಲಿಗೆ ಹೋದರು. ಅಲ್ಲಿ ಅಡಗಿ ಕುಳಿತು ಕಳವು ಮಾಡಲು ಹೊಂಚು ಹಾಕತೊಡಗಿದರು.

ರಾಮಕೃಷ್ಣನು ಆ ರಾತ್ರಿ ಊಟ ಮುಗಿಸಿ ಕೈ ತೊಳೆಯಲು ಹಿತ್ತಲಿಗೆ ಹೋದನು. ಅಲ್ಲಿ ಅವನಿಗೆ ಕಳ್ಳರ ಸುಳಿವು ಸಿಕ್ಕಿತು. ಅವನು ಮನೆಯೊಳಗೆ ಬಂದು ಹೆಂಡತಿಯನ್ನು ಕರೆದನು. "ನೋಡು, ಊರೊಳಗೆ ಕಳ್ಳರ ಹಾವಳಿ ಹೆಚ್ಚಾಗಿದೆ. ಅವರು ಇಂದಲ್ಲದಿದ್ದರೆ ನಾಳೆಯಾದರೂ ನಮ್ಮ ಮನೆಯೊಳಗೆ ನುಗ್ಗುತ್ತಾರೆ. ನಮ್ಮ ಹಣ ಮತ್ತು ಒಡವೆಗಳನ್ನು ದೋಚಿಕೊಂಡು ಹೋಗುತ್ತಾರೆ. ಆದುದರಿಂದ ನಾವೊಂದು ಉಪಾಯ ಮಾಡೋಣ'' ಎಂದು ಹೇಳಿದನು.

ಹೆಂಡತಿಯು ಯಾವ ಉಪಾಯ ?' ಎಂದು ಕೇಳಿದಳು. ರಾಮಕೃಷ್ಣನು "ಒಂದು ಪೆಟ್ಟಿಗೆಯಲ್ಲಿ ನಮ್ಮ ಮನೆಯೊಳಗಿರುವ ರತ್ನ ಆಭರಣ ಒಡವೆ ವಸ್ತುಗಳನ್ನೆಲ್ಲ ತುಂಬೋಣ. ಆ ಪೆಟ್ಟಿಗೆಯನ್ನು ಬಾವಿಯೊಳಗೆ ಇಳಿಯ ಬಿಡೋಣ. ನಮ್ಮ ಒಡವೆ ವಸ್ತುಗಳು ಎಲ್ಲಿವೆ ಎಂದು ಪತ್ತೆ ಹಚ್ಚಲು ಯಾರಿಗೂ ಸಾಧ್ಯವಿಲ್ಲ'' ಎಂದು ಹೇಳಿದನು.

ಹೆಂಡತಿಯು ಒಂದು ದೊಡ್ಡ ಪೆಟ್ಟಿಗೆಯನ್ನು ತಂದಳು. ರಾಮಕೃಷ್ಣನು ಮನೆಯೊಳಗಿದ್ದ ಒಡಕು ಮಡಕೆ-ಕುಡಿಕೆ, ಮುರಿದ ಸೌಟು, ಮೊಂಡು ಕಸಬರಿಕೆ ಇವುಗಳನ್ನೆಲ್ಲ ತಂದನು. ಅವುಗಳನ್ನು ಪೆಟ್ಟಿಗೆಯೊಳಗೆ ತುಂಬಿದನು. ಅದಕ್ಕೆ ಮುಚ್ಚಳ ಹಾಕಿ ಹಗ್ಗದಿಂದ ಬಿಗಿದನು. ಆ ಪೆಟ್ಟಿಗೆಯನ್ನು ಹೊತ್ತುಕೊಂಡು ಹೋಗಿ ಹಿತ್ತಲಲ್ಲಿದ್ದ ಬಾವಿಯೊಳಗೆ ಇಳಿಸಿದನು. ಅನಂತರ ಮನೆಗೆ ಬಂದು ಬಾಗಿಲು ಹಾಕಿ ಮಲಗಿದನು.

ಹೊಂಚು ಹಾಕುತ್ತಿದ್ದ ಕಳ್ಳರು ರಾಮಕೃಷ್ಣನು ಹೆಂಡತಿಯ ಸಂಗಡ ಆಡಿದ ಮಾತುಗಳನ್ನು ಕೇಳಿದರು. ಅವನು ಪೆಟ್ಟಿಗೆಯನ್ನು ಬಾವಿಯೊಳಗೆ ಇಳಿಸುವುದನ್ನು ನೋಡಿದರು.

ಮನೆಯವರಿಗೆ ಎಚ್ಚರ ಬಂತೆಂಬುದು ಕಳ್ಳರಿಗೆ ಗೊತ್ತಾಯಿತು. ಅವರು ಬಾವಿಯ ಹತ್ತಿರ ಹೋದರು. ಅವರಿಗೆ ಈಸಾಡಲು ಬರುತ್ತಿರಲಿಲ್ಲ. ಆದಕಾರಣ ಅವರು ಅಲ್ಲಿದ್ದ ಕೊಡದಿಂದ ನೀರನ್ನು ಸೇದಿ ಚೆಲ್ಲತೊಡಗಿದರು. ಆ ನೀರು ರಾಮಕೃಷ್ಣನ ಬಾಳೆಯ ತೋಟಕ್ಕೆ

ಹರಿದು ಹೋಗುತ್ತಿತ್ತು. ಬಾವಿಯಲ್ಲಿ ನೀರು ಹೆಚ್ಚಾಗಿತ್ತು. ಕಳ್ಳರಿಗೆ ನೀರನ್ನು ಸೇದಿ ಸೇದಿ ಸಾಕಾಯಿತು. ಆದರೆ ನೀರು ಮಾತ್ರ ಮುಗಿಯ ಲಿಲ್ಲ. ಬೆಳಗಿನ ಜಾವದ ಹೊತ್ತಿಗೆ ಬಾವಿಯಲ್ಲಿ ಸೊಂಟುದ್ದ ನೀರಿತ್ತು. ಕಳ್ಳರು ಬಾವಿಯೊಳಗೆ ಇಳಿದರು. ಬಾವಿಯೊಳಗಿಂದ ಪೆಟ್ಟಿಗೆಯನ್ನು ಮೆಲ್ಲನೆ ಮೇಲೆತ್ತಿದರು. ಪೆಟ್ಟಿಗೆಯನ್ನು ಬಾವಿಯ ಕಟ್ಟೆಯ ಮೇಲಿಟ್ಟು ಮುಚ್ಚಳವನ್ನು ಬಿಚ್ಚಲು ಪ್ರಯತ್ನಿಸಿದರು.



ರಾಮಕೃಷ್ಣನು ಎದ್ದು ಹಿತ್ತಲಿಗೆ ಹೋದನು. ಬಾಳೆಯ ತೋಟಕ್ಕೆ ನೀರು ಹರಿದು ಬಂದುದನ್ನು ಕಂಡನು. ಪೆಟ್ಟಿಗೆಯ ಮುಚ್ಚಳವನ್ನು ಬಿಚ್ಚುತ್ತಿದ್ದ ಕಳ್ಳರನ್ನು ನೋಡಿದನು. ಅವನು "ಅಯ್ಯಾ" ನಿಮಗೆ ವಂದನೆಗಳು. ನೀವು ನನ್ನ ಬಾಳೆಯ ತೋಟಕ್ಕೆ ನೀರು ಬಿಟ್ಟು ಉಪಕಾರ ಮಾಡಿದಿರಿ. ಇನ್ನು ಹದಿನೈದು ದಿನಗಳವರೆಗೆ ಚಿಂತೆಯಿಲ್ಲ. ಹದಿನೈದು ದಿನಗಳಾದ ಮೇಲೆ ಮತ್ತೆ ನೀವು ಬಂದು ತೋಟಕ್ಕೆ ನೀರುಣಿಸಿದರೆ ಸಾಕು'' ಎಂದು ಹೇಳಿದನು.

ಕಳ್ಳರು ರಾಮಕೃಷ್ಣನ ಧ್ವನಿಯನ್ನು ಕೇಳಿದರು. ಅವರಿಗೆ ಹೆದರಿಕೆ ಯಾಯಿತು. ತಾವು ಅವನ ಕೈಗೆ ಸಿಕ್ಕಿಬಿದ್ದರೆ ರಾಜದಂಡನೆಗೆ ಒಳಗಾಗ ಬೇಕಾದೀತೆಂದು ಅಂಜಿ ನಡುಗಿದರು. ಅವರು ರಾಮಕೃಷ್ಣನಿಗೆ ಉತ್ತರ

ಕೊಡುವ ಗೋಜಿಗೆ ಹೋಗದೆ ಹಿತ್ತಲ ಬೇಲಿಯನ್ನು ಜಿಗಿದು ಓಡಿ ಹೋದರು.

ಅಭ್ಯಾಸ

(1) ಪ್ರಶ್ನೆಗಳು :—

1 ತೆನಾಲಿ ರಾಮಕೃಷ್ಣನು ಯಾರ ಆಸ್ಥಾನದಲ್ಲಿದ್ದನು ?

2 ರಾಮಕೃಷ್ಣನು ಹೇಗೆ ಶ್ರೀಮಂತನಾದನು ?

3 ಕಳ್ಳರನ್ನು ಮೋಸಗೊಳಿಸಲು ರಾಮಕೃಷ್ಣನು ಮಾಡಿದ ಉಪಾಯ ವೇನು ?

4 ಕಳ್ಳರು ರಾಮಕೃಷ್ಣನ ಮಾತನ್ನು ನಿಜವೆಂದು ಏಕೆ ನಂಬಿದರು ?

5 ಪೆಟ್ಟಿಗೆಯ ಮುಚ್ಚಳವನ್ನು ಬಿಚ್ಚುತ್ತಿದ್ದ ಕಳ್ಳರಿಗೆ ರಾಮಕೃಷ್ಣನು ಏನು ಹೇಳಿದನು ?

(2) ಕೆಳಗಿನ ವಾಕ್ಯಗಳಲ್ಲಿ ಬಿಟ್ಟ ಸ್ಥಳಗಳನ್ನು ತುಂಬಿರಿ :—

1 ತೆನಾಲಿ ರಾಮಕೃಷ್ಣನು ಒಬ್ಬ ——.

2 ರಾಜನು ಅವನಿಗೆ ಆಗಾಗ —— ಬಹುಮಾನವಾಗಿ ಕೊಡುತ್ತಿದ್ದನು.

3 ಕಳ್ಳರು ರಾಮಕೃಷ್ಣನ ಮನೆಯ —— ಹೋದರು.

4 ಕಳ್ಳರಿಗೆ ನೀರನ್ನು —— ಸಾಕಾಯಿತು.

(3) 1 ತೆನಾಲಿ ರಾಮನಿಗೆ ಸಂಬಂಧಿಸಿದ ಇತರ ಕಥೆಗಳನ್ನು ಓದಿರಿ.

2 ಕಳ್ಳರ ಕಾಟವನ್ನು ತಪ್ಪಿಸಿಕೊಳ್ಳಲು ಇತರ ಉಪಾಯಗಳನ್ನು ಸೂಚಿಸಿರಿ.

(4) ಶಬ್ದಗಳ ಅರ್ಥ :—

ದೋಚು—ಕಸಿದುಕೊಳ್ಳು, ಕಳವು ಮಾಡು. ಹಾವಳಿ—ತೊಂದರೆ. ಪತ್ತೆಹಚ್ಚು—ಕಂಡುಹಿಡಿ.

---

24. ವಸಂತ

ವಸಂತ ಬಂದ, ಋತುಗಳ ರಾಜ ತಾ ಬಂದ,
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ,
ಚಳಿಯನು ಕೊಂದ, ಹಕ್ಕಿಗಳುಲಿಗಳೆ ಚೆಂದ,
ಕೂವೂ, ಜಗ್ ಜಗ್, ಪುವ್ವೀ, ಟೂವಿಟ್ಟವೂ !

ಕುರಿ ನೆಗೆದಾಟ, ಕುರುಬರ ಕೊಳಲಿನೂದಾಟ,
ಇನಿಯರ ಬೇಟ, ಬನದಲಿ ಬೆಳದಿಂಗಳೂಟ,
ಹೊಸಹೊಸ ನೋಟ, ಹಕ್ಕಿಗೆ ನಲಿವಿನ ಪಾಠ,
ಕೂವೂ, ಜಗ್ ಜಗ್, ಪುವ್ವೀ, ಟೂವಿಟ್ಟವೂ !

ಮಾವಿನ ಸೊಂಪು, ಮಲ್ಲಿಗೆ ಬಯಲೆಲ್ಲ ಕಂಪು,
ಗಾಳಿಯ ಕಂಪು, ಜನಗಳ ಜಾತ್ರೆಯ ಗುಂಪು,
ಕಿವಿಗಳಿಗಿಂಪು ಹಕ್ಕಿಗಳುಲುಹಿನ ಪೆಂಪು,
ಕೂವೂ, ಜಗ್ ಜಗ್, ಪುವ್ವೀ, ಟೂವಿಟ್ಟವೂ !
ಬಂದ ವಸಂತ—ನಮ್ಮಾ
ರಾಜ ವಸಂತ !

—ಶ್ರೀ

ಅಭ್ಯಾಸ

(1) ಪ್ರಶ್ನೆಗಳು :—

1. ಋತುಗಳ ರಾಜ ಯಾರು ?
2. ವಸಂತ ಋತುವಿನಲ್ಲಿ ಪಕ್ಷಿಗಳು ಹೇಗೆ ಕೂಗುತ್ತವೆ ?
3. ವಸಂತ ಋತು ಬರುವುದರಿಂದ ಗಿಡಮರಗಳಲ್ಲಿ ಯಾವ ಬದಲಾವಣೆಗಳಾಗುತ್ತವೆ ?

(2)
1. ಯಾವುದಾದರೊಂದು ಪಕ್ಷಿಯ ಚಿತ್ರವನ್ನು ಬರೆಯಿರಿ.
2. ಯಾವುದಾದರೊಂದು ಪಕ್ಷಿಯ ಧ್ವನಿಯನ್ನು ಅನುಕರಿಸಿರಿ.
3. ಈ ಪದ್ಯವನ್ನು ಕಂಠಪಾಠ ಮಾಡಿರಿ.

(3) ಶಬ್ದಗಳ ಅರ್ಥ :—

ವಸಂತ—ಒಂದು ಋತು. ವರ್ಷದಲ್ಲಿ ಆರು ಋತುಗಳು (ವಸಂತ, ಗ್ರೀಷ್ಮ, ವರ್ಷಾ, ಶರದ್, ಹೇಮಂತ, ಶಿಶಿರ).

ಕಂಪು—ಸುವಾಸನೆ　　ಪೆಂಪು—ಹೆಚ್ಚಳ　　ಉಲಿ—ಶಬ್ದ

ಬನ—ಕಾಡು　　ಇಂಪು—ಮಧುರ.

---

25. ಪ್ರಜಾರಾಜ್ಯದಿನ

ಪ್ರಜಾರಾಜ್ಯದ ದಿನ ಮಕ್ಕಳು ನಸುಕಿನಲ್ಲಿ ಬೇಗನೆ ಏಳುವರು. ಸ್ನಾನ ಮಾಡುವರು. ಶಾಲೆಯ ಸಮವಸ್ತ್ರವನ್ನು ಧರಿಸುವರು. ಶಾಲೆಗೆ ಹೋಗಿ ಧ್ವಜವಂದನೆಯನ್ನು ಮಾಡುವರು. ಗುರುಗಳು. ವಿದ್ಯಾರ್ಥಿಗಳು ಕೂಡಿಯೆ ಪ್ರಭಾತಫೇರಿಯೊಂದಿಗೆ ಸಾರ್ವಜನಿಕ ಧ್ವಜಾರೋಹಣಕ್ಕೆ ಹೋಗುವರು. ಊರ ಹಿರಿಯರು, ಸರಕಾರಿ ಅಧಿಕಾರಿಗಳು ಎಲ್ಲರೂ ಧ್ವಜಕಂಬದ ಹತ್ತಿರ ಸೇರುವರು. ಧ್ವಜಾರೋಹಣ ಮಾಡಿ ಧ್ವಜಕ್ಕೆ ನಮಿಸುವರು. ಎಲ್ಲರೂ ಸೇರಿ ರಾಷ್ಟ್ರಗೀತೆಯನ್ನು ಹೇಳುವರು.

ನಮ್ಮ ಭಾರತ ದೇಶವು 1950ನೆಯ ಜನವರಿ 26 ರಂದು ಪ್ರಜಾ ರಾಜ್ಯವಾಯಿತು. ಅಂದಿನಿಂದ ಈ ಪ್ರಜಾರಾಜ್ಯದಿನವನ್ನು ಪ್ರತಿವರುಷ ಜನವರಿ 26 ರಂದು ದೇಶದ ತುಂಬೆಲ್ಲ ಸಂಭ್ರಮದಿಂದ ಆಚರಿಸುವರು. ಪ್ರಜೆಗಳ ಪ್ರತಿನಿಧಿಗಳೇ ದೇಶವನ್ನು ಆಳುವುದರಿಂದ ಪ್ರಜಾರಾಜ್ಯವೆನ್ನುವರು.

ನಮ್ಮ ದೇಶದ ನಾಯಕರು ಹೋರಾಡಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು. 1947ನೆಯ ಅಗಸ್ಟ 15 ರಂದು ನಮ್ಮ ದೇಶವು ಸ್ವತಂತ್ರವಾಯಿತು. ಭಾರತದ ನಾಯಕರು ದೇಶವು ಪ್ರಜಾರಾಜ್ಯವಾಗ ಬೇಕೆಂದು ಬಯಸಿದರು. ದೇಶದ ಆಡಳಿತದ ನಿಯಮಾವಳಿಗಳನ್ನು ರಚಿಸಿದರು. ಆ ನಿಯಮಾವಳಿಗಳನ್ನು ಒಳಗೊಂಡ ಗ್ರಂಥಕ್ಕೆ ಸಂವಿಧಾನ ವೆನ್ನುವರು.

ಪ್ರತಿ ಐದು ವರುಷಗಳಿಗೊಮ್ಮೆ ನಮ್ಮ ದೇಶದಲ್ಲಿ ಚುನಾವಣೆಗಳು ನಡೆಯುತ್ತವೆ. ಪ್ರಜೆಗಳು ತಮ್ಮ ರಾಜ್ಯದ, ದೇಶದ ಪ್ರತಿನಿಧಿಗಳನ್ನು ಆರಿಸುತ್ತಾರೆ. 21 ವರುಷ ತುಂಬಿದ ಪ್ರೌಢರಿಗೆ ಮತವನ್ನು ಹಾಕುವ ಹಕ್ಕು ಇದೆ. ಇದನ್ನು 'ಪ್ರೌಢಮತದಾನ ಪದ್ಧತಿ' ಎಂದು ಕರೆಯುವರು.

ಜನಸಂಖ್ಯೆಯ ಮೇಲೆ ಪ್ರತಿನಿಧಿಗಳ ಸಂಖ್ಯೆಯು ಅವಲಂಬಿಸಿರುತ್ತದೆ. ರಾಜ್ಯಕ್ಕೆ ಆಯ್ಕೆಯಾದವರು ತಮ್ಮಲ್ಲಿಯೇ ಒಂದು ಮಂತ್ರಿಮಂಡಲವನ್ನು ರಚಿಸಿಕೊಳ್ಳುತ್ತಾರೆ. ಮಂತ್ರಿಮಂಡಲವು ರಾಜ್ಯದ ಆಡಳಿತವನ್ನು ನಡೆಸುತ್ತದೆ. ಪ್ರತಿನಿಧಿಗಳು ಜನರ ಹಿತಕ್ಕಾಗಿ ಕಾಯ್ದೆಗಳನ್ನು ಮಾಡುವರು.

ಭಾರತ ದೇಶಕ್ಕೆ ಒಬ್ಬ ರಾಷ್ಟ್ರಪತಿಗಳು ಇರುತ್ತಾರೆ. ಅವರನ್ನು ಕೂಡ ಪ್ರತಿ ಐದು ವರ್ಷಗಳಿಗೊಮ್ಮೆ ಆಯ್ಕೆಯಾದ ಪ್ರಜಾಪ್ರತಿನಿಧಿಗಳು ಆರಿಸುತ್ತಾರೆ.

ನಮ್ಮ ದೇಶವು ಭಾರತ. ನಾವೆಲ್ಲಾ ಭಾರತ ದೇಶದ ಮಕ್ಕಳು. ನಮ್ಮದು ಪ್ರಜಾತಂತ್ರ ಪದ್ಧತಿಯ ಆಳಿಕೆಯು. ಇದನ್ನು ಗಣತಂತ್ರವೆಂದೂ ಕರೆಯುವರು. ನಮ್ಮ ದೇಶದ ರಾಷ್ಟ್ರಗೀತೆಯು 'ಜನಗಣ ಮನ'ವು. ನಮ್ಮ ದೇಶಕ್ಕೊಂದು ರಾಷ್ಟ್ರಧ್ವಜವುಂಟು. ಅದು ತ್ರಿವರ್ಣದ್ದು. ಹಸಿರು, ಬಿಳಿ, ಕೇಸರಿಗಳೇ ಆ ಮೂರು ಬಣ್ಣಗಳು. ನಡುವೆ ಅಶೋಕಚಕ್ರವಿದೆ.

ಸರ್ವರೂ ಸುಖಿಗಳಾಗಬೇಕೆಂಬುದೇ ಪ್ರಜಾರಾಜ್ಯ ಪದ್ಧತಿಯ ಗುರಿಯು. ನಾವೆಲ್ಲರೂ ನಮ್ಮ ಪಾಲಿನ ಕೆಲಸಗಳನ್ನು ಸರಿಯಾಗಿ ಮಾಡಿದರೆ ಪ್ರಜಾರಾಜ್ಯವು ಸುಖೀರಾಜ್ಯವಾಗುವುದು.

ಅಭ್ಯಾಸ

(1) 1. ಪ್ರಜಾರಾಜ್ಯದಿನವನ್ನು ಹೇಗೆ ಆಚರಿಸುವರು ?
2. ಪ್ರಜಾರಾಜ್ಯವೆಂದರೇನು ?
3. ಸಂವಿಧಾನವೆಂದರೇನು ?
4. ಕಾಯ್ದೆಗಳನ್ನು ಏತಕ್ಕಾಗಿ ಮಾಡುತ್ತಾರೆ ?
5. ನಮ್ಮ ರಾಷ್ಟ್ರಗೀತೆ ಯಾವುದು ?
6. ನಮ್ಮ ರಾಷ್ಟ್ರಧ್ವಜದಲ್ಲಿ ಎಷ್ಟು ಬಣ್ಣಗಳಿವೆ ? ಅವು ಯಾವುವು ?

(2) ಬಿಟ್ಟ ಸ್ಥಳಗಳನ್ನು ತುಂಬಿರಿ :—

1. ನಮ್ಮ ದೇಶವು—————ಸ್ವತಂತ್ರವಾಯಿತು.
2. ಪ್ರತಿವರುಷ —————ರಂದು ನಾವು ಪ್ರಜಾರಾಜ್ಯ ದಿನವನ್ನು ಆಚರಿಸುತ್ತೇವೆ.
3. ನಿಯಮಾವಳಿಗಳನ್ನೊಳಗೊಂಡ ಗ್ರಂಥಕ್ಕೆ—————ವೆನ್ನುವರು.
4. ನಮ್ಮ ದೇಶದಲ್ಲಿ—————ಚುನಾವಣೆಗಳು ನಡೆಯುತ್ತವೆ.
5. —————ಪ್ರೌಢರಿಗೆ ಮತ ಹಾಕುವ ಹಕ್ಕು ಇದೆ.

(3) 1. ಕಾಗದದಿಂದ ಒಂದು ರಾಷ್ಟ್ರಧ್ವಜವನ್ನು ಸಿದ್ಧಗೊಳಿಸಿರಿ.
2. ಧ್ವಜಕಂಬದ ಹತ್ತಿರ ಸುಣ್ಣದಿಂದ ಗೆರೆಗಳನ್ನು ಹಾಕಿರಿ.
3. ಮತ ಹಾಕಿ ನಿಮ್ಮ ವರ್ಗದ ಮಂತ್ರಿಯನ್ನು ಆರಿಸಿರಿ.

(4) ಶಬ್ದಗಳ ಅರ್ಥ :—

ಧ್ವಜಾರೋಹಣ—ಧ್ವಜವನ್ನು ಏರಿಸುವುದು. ಹೋರಾಡು—ಕಾದಾಡು. ಸಂವಿಧಾನ —ಆಡಳಿತದ ನಿಯಮಾವಳಿಗಳನ್ನು ಒಳಗೊಂಡ ಗ್ರಂಥ. ತ್ರಿವರ್ಣ—ಮೂರು ಬಣ್ಣ.

---

26. ಸಿಂಹವನ್ನು ಸೋಲಿಸಿದ ನೊಣ

ಒಂದು ಕಾಡಿನಲ್ಲಿ ಒಂದು ಸಿಂಹ ವಾಸವಾಗಿತ್ತು. ಉಳಿದ ಮೃಗಗಳೆಲ್ಲ ಅದಕ್ಕೆ ಅಂಜುತ್ತಿದ್ದವು. ಅವು ಸಿಂಹವನ್ನು ಕಂಡಾಗ ಓಡಿ ಹೋಗುತ್ತಿದ್ದವು. ಮೃಗಗಳೆಲ್ಲ ತನಗೆ ಹೆದರುವುದನ್ನು ಕಂಡು ಸಿಂಹಕ್ಕೆ ಜಂಭ ಬಂತು. ಒಂದು ದಿನ ಅದು 'ಅಡವಿಯಲ್ಲಿ ನನ್ನಷ್ಟು ಬಲಶಾಲಿಗಳು ಯಾರೂ ಇಲ್ಲ. ನಾನು ಹುಲಿಯನ್ನು ಸೀಳಿ ಹಾಕಬಲ್ಲೆ. ಆನೆಯ ತಲೆಯನ್ನು ಒಡೆಯಬಲ್ಲೆ' ಎಂದು ಗರ್ವದಿಂದ ಗರ್ಜಿಸಿತು.

ಆ ಅಡವಿಯಲ್ಲಿ ಒಂದು ಕಾಡುನೊಣ ಆಹಾರಕ್ಕಾಗಿ ಹಾರಾಡು ತ್ತಿತ್ತು. ಅದು ಸಿಂಹದ ಗರ್ಜನೆಯನ್ನು ಕೇಳಿತು. ಅದರ ಹತ್ತಿರ ಹೋಯಿತು. 'ಮೃಗರಾಜ' ಜಂಭದ ಮಾತಾಡುವುದು ಸರಿಯಲ್ಲ. ಎಂಥ ಬಲಶಾಲಿಗಾದರೂ ಕಷ್ಟಗಳು ತಪ್ಪಿದ್ದಲ್ಲ' ಎಂದು ಹೇಳಿತು.

ನೊಣದ ಮಾತನ್ನು ಕೇಳಿ ಸಿಂಹಕ್ಕೆ ಸಿಟ್ಟು ಬಂತು. "ನಾನು ಮೃಗಗಳಿಗೆಲ್ಲ ರಾಜ. ನನ್ನನ್ನು ಸೋಲಿಸುವವರು ಯಾರಿದ್ದಾರೆ ? ನನ್ನ ಗರ್ಜನೆ ಕೇಳಿದರೆ ಸಾಕು, ಎಲ್ಲ ಮೃಗಗಳೂ ಓಡಿ ಹೋಗುತ್ತವೆ." ಎಂದು ಗರ್ವದಿಂದ ಅಬ್ಬರಿಸಿತು.

"ಬೇರೆಯವರನ್ನು ಹುಡುಕುವುದು ಏಕೆ ? ನಾನೇ ನಿನ್ನನ್ನು ಸೋಲಿಸಬಲ್ಲೆ " ಎಂದು ನೊಣ ಉತ್ತರ ಕೊಟ್ಟಿತು.

"ನೀನು ನನ್ನನ್ನು ಸೋಲಿಸಬಲ್ಲೆಯಾ ? ನೀನಾದರೋ ಕಡಲೆಕಾಳು ಗಾತ್ರದ ಹುಳು. ನಾನು ನಿನ್ನನ್ನು ಒಂದು ಕ್ಷಣದಲ್ಲಿ ಹಿಂಡಿ ಹಿಪ್ಪೆ ಮಾಡಬಲ್ಲೆ" ಎಂದು ಸಿಂಹ ಗರ್ಜಿಸಿತು.

"ಆಗಲಿ ನೀನು ಕದನಕ್ಕೆ ಕರೆದಾಗ ನಾನು ಬೇಡ ಎಂದು ಹೇಳಲೆ ?" ಎಂದು ನೊಣ ಸಿಂಹದ ಕರೆಯನ್ನು ಒಪ್ಪಿಕೊಂಡಿತು.

ಸಿಂಹ ಕದನಕ್ಕೆ ಅಣಿಯಾಗಿ ನಿಂತಿತು. ಕಾಡುನೊಣ ರೆಕ್ಕೆ ಬಡಿದು ಹಾರಿ ಹೋಗಿ ಸಿಂಹದ ಮೂಗಿನ ಮೇಲೆ ಕುಳಿತಿತು. ತನ್ನ ಕೊಂಡಿಯಿಂದ ಸಿಂಹದ ಮೂಗನ್ನು ಚುಚ್ಚಿತು. ನೊಣದ ಕೊಂಡಿಯ ಇರಿತದ ನೋವನ್ನು ತಡೆದುಕೊಳ್ಳಲು ಸಿಂಹಕ್ಕೆ ಆಗಲಿಲ್ಲ. ಅದು ಸಿಟ್ಟಿನಿಂದ ಗರ್ಜಿಸಿತು. ತನ್ನ ಮೂಗಿನ ಮೇಲೆ ಹಾರಾಡುತ್ತಿದ್ದ ನೊಣವನ್ನು ಹಿಡಿಯಲು ತನ್ನ ಕೈಯನ್ನು ಅಪ್ಪಳಿಸಿತು. ಕಾಡುನೊಣ ಸಿಂಹಕ್ಕೆ ಸಿಗಲಿಲ್ಲ. ಅದು ಉಗುರುಗಳ ನಡುವೆ ನುಸುಳಿ ತಪ್ಪಿಸಿಕೊಂಡಿತು. ಮತ್ತೊಮ್ಮೆ ತನ್ನ ಕೊಂಡಿಯಿಂದ ಸಿಂಹದ ಮೂಗನ್ನು ಚುಚ್ಚಿತು. ಸಿಂಹದ ಕೋಪ ಇನ್ನಷ್ಟು ಅಧಿಕವಾಯಿತು. ಅದು ಇನ್ನೊಮ್ಮೆ ತನ್ನ ಮೂಗಿನ ಮೇಲೆ ಹಾರಾಡುತ್ತಿದ್ದ ನೊಣವನ್ನು ಹಿಡಿಯಲು ತನ್ನ ಕೈಯಿಂದ ಬಲವಾಗಿ ಅಪ್ಪಳಿಸಿತು. ಕಾಡುನೊಣ

ಮಾತ್ರ ಸಿಂಹದ ಕೈಗೆ ಸಿಗಲೇ ಇಲ್ಲ. ಉಗುರುಗಳು ತಾಗಿ ಸಿಂಹದ ಮುಖ ಮತ್ತು ಮೂಗುಗಳ ಮೇಲೆ ಗಾಯಗಳಾದವು. ಗಾಯಗಳಿಂದ ರಕ್ತ ಸೋರಿತು.

ಕೊನೆಗೆ ಸಿಂಹ " ನೊಣವೆ, ನನ್ನನ್ನು ಒಮ್ಮೆ ಬಿಡು. ನಿನ್ನ ಇರಿತಗಳ ಉರಿ ನೋವುಗಳನ್ನು ಸಹಿಸಲಾರೆನು. ಆನೆಗೆ ಸೋಲದ ನಾನು ನಿನಗೆ ಸೋತೆ " ಎಂದು ತನ್ನ ಸೋಲನ್ನು ಒಪ್ಪಿಕೊಂಡಿತು.

" ಮೃಗರಾಜ, ನೀನು ದೊಡ್ಡವನು. ನೀನು ಬಲಶಾಲಿ ಎಂಬುದೂ ನಿಜ. ಆದರೆ ನಿನ್ನ ಶಕ್ತಿಯ ಬಗ್ಗೆ ಜಂಭಪಡಬಾರದು. ಗರ್ವ ಪಡುವವನಿಗೆ ಸೋಲು ತಪ್ಪಿದ್ದಲ್ಲ " ಎಂದು ಹೇಳಿ ನೊಣ ಹಾರಿ ಹೋಯಿತು.

ಅಭ್ಯಾಸ

(1) ಪ್ರಶ್ನೆಗಳು :—

1. ಸಿಂಹವು ಜಂಭಪಟ್ಟುಕೊಂಡುದೇಕೆ ?
2. ಜಂಭಪಡುತ್ತಿದ್ದ ಸಿಂಹಕ್ಕೆ ನೊಣ ಏನು ಹೇಳಿತು ?
3. ನೊಣ ಸಿಂಹವನ್ನು ಹೇಗೆ ಸೋಲಿಸಿತು ?
4. ನೊಣ ಸಿಂಹಕ್ಕೆ ಹೇಳಿದ ಬುದ್ಧಿವಾದವೇನು ?

(2) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು ?

1. ' ನಾನು ಹುಲಿಯನ್ನು ಸೀಳಿ ಹಾಕಬಲ್ಲೆ.'
2. ' ನೀನು ಕಡಲೆ ಕಾಳು ಗಾತ್ರದ ಹುಳು.'

3. 'ಆನೆಗೆ ಸೋಲದ ನಾನು ನಿನಗೆ ಸೋತೆ.'
4. 'ಗರ್ವಪಡುವವನಿಗೆ ಸೋಲು ತಪ್ಪಿದ್ದಲ್ಲ.'

(3) 1. ಮೃಗಾಲಯದಲ್ಲಿ ಅಥವಾ ಸರ್ಕಸ್ಸಿನಲ್ಲಿ ಸಿಂಹವನ್ನು ನೋಡಿರಿ.
2. ಸಿಂಹದ ಚಿತ್ರವೊಂದನ್ನು ತೆಗೆಯಿರಿ. ಬಣ್ಣ ಹಚ್ಚಿರಿ.

(4) ಶಬ್ದಗಳ ಅರ್ಥ :—
ಗರ್ವ—ಸೊಕ್ಕು. ಕದನ—ಯುದ್ಧ. ಅಣಿಯಾಗಿ—ಸಿದ್ಧವಾಗಿ.

---

27. ಡಿ. ಡಿ. ಟಿ. ಸಿಂಪಡಿಸಿದರು

ಅಂದು ಕಮಲಾಪುರ ಶಾಲೆಯ ಮಕ್ಕಳಿಗೆ ಕುತೂಹಲವೇ ಕುತೂಹಲ. ಶಾಲೆಯ ಕೋಣೆಗಳಿಗೆ ಡಿ. ಡಿ. ಟಿ. ಸಿಂಪಡಿಸಲು ಮೂರು ನಾಲ್ಕು ಜನರು ಗುಂಪುಗೂಡಿ ಬಂದರು. ಒಬ್ಬರು ಡಿ. ಡಿ. ಟಿ. ತುಂಬಿದ ಚೀಲವನ್ನೂ. ಇನ್ನೊಬ್ಬರು ಅದನ್ನು ಕಲಸಿದ ಪಾತ್ರೆಯನ್ನೂ, ಮತ್ತೊಬ್ಬರು ಅದನ್ನು ಸಿಂಪಡಿಸುವ ಜೀಕಳಿಯನ್ನೂ ಹಿಡಿದಿದ್ದರು. ಶಾಲೆಯ ಮಕ್ಕಳು, "ಇದೇನು ಗುರುಗಳೆ, ಇವರು ನಮ್ಮ ಶಾಲೆಗೆ ಏಕೆ ಬಂದಿದ್ದಾರೆ" ಎಂದು ಕೇಳಿದರು. "ಇವರು ಡಿ. ಡಿ. ಟಿ. ಸಿಂಪಡಿಸುವವರು. ಅದನ್ನು ಶಾಲೆಯ ಕೋಣೆಗಳಿಗೆ ಸಿಂಪಡಿಸಲು ಬಂದಿದ್ದಾರೆ" ಎಂದರು.

ರಾಜು :—ಡಿ. ಡಿ. ಟಿ. ಎಂದರೇನು ? ಅದನ್ನು ಏಕೆ ಸಿಂಪಡಿಸುತ್ತಾರೆ ?

ಗುರುಗಳು :—ಡಿ. ಡಿ. ಟಿ. ಎಂದರೆ ಒಂದು ಕ್ರಿಮಿನಾಶಕ ಔಷಧವು. ನಮ್ಮ ಊರಲ್ಲಿ ಮಲೇರಿಯಾ ಎಂಬ ರೋಗ ಹರಡಹತ್ತಿದೆ. ಈ ರೋಗವು ಸೊಳ್ಳೆಗಳಿಂದ ಬರುತ್ತದೆ. ಡಿ. ಡಿ. ಟಿ. ಸಿಂಪಡಿಸುವುದರಿಂದ ಗೋಡೆಗಳಲ್ಲಿ ಅಡಗಿರುವ ಸೊಳ್ಳೆಗಳು ನಾಶವಾಗುತ್ತವೆ.

ಉದಯ :—ಸೊಳ್ಳೆಗಳಿಂದ ಮಲೇರಿಯಾ ರೋಗ ಹೇಗೆ ಹರಡುತ್ತದೆ ?

ಗುರುಗಳು :—ನೋಡು ಉದಯ, ಮನೆಯಲ್ಲಿ ರಾತ್ರಿ ಮಲಗಿದಾಗ ಸೊಳ್ಳೆಗಳು ಕಚ್ಚುವುದಿಲ್ಲವೆ ?

ವಸಂತ :—ನಿಜ. ಗುರುಗಳೆ. ಇಡಿ ರಾತ್ರಿ ನಮ್ಮ ಮನೆಯಲ್ಲಿ ಸೊಳ್ಳೆಗಳು ಕಚ್ಚುತ್ತವೆ. ಮೈಮೇಲೆ ಗದುವಿನಂತೆ ಗುಳ್ಳೆಗಳು ಏಳುತ್ತವೆ.

ಗುರುಗಳು :—ಈ ಸೊಳ್ಳೆಗಳು ರೋಗಿಯನ್ನು ಕಚ್ಚಿದಾಗ ರೋಗಾಣುಗಳು ಸೊಳ್ಳೆಯ ದೇಹದೊಳಗೆ ಹೋಗುತ್ತವೆ. ಅವೇ ಸೊಳ್ಳೆಗಳು ನಿರೋಗಿಯನ್ನು ಕಚ್ಚಿದಾಗ ರೋಗಾಣುಗಳು ಅದರ ಜೊಲ್ಲಿನ ಮೂಲಕ ನಿರೋಗಿಯ ದೇಹದೊಳಗೆ ಸೇರಿ ಮಲೇರಿಯಾ ರೋಗವನ್ನು ಹರಡುತ್ತವೆ. ಈ ಸೊಳ್ಳೆ ಅಪಾಯಕಾರಿ ಹುಳು.

ರಾಜು :—ಈ ಸೊಳ್ಳೆಗಳು ಎಲ್ಲಾ ಕಡೆಗೂ ಇರುತ್ತವೆಯೆ ?

ಗುರುಗಳು :—ಸಾಮಾನ್ಯವಾಗಿ ಸೊಳ್ಳೆಗಳು ಎಲ್ಲಾ ಕಡೆಗೂ ಇರುತ್ತವೆ. ಆದರೆ ಉಷ್ಣಪ್ರದೇಶದಲ್ಲಿ ಈ ಸೊಳ್ಳೆಗಳ ಕಾಟ ಹೆಚ್ಚಾಗಿರುತ್ತದೆ. ಬಚ್ಚಲು, ತಿಪ್ಪೆಗುಂಡಿ, ಚರಂಡಿ, ಹೊಂಡ ಮುಂತಾದ ಕೊಳಚೆ ಪ್ರದೇಶಗಳಲ್ಲಿ ಇವು ಇರುತ್ತವೆ. ಇಂಥ ಸ್ಥಳಗಳ ಮೇಲೆ ಗಾಳಿ ಬೀಸಲು ಆ ಗಾಳಿಯೊಡನೆ ಸೊಳ್ಳೆಗಳು ಮನೆಯೊಳಗೆ ಬರುತ್ತವೆ.

ಉದಯ :—ಮಲೇರಿಯಾ ರೋಗಕ್ಕೆ ಔಷಧಿಯನ್ನು ಕಂಡು ಹಿಡಿದಿಲ್ಲವೆ ?

ಗುರುಗಳು :—ಕ್ವಿನೈನ್ ಎಂಬ ತುಂಬ ಕಹಿಯಾದ ಔಷಧಿಯನ್ನು ಕಂಡು ಹಿಡಿದಿದ್ದಾರೆ. ಸಕ್ಕರೆಯನ್ನು ಲೇಪಿಸಿದ ಕ್ವಿನೈನ್ ಗುಳಿಗೆಗಳನ್ನು ಒಂದು ವಾರ ಸೇವಿಸಿದರೆ ರೋಗ ವಾಸಿಯಾಗುತ್ತದೆ.

ವಸಂತ :—ರಾತ್ರಿಯ ಹೊತ್ತು ಸೊಳ್ಳೆಗಳ ಕಾಟ ತಪ್ಪಿಸಲು ಯಾವ ಉಪಾಯ ಮಾಡಬೇಕು, ಗುರುಗಳೆ ?

ಗುರುಗಳು :—ರಾತ್ರಿಯ ಹೊತ್ತು ಮನೆಗಳಲ್ಲಿ ಗಂಧಕ. ಬೇವಿನ ಎಲೆ, ಧೂಪ ಇವುಗಳನ್ನು ಸುಟ್ಟು ಸೊಳ್ಳೆಗಳ ಉಪಟಳವನ್ನು ಕಡಿಮೆ ಮಾಡಬೇಕು. ಮೈ ಕೈಗೆ ವ್ಯಾಸಲೈನ್ ಮತ್ತು ನೀಲಗಿರಿ ಎಣ್ಣೆ ಸವರಿ ಕೊಳ್ಳಬೇಕು. ಇದರ ವಾಸನೆಗೆ ಸೊಳ್ಳೆಗಳು ಹತ್ತಿರ ಬರುವುದಿಲ್ಲ.

ಅಷ್ಟರಲ್ಲಿ ಮುಖ್ಯ ಗುರುಗಳು ಬಂದರು. ಮಕ್ಕಳನ್ನು ಮನೆಗೆ ಕಳುಹಿಸಬೇಕೆಂದು ಹೇಳಿದರು. ಮಕ್ಕಳೆಲ್ಲರು ಮನೆಗೆ ಹೋದರು. ಕೋಣೆಗಳಿಗೆ ಡಿ.ಡಿ.ಟಿ. ಸಿಂಪಡಿಸಿದರು.

ಅಭ್ಯಾಸ

(1) ಪ್ರಶ್ನೆಗಳು :—

1. ಮೂರು ನಾಲ್ಕು ಜನರು ಶಾಲೆಗೆ ಏನನ್ನು ಸಿಂಪಡಿಸಲು ಹೋದರು?
2. ಸೊಳ್ಳೆಗಳಿಂದ ಮಲೇರಿಯಾ ರೋಗ ಒಬ್ಬರಿಂದ ಒಬ್ಬರಿಗೆ ಹೇಗೆ ಹರಡುತ್ತದೆ ?
3. ರಾತ್ರಿಯ ಹೊತ್ತು ಸೊಳ್ಳೆಗಳ ಕಾಟ ತಪ್ಪಿಸಿಕೊಳ್ಳಲು ಏನನ್ನು ಮಾಡಬೇಕು ?
4. ಮಲೇರಿಯಾ ರೋಗಕ್ಕೆ ಯಾವ ಔಷಧಿಯನ್ನು ಕಂಡು ಹಿಡಿದಿದ್ದಾರೆ ?

(2) ಸರಿ ಅಥವಾ ತಪ್ಪು ಎಂಬುದನ್ನು ಗುರುತಿಸಿರಿ :—

	ಸರಿ	ತಪ್ಪು
1. ಮಲೇರಿಯಾ ರೋಗ ನೊಣಗಳಿಂದ ಹರಡುತ್ತದೆ.	——	——
2. ಕ್ವಿನೈನ್ ಗುಳಿಗೆಗಳನ್ನು ಸೇವಿಸುವುದರಿಂದ ಮಲೇರಿಯಾ ರೋಗ ವಾಸಿಯಾಗುತ್ತದೆ.	——	——
3. ರಾತ್ರಿಯ ಹೊತ್ತು ಸೊಳ್ಳೆಗಳ ಕಾಟ ತಪ್ಪಿಸಿ ಕೊಳ್ಳಲು ತುಂಬ ಹೊದೆದುಕೊಂಡು ಮಲಗಬೇಕು.	——	——
4. ಮಲೇರಿಯಾ ರೋಗವನ್ನು ಹರಡುವ ಸೊಳ್ಳೆಗೆ ಅನಾಫಿಲಿಸ್ ಎನ್ನುತ್ತಾರೆ.	——	——

(3) ಈ ಶಬ್ದಗಳನ್ನು ನಿಮ್ಮ ಮಾತುಗಳಲ್ಲಿ ಉಪಯೋಗಿಸಿರಿ :—

ಶಾಲೆ, ಗುಂಪು, ರೋಗ, ಮಕ್ಕಳು, ಹರಡು. ಸೊಳ್ಳೆ.

(4) 1. ರಾತ್ರಿಯ ಹೊತ್ತು ಮಲಗುವಾಗ ಸೊಳ್ಳೆಗಳ ಕಾಟ ತಪ್ಪಿಸಿಕೊಳ್ಳುವ ಉಪಾಯ ಮಾಡಿರಿ.

2. ಡಿ.ಡಿ.ಟಿ. ಸಿಂಪಡಿಸುವ ಜೀಕಳಿಯ ಚಿತ್ರವನ್ನು ತೆಗೆಯಿರಿ.

3. ಮನೆಯನ್ನು ಸ್ವಚ್ಛವಾಗಿಡಲು ಹಿರಿಯರಿಗೆ ಸಹಾಯ ಮಾಡಿರಿ.

(5) ಶಬ್ದಗಳ ಅರ್ಥ :—

ಕುತೂಹಲ—ಆಶ್ಚರ್ಯ, ಆತುರತೆ. ಸಿಂಪಡಿಸು—ಚಿಮುಕಿಸು. ಜೀಕಳಿ—ನೀರನ್ನು ಎರಚುವ ಒಂದು ಸಾಧನ. ಉಪಟಳ—ತೊಂದರೆ. ನಾಶಪಡಿಸು—ಕೊಂದುಹಾಕು.

28. ನಮ್ಮ ನಾಡು

ನಮ್ಮ ನಾಡಿದು ನಮ್ಮದು
ನಮ್ಮ ಕನ್ನಡ ನಾಡಿದು
ನೆಮ್ಮದಿಯ ತವರೂರಿದು
ಕಂಗು ಬೆಳೆಯುವ ನಾಡಿದು
ತೆಂಗು ಬೆಳೆಯುವ ನಾಡಿದು
ನಮ್ಮ ಕನ್ನಡ ನಾಡಿದು
ನಮ್ಮ ನಾಡಿದು ನಮ್ಮದು

ಅರಳು ಮಲ್ಲಿಗೆ ನಾಡಿದು
ಕೆಂಡ ಸಂಪಿಗೆ ನಾಡಿದು
ಕೋಗಿಲೆಯ ತವರೂರಿದು
ಭಾರಿ ಸೊಬಗಿನ ನಾಡಿದು
ನಮ್ಮ ಕನ್ನಡ ನಾಡಿದು
ನಮ್ಮ ನಾಡಿದು ನಮ್ಮದು

ಭತ್ತ ಬೆಳೆಯುವ ನಾಡಿದು
ಮುತ್ತು ಬೆಳೆಯುವ ನಾಡಿದು
ಹೊನ್ನು ಬೆಳೆಯುವ ನಾಡಿದು
ಅನ್ನ ನೀಡುವ ನಾಡಿದು
ನಮ್ಮ ನಾಡಿದು ನಮ್ಮದು

ಹಲವು ಕವಿಗಳ ಬೀಡಿದು
ವೀರ ಶೂರರ ನಾಡಿದು
ನಾವು ಹುಟ್ಟಿದ ನಾಡಿದು
ತಾಯಿ ನಾಡಿದು ನಮ್ಮದು
ನಮ್ಮ ಕನ್ನಡ ನಾಡಿದು
ನಮ್ಮ ನಾಡಿದು ನಮ್ಮದು.

—ಮುಚ್ಚಿಮಲೆ ಶಂಕರನಾರಾಯಣರಾವ್

ಅಭ್ಯಾಸ

(1) ಪ್ರಶ್ನೆಗಳು :—

1. ನಮ್ಮ ಕನ್ನಡನಾಡಿನಲ್ಲಿ ಬೆಳೆಯುವ ಬೆಳೆಗಳು ಯಾವುವು ?
2. ನಮ್ಮ ನಾಡಿನಲ್ಲಿ ಬೆಳೆಯುವ ಹೂವುಗಳು ಯಾವುವು ?
3. ನಮ್ಮ ನಾಡಿನಲ್ಲಿ ಸಿಗುವ ಖನಿಜಗಳು ಯಾವುವು ?
4. ನಮ್ಮ ನಾಡಿನಲ್ಲಿ ಹುಟ್ಟಿದವರು ಎಂಥವರು ?

(2) ಕೆಳಗೆ ಕಂಸದಲ್ಲಿ ಕೆಲವು ಪದಗಳನ್ನು ಕೊಟ್ಟಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆಯ್ದುಕೊಂಡು ಬಿಟ್ಟ ಸ್ಥಳವನ್ನು ತುಂಬಿರಿ :—

1. ಕನ್ನಡನಾಡು ಕೋಗಿಲೆಯ——————
   (ಮನೆ, ಶಾಲೆ, ತವರೂರು)
2. ನಮ್ಮ ನಾಡು——————ಬೀಡು
   (ಕವಿಗಳ, ಕಪಿಗಳ, ಕಾಗೆಗಳ)
3. ನಮ್ಮ ತಾಯಿ——————
   (ಭಾಗೀರಥಿ, ಕನ್ನಡನಾಡು, ಸರಸ್ವತಿ)

(3) 1. ಕನ್ನಡ ನಾಡಿನ ನಕಾಶೆಯನ್ನು ತೆಗೆಯಿರಿ.
2. ನಿಮ್ಮ ನಿಮ್ಮ ಭಾಗದಲ್ಲಿ ಬೆಳೆಯುವ ಬೆಳೆಗಳ ಪಟ್ಟಿ ಮಾಡಿರಿ.

(4) ಶಬ್ದಗಳ ಅರ್ಥ :—

ನೆಮ್ಮದಿ—ಸುಖ ; ಸಮಾಧಾನ. ಹೊನ್ನು—ಬಂಗಾರ
ಕಂಗು—ಅಡಿಕೆ ಬೀಡು—ಮನೆ
ಕೆಂಡ—ಕೆಂಪು ತವರು—ತಾಯಿಯ ಮನೆ
ಸೊಬಗಿನ—ಶೋಭೆಯ

29. ಸಮುದ್ರ ದಾಟುವ ಸಾಧನ

ಶಂಕರ ಮತ್ತು ಅವನ ತಂದೆ ಹೊಲದಲ್ಲಿ ಕೆಲಸ ಮಾಡುತ್ತಿದ್ದರು. ಮಳೆ ಜೋರಾಗಿ ಬೀಳತೊಡಗಿತು. ಇಬ್ಬರೂ ಓಡುತ್ತ ಹೋಗಿ ಗುಡಿಸಲಿನಲ್ಲಿ ಕುಳಿತರು.

ಶಂಕರ :—ಅಪ್ಪಾ, ನಾವು ಈಗ ಮನೆಗೆ ಹೋಗುವುದು ಹೇಗೆ ?

ತಂದೆ :—ಮಳೆ ನಿಂತ ಮೇಲೆ ಹೋಗಬೇಕು.

ಸ್ವಲ್ಪ ಸಮಯದ ನಂತರ ಮಳೆ ನಿಂತಿತು. ಶಂಕರ ಮತ್ತು ಅವನ ತಂದೆ ಮನೆಯ ಕಡೆ ಹೊರಟರು. ಊರ ಮುಂದಿನ ಹಳ್ಳ ತುಂಬಿ ಹರಿಯುತ್ತಿತ್ತು.

ಶಂಕರ :—ಅಪ್ಪಾ, ಈಗ ನಾವು ಹಳ್ಳವನ್ನು ಹೇಗೆ ದಾಟಬೇಕು ?

ತಂದೆ :—ನೀರು ಕಡಿಮೆಯಾದ ಮೇಲೆ, ನೀರಿನಲ್ಲಿಯೇ ನಿಧಾನವಾಗಿ ದಾಟಬೇಕು.

ಶಂಕರ :—ಅಪ್ಪಾ, ಈ ಹಳ್ಳದ ನೀರು ಎಲ್ಲಿಗೆ ಹರಿದು ಹೋಗುತ್ತದೆ ?

ತಂದೆ :—ಶಂಕರ, ಈ ಹಳ್ಳದ ನೀರು ಹರಿದು ಹೋಗಿ ನದಿಯನ್ನು ಸೇರುತ್ತದೆ.

ಶಂಕರ :—ಹಾಗಾದರೆ ನದಿಯ ನೀರೆಲ್ಲ ಎಲ್ಲಿಗೆ ಹರಿದು ಹೋಗುತ್ತದೆ ?

ತಂದೆ :—ಹೌದು, ಶಂಕರ, ಒಳ್ಳೆಯ ಪ್ರಶ್ನೆ. ನದಿಯ ನೀರು ಹರಿದು ಸಮುದ್ರಕ್ಕೆ ಸೇರುತ್ತದೆ.

ಶಂಕರ :—ಹಾಗಾದರೆ ನದಿಗಳನ್ನು ಮತ್ತು ಸಮುದ್ರವನ್ನು ಹೇಗೆ ದಾಟಬೇಕು ?

ತಂದೆ :—ನದಿಗಳಿಗೆ ಸೇತುವೆಗಳನ್ನು ಕಟ್ಟಿರುತ್ತಾರೆ. ಅವುಗಳ ಸಹಾಯದಿಂದ ನದಿಗಳನ್ನು ದಾಟುತ್ತಾರೆ. ದೋಣಿಗಳ ನೆರವಿನಿಂದಲೂ ನದಿಗಳನ್ನು ದಾಟುತ್ತಾರೆ.

ಶಂಕರ :—ಅಪ್ಪಾ, ಹಾಗಾದರೆ ಸಮುದ್ರವನ್ನು ದಾಟುವುದು ಹೇಗೆ ?

ತಂದೆ :—ಸಮುದ್ರದಲ್ಲಿ ಪ್ರಯಾಣ ಮಾಡಲು ಹಡಗುಗಳು ಇರುತ್ತವೆ. ಅವುಗಳ ಸಹಾಯದಿಂದ ಸಮುದ್ರವನ್ನು ದಾಟಿ. ಬೇರೆ ಬೇರೆ ಸ್ಥಳಗಳಿಗೆ ಹೋಗಲು ಬರುತ್ತದೆ.

ಶಂಕರ :—ಸಮುದ್ರದಲ್ಲಿ ಹಡಗುಗಳು ಮುಳುಗುವುದಿಲ್ಲವೆ ?

ತಂದೆ :—ವಿಮಾನಗಳು ಆಕಾಶದಲ್ಲಿ ಸಂಚರಿಸುವಂತೆ, ಹಡಗುಗಳು ಸಮುದ್ರದಲ್ಲಿ ಯಂತ್ರಗಳ ಸಹಾಯದಿಂದ ಸಂಚರಿಸುತ್ತವೆ.

ಶಂಕರ :—ಹಡಗುಗಳು ಎಲ್ಲಿಂದ ಹೊರಡುತ್ತವೆ ?

ತಂದೆ :—ಹಡಗುಗಳು ಬಂದರಿನಿಂದ ಹೊರಡುತ್ತವೆ. ಹಡಗು ನಿಲ್ಲುವ ಸ್ಥಳಕ್ಕೆ ಬಂದರು ಎನ್ನುತ್ತಾರೆ.

ಶಂಕರ :—ಅಪ್ಪಾ, ನೀನು ಬಂದರನ್ನು ನೋಡಿರುವಿಯಾ ?

ತಂದೆ :—ಮಂಗಳೂರು ಬಂದರನ್ನು ನಾನು ನೋಡಿದ್ದೇನೆ.

ಶಂಕರ :—ಅಪ್ಪಾ, ಬಂದರಿನಲ್ಲಿ ನೀನು ಏನೇನು ನೋಡಿರುವಿ ?

ತಂದೆ :—ಬಂದರಿನಲ್ಲಿ ಹಡಗುಗಳು ನಿಂತಿರುತ್ತವೆ. ನಮ್ಮಲ್ಲಿ ಹೆಚ್ಚಾಗಿ ಬೆಳೆದ ವಸ್ತುಗಳನ್ನು ಬೇರೆ ಸ್ಥಳಗಳಿಗೆ ಕಳಿಸಲು ಹಡಗುಗಳಲ್ಲಿ ಹೇರುತ್ತಾರೆ. ಬೇರೆ ಸ್ಥಳಗಳಿಂದ ಬಂದ ವಸ್ತುಗಳನ್ನು ಹಡಗಿನಿಂದ ಇಳಿಸುತ್ತಾರೆ.



ಶಂಕರ :—ಅಪ್ಪಾ, ಈ ಹಡಗುಗಳನ್ನು ಹೇಗೆ ಕಟ್ಟುತ್ತಾರೆ ?

ತಂದೆ :—ಮರ ಮತ್ತು ಕಬ್ಬಿಣಗಳಿಂದ ಕಟ್ಟುತ್ತಾರೆ.

ಶಂಕರ :—ಹಡಗುಗಳನ್ನು ಎಲ್ಲಿ ಕಟ್ಟುತ್ತಾರೆ ?

ತಂದೆ :—ವಿಶಾಖಪಟ್ಟಣದಲ್ಲಿ ಹಡಗುಗಳನ್ನು ಕಟ್ಟುವ ದೊಡ್ಡ ಕೇಂದ್ರವಿದೆ.

ಶಂಕರ :—ಅಪ್ಪಾ. ಜನರು ಹಡಗುಗಳಲ್ಲಿ ಸಂಚರಿಸುವುದಿಲ್ಲವೆ ?

ತಂದೆ :—ಜನರೂ ಹಡಗುಗಳಲ್ಲಿ ಪ್ರಯಾಣ ಮಾಡುತ್ತಾರೆ.

ಅಷ್ಟರಲ್ಲಿ ಹಳ್ಳದ ನೀರು ಕಡಿಮೆಯಾಯಿತು. ಶಂಕರ ಮತ್ತು ಅವನ ತಂದೆ ಹಳ್ಳವನ್ನು ನಿಧಾನವಾಗಿ ದಾಟಿ ಮನೆಯ ಹಾದಿ ಹಿಡಿದರು.

ಅಭ್ಯಾಸ

(1) ಪ್ರಶ್ನೆಗಳು :—

1. ಮಳೆ ಬಂದ ಕೂಡಲೇ ಶಂಕರ ಮತ್ತು ಅವನ ತಂದೆ ಎಲ್ಲಿ ಕುಳಿತರು ?
2. ಹಳ್ಳದ ನೀರು ಹರಿದು ಎಲ್ಲಿಗೆ ಹೋಗುತ್ತದೆ ?
3. ನದಿಗಳನ್ನು ಹೇಗೆ ದಾಟುತ್ತಾರೆ ?
4. ಹಡಗು ನಿಲ್ಲುವ ಸ್ಥಳಕ್ಕೆ ಏನೆನ್ನುತ್ತಾರೆ ?
5. ಬಂದರಿನ ಉಪಯೋಗವೇನು ?
6. ಹಡಗುಗಳನ್ನು ಕಟ್ಟುವ ದೊಡ್ಡ ಕೇಂದ್ರ ಎಲ್ಲಿದೆ ?

(2) 1. ಹಡಗಿನ ಚಿತ್ರವನ್ನು ತೆಗೆಯಿರಿ.

2. ನಿಮ್ಮ ಊರಿನ ಸಮೀಪವಿರುವ ಸೇತುವೆಯನ್ನು ನೋಡಲು ಹೋಗಿರಿ.

(3) ಬಿಟ್ಟ ಶಬ್ದಗಳನ್ನು ತುಂಬಿರಿ :—

1. ಹಡಗುಗಳನ್ನು ಕಟ್ಟಲು——ಬೇಕು.
2. ನದಿಯನ್ನು——ಸಹಾಯದಿಂದ ದಾಟುತ್ತಾರೆ.
3. ನದಿಯ ನೀರು ಹರಿದು——ಸೇರುತ್ತದೆ.

(4) ಶಬ್ದಗಳ ಅರ್ಥ :—

ನೆರವು—ಸಹಾಯ. ಕೇಂದ್ರ—ಮುಖ್ಯಸ್ಥಳ.

30. ರಾಜನು ಮತ್ತು ಕಟ್ಟಿಗೆ ಮಾರುವವನು

ಹಿಂದೆ ಮಧುರೆಯಲ್ಲಿ ಪಾಂಡ್ಯವಂಶದ ಅರಸರು ಆಳುತ್ತಿದ್ದರು. ಅಲ್ಲಿ ಸುಂದರೇಶ್ವರ ದೇವಾಲಯವಿದೆ. ಸುಂದರೇಶ್ವರನು ಪಾಂಡ್ಯ ದೊರೆಗಳ ಕುಲದೇವರು. ಪಾಂಡ್ಯ ದೊರೆಗಳಲ್ಲಿ ಅರಿಕೇಸರಿ ಮಾರವರ್ಮ ಎಂಬವನು ಬಹು ಪ್ರಖ್ಯಾತನಾದವನು. ಅವನು ಮಹಾದಾನಿಯೂ. ದೈವ ಭಕ್ತನೂ ಎಂದು ಹೆಸರು ಗಳಿಸಿದ್ದನು. ಅವನು ಪ್ರತಿನಿತ್ಯ ಸುಂದರೇಶ್ವರನಿಗೆ ಪೂಜೆ ಮಾಡಿಸಿ ಹತ್ತು ಸಾವಿರ ಮಂದಿಗೆ ಅನ್ನದಾನ ಮಾಡುತ್ತಿದ್ದನು. ಜನರೆಲ್ಲ " ಅರಿಕೇಸರಿ ಮಾರವರ್ಮನಿಗೆ ಸಮಾನರಾದ ದಾನಿಗಳಿಲ್ಲ. ಅವನು ದಾನದಲ್ಲಿ ಕರ್ಣನಿಗಿಂತಲೂ ಮಿಗಿಲು " ಎಂದು ಹೊಗಳುತ್ತಿದ್ದರು.

ಜನರ ಹೊಗಳಿಕೆಯನ್ನು ಕೇಳಿ ರಾಜನು ಉಬ್ಬಿದನು. ಅವನು ತನಗೆ ಸಮಾನರಾದ ದಾನಿಗಳಿಲ್ಲವೆಂದು ಅಹಂಕಾರಪಟ್ಟನು. ಈ ಅಹಂಕಾರ ಸುಂದರೇಶ್ವರನಿಗೆ ಪ್ರಿಯವಾಗಲಿಲ್ಲ. ಅವನು ಒಂದು ದಿನ ರಾಜನಿಗೆ ಕನಸಿನಲ್ಲಿ ಕಾಣಿಸಿಕೊಂಡು " ಎಲೈ ಮೂರ್ಖ ದೊರೆಯೆ. ನೀನು ದೊಡ್ಡ ದಾನಿಯೆಂದು ಗರ್ವಪಟ್ಟುಕೊಳ್ಳಬೇಡ. ನಿನ್ನ ರಾಜ್ಯದಲ್ಲಿಯೇ ನಿನಗಿಂತಲೂ ಮಿಗಿಲಾದ ದಾನಿಯೊಬ್ಬನಿದ್ದಾನೆ " ಎಂದನು.

ರಾಜನು " ಸ್ವಾಮಿ. ಆ ಮಹಾದಾನಿ ಯಾರು ? " ಎಂದು ಕೇಳಿದನು. ಸುಂದರೇಶ್ವರನು " ಅವನೊಬ್ಬ ಕಟ್ಟಿಗೆ ಮಾರುವವನು. ಅವನು ನದೀ ತೀರದಲ್ಲಿ ವಾಸಿಸುತ್ತಿದ್ದಾನೆ. ನೀನು ಅವನನ್ನು ನೋಡಿ ಹೇಗೆ ದಾನ ಮಾಡಬೇಕೆಂಬುದನ್ನು ಕಲಿತುಕೋ. ನೀನು ಒಂದು ವರ್ಷದಲ್ಲಿ ಮಾಡುವ ದಾನ ಅವನು ಒಂದು ದಿನದಲ್ಲಿ ಮಾಡುವ ದಾನಕ್ಕೆ ಸರಿದೂಗಲಾರದು " ಎಂದು ಹೇಳಿದನು.

ಅರಿಕೇಸರಿ ಮಾರವರ್ಮನಿಗೆ ಎಚ್ಚರವಾಯಿತು. ಸುಂದರೇಶ್ವರನು ಹೇಳಿದ ಮಾತು ಅವನ ನೆನಪಿನಲ್ಲಿ ಉಳಿಯಿತು. ಕಟ್ಟಿಗೆ ಮಾರುವವನ

ದಾನವನ್ನು ನೋಡಿ ತಿಳಿದುಕೊಳ್ಳಬೇಕೆಂದು ಅವನಿಗೆ ಆಸೆಯಾಯಿತು. ಅವನು ಮರುದಿನ ಬೆಳಿಗ್ಗೆ ನದೀತೀರಕ್ಕೆ ಹೋದನು. ಕಟ್ಟಿಗೆ ಮಾರುವವನನ್ನು ಹುಡುಕಿದನು. ಕಟ್ಟಿಗೆ ಮಾರುವವನು ಅರಸನಿಗೆ ಸುಲಭವಾಗಿ ದೊರೆತನು. ರಾಜನು "ಕನಸಿನಲ್ಲಿ ಕಾಣಿಸಿಕೊಂಡ ಸುಂದರೇಶ್ವರನು ನನಗಿಂತ ಮಿಗಿಲಾದ ದಾನಿಗಳಿಲ್ಲವೆಂದು ಹೇಳಿದನು. ನೀನು ಅವನನ್ನು ಸಂತೋಷಗೊಳಿಸಲು ಏನು ಮಾಡುತ್ತೀಯ ?" ಎಂದು ಕೇಳಿದನು.

ಕಟ್ಟಿಗೆ ಮಾರುವವನು "ಮಹಾಸ್ವಾಮಿ. ಸುಂದರೇಶ್ವರನನ್ನು ಸಂತೋಷಗೊಳಿಸುವ ಯೋಗ್ಯತೆ ನನಗೆಲ್ಲಿದೆ ? ನಾನು ದಾನಿಯೆಂದು ಹೇಳಿಕೊಂಡರೆ ಜನರು ನನ್ನನ್ನು ಹಾಸ್ಯ ಮಾಡಬಹುದು. ನಾನು ಕಟ್ಟಿಗೆ ಮಾರಿದರೆ ಸಿಗುವುದು ನಾಲ್ಕೇ ಆಣೆ. ಅದರಲ್ಲಿ ಎರಡು ಆಣೆಗಳನ್ನು ಕುಟುಂಬದ ವೆಚ್ಚಕ್ಕೆ ಇಟ್ಟುಕೊಳ್ಳುತ್ತೇನೆ. ಒಂದಾಣೆಯನ್ನು ಬಡಬಗ್ಗರಿಗೆ ದಾನಮಾಡುತ್ತೇನೆ. ಉಳಿದ ಒಂದಾಣೆಯಲ್ಲಿ ಹೂ ಹಣ್ಣುಗಳನ್ನು ಕೊಂಡು ಸುಂದರೇಶ್ವರನ ಪೂಜೆಗೆ ಒಪ್ಪಿಸುತ್ತೇನೆ" ಎಂದು ಹೇಳಿದನು.

ಕಟ್ಟಿಗೆ ಮಾರುವವನ ಮಾತು ಕೇಳಿದಾಗ ಅರಿಕೇಸರಿ ಮಾರವರ್ಮನಿಗೆ ನಾಚಿಕೆಯಾಯಿತು. ಅಹಂಕಾರದಿಂದ ದಾನ ಮಾಡುವುದು ದೇವರಿಗೆ ಪ್ರಿಯವಾದುದಲ್ಲ. ಆಡಂಬರಕ್ಕಿಂತಲೂ ಶ್ರದ್ಧೆ ಮತ್ತು ಭಕ್ತಿಗಳು

ಮುಖ್ಯ ಎಂಬುದನ್ನು ಅವನು ಅರಿತುಕೊಂಡನು. ರಾಜನು ಕಟ್ಟಿಗೆ ಮಾರುವವನಿಗೆ " ಅಯ್ಯಾ. ನೀನು ನನಗಿಂತಲೂ ದೊಡ್ಡವನು. ನೀನು ದಾನ ಮತ್ತು ಭಕ್ತಿಗಳಲ್ಲಿ ನನ್ನನ್ನು ಗೆದ್ದೆ " ಎಂದು ಹೇಳಿದನು.

ಅಭ್ಯಾಸ

(1) ಪ್ರಶ್ನೆಗಳು :—

1. ಪಾಂಡ್ಯ ಅರಸರ ಕುಲದೇವರು ಯಾರು ?
2. ಅರಿಕೇಸರಿ ಮಾರವರ್ಮನು ಏಕೆ ಅಹಂಕಾರಪಟ್ಟನು ?
3. ಕನಸಿನಲ್ಲಿ ಕಾಣಿಸಿಕೊಂಡ ಸುಂದರೇಶ್ವರನು ರಾಜನಿಗೆ ಏನು ಹೇಳಿದನು ?
4. ಕಟ್ಟಿಗೆ ಮಾರುವವನು ಅರಿಕೇಸರಿ ಮಾರವರ್ಮನಿಗೆ ಕೊಟ್ಟ ಉತ್ತರವೇನು ?

(2) ಕೆಳಗಿನ ಮಾತುಗಳನ್ನು ಯಾರು ಹೇಳಿದರು ? ಯಾರಿಗೆ ಹೇಳಿದರು ?

1. ನಿನ್ನ ರಾಜ್ಯದಲ್ಲಿಯೇ ನಿನಗಿಂತ ಮಿಗಿಲಾದ ದಾನಿ ಇದ್ದಾನೆ.
2. ಸುಂದರೇಶ್ವರನನ್ನು ಸಂತೋಷಗೊಳಿಸಲು ನೀನೇನು ಮಾಡುತ್ತೀಯೆ?
3. ನಾನು ದಾನಿಯೆಂದು ಹೇಳಿಕೊಂಡರೆ ಜನರು ನನ್ನನ್ನು ಹಾಸ್ಯ ಮಾಡಬಹುದು.

(3) ಕೆಳಗಿನ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಬರೆಯಿರಿ :—

1. ಅರಿಕೇಸರಿ ಮಾರವರ್ಮನು ಬಹು ಪ್ರಖ್ಯಾತನಾದವನು. ಏಕೆಂದರೆ ಅವನು__________

(ಶೂರನಾಗಿದ್ದನು. ಜ್ಞಾನಿಯಾಗಿದ್ದನು. ದಾನಿಯಾಗಿದ್ದನು.)

2. ಸುಂದರೇಶ್ವರನು ರಾಜನಿಗೆ ಕನಸಿನಲ್ಲಿ ಕಾಣಿಸಿಕೊಂಡನು. ಏಕೆಂದರೆ __________

(ಕಟ್ಟಿಗೆ ಮಾರುವವನ ಬಗ್ಗೆ ಹೇಳಲು. ಪ್ರಜೆಗಳ ಯೋಗಕ್ಷೇಮ ತಿಳಿಸಲು. ರಾಜನ ದಾನವನ್ನು ಹೊಗಳಲು.)

(4) 1. ಕೆಲವು ಮಂದಿ ದೈವಭಕ್ತ ರಾಜರ ಹೆಸರುಗಳನ್ನು ಬರೆಯಿರಿ.
2. ದಾನಶೂರ ಕರ್ಣನ ಕಥೆಯನ್ನು ಓದಿರಿ.

(5) ಶಬ್ದಗಳ ಅರ್ಥ :—

ಪ್ರಖ್ಯಾತ—ಪ್ರಸಿದ್ಧ. ಹೆಸರಾದ. ಆಡಂಬರ—ತೋರಿಕೆಯ. ಶ್ರದ್ಧೆ—ಪ್ರೀತಿ ಮತ್ತು ವಿಶ್ವಾಸಗಳಿಂದ ಕೂಡಿರುವುದು.

31. ಅನಂತನ ದೇಶಪ್ರೇಮ

ಮಕ್ಕಳೆ, 1947 ನೆಯ ಆಗಸ್ಟ 15 ರಂದು ನಮ್ಮ ದೇಶವು ಸ್ವತಂತ್ರವಾಯಿತು ಎಂಬುದನ್ನು ನೀವು ಆಗಲೇ ತಿಳಿದಿರುವಿರಿ. ಸ್ವಾತಂತ್ರ್ಯವನ್ನು ದೊರಕಿಸಲು ಮಹಾತ್ಮಾ ಗಾಂಧೀಜಿ ಮೊದಲಾದ ಮುಖಂಡರು ಬಹಳ ಪರಿಶ್ರಮಪಟ್ಟರು. ಸಾವಿರಾರು ಜನ ನಾಯಕರು ಜೇಲಿಗೆ ಹೋದರು. ಹಿರಿಯರಂತೆ ಚಿಕ್ಕ ಮಕ್ಕಳೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಶಿಕ್ಷೆಯನ್ನು ಅನುಭವಿಸಿದರು.

ಕೃಷ್ಣೆಯ ತಟಾಕದಲ್ಲೊಂದು ಹಳ್ಳಿ. ವೆಂಕಟಾಪುರವೆಂದು ಆ ಹಳ್ಳಿಯ ಹೆಸರು. ಹಳ್ಳಿಯು ಚಿಕ್ಕದಾಗಿದ್ದರೂ ಬಹು ಚೊಕ್ಕಾಗಿತ್ತು. ಆ ಊರಿನ ಜನ ದೇಶಪ್ರೇಮಕ್ಕೆ ಹೆಸರಾಗಿದ್ದರು. ಆ ಊರಿನಲ್ಲೊಂದು ಒಳ್ಳೆಯ ಕನ್ನಡ ಶಾಲೆಯಿತ್ತು. ಸುತ್ತಲಿನ ಹಳ್ಳಿಗೆಲ್ಲ ಆ ಶಾಲೆಯು ಕೇಂದ್ರವಾಗಿತ್ತು.

ಸುಮಾರು ನಾಲ್ವತ್ತೈದು ವರ್ಷಗಳ ಹಿಂದಿನ ಒಂದು ಘಟನೆ. ಬ್ರಿಟೀಷರು ಉಪ್ಪಿನ ಮೇಲೆ ಕರವನ್ನು ಹೇರಿದ್ದರು. ಉಪ್ಪು ಎಲ್ಲರಿಗೂ ಬೇಕಾದ ವಸ್ತುವು. ಅಡುಗೆಗೆ ಉಪ್ಪು ಇರದಿದ್ದರೆ ರುಚಿಯೇ ಬರುವದಿಲ್ಲ. ಅದಕ್ಕಾಗಿ ಕನ್ನಡದಲ್ಲಿ 'ತಾಯಿಗಿಂತ ಬಂಧುವಿಲ್ಲ ; ಉಪ್ಪಿಗಿಂತ ರುಚಿಯಿಲ್ಲ' ಎಂಬ ಗಾದೆಯಿದೆ. ಉಪ್ಪನ್ನು ಮಣ್ಣಿನಿಂದ ಮತ್ತು ಸಮುದ್ರದ ನೀರಿನಿಂದ ಮಾಡುತ್ತಾರೆ. ಎಲ್ಲರಿಗೂ ಅವಶ್ಯವಾಗಿ ಬೇಕಾದ ಉಪ್ಪಿಗೆ ಕರವನ್ನು ಹೇರಿದ್ದರಿಂದ ಬಡ ಜನರಿಗೆ ತೊಂದರೆಯಾಯಿತು. ಆಗ ಗಾಂಧೀಜಿಯವರು 'ಕರವನ್ನು ಕೊಡಬೇಡಿರಿ. ನಿಮಗೆ ಬೇಕಾಗುವ ಉಪ್ಪನ್ನು ನೀವೇ ಸಿದ್ಧಗೊಳಿಸಿರಿ' ಎಂದು ಕರೆಕೊಟ್ಟರು. ಅದನ್ನೇ ಉಪ್ಪಿನ ಸತ್ಯಾಗ್ರಹವೆಂದು ಕರೆಯುವರು.

ದೇಶದ ಜನರೆಲ್ಲ ಅವರ ಕರೆಗೆ ಓಗೊಟ್ಟರು. ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಬ್ರಿಟೀಷರು ಅಂಥವರನ್ನು ಹಿಡಿದು ಜೇಲಿಗೆ ಕಳಿಸಿದರು.

ಈ ಚಳುವಳಿಯಲ್ಲಿ ವೆಂಕಟಾಪುರದ ಜನರು ಹಿಂದೆ ಬೀಳಲಿಲ್ಲ. ಅಲ್ಲಿಯ ಮುಖಂಡರು ಸರತಿಯ ಮೇಲೆ ಸತ್ಯಾಗ್ರಹದಲ್ಲಿ ಭಾಗ ವಹಿಸಿದರು. ದಿನಾಲು ಕೈಯಲ್ಲಿ ಧ್ವಜವನ್ನು ಹಿಡಿದುಕೊಂಡು ಜೈ ಘೋಷವನ್ನು ಮಾಡುತ್ತ ಉಪ್ಪು ಮಾಡಲು ಹೋದರು. ಬ್ರಿಟೀಷರು ಅವರನ್ನು ಹಿಡಿದು ಜೇಲಿಗೆ ಸಾಗಿಸತೊಡಗಿದರು. ಆ ಊರಿನಲ್ಲಿ ಅನಂತ ನೆಂಬ ವಿದ್ಯಾರ್ಥಿ ಇದ್ದನು. ಅವನಿಗೆ ಕೇವಲ ಹನ್ನೊಂದು ವರ್ಷ ವಯಸ್ಸಾಗಿತ್ತು. ಅವನು ತುಂಬ ಜಾಣನೂ, ಬುದ್ಧಿವಂತನೂ, ಧೈರ್ಯ ವಂತನೂ ಆಗಿದ್ದನು. ದಿನಾಲೂ ಆ ಹಳ್ಳಿಯ ಜನರು ಸರತಿಯಂತೆ ಜೇಲಿಗೆ ಹೋಗುವುದನ್ನು ಆತನು ನೋಡಿದ್ದನು. ಒಂದು ದಿನ ಸತ್ಯಾಗ್ರಹದಲ್ಲಿ ಭಾಗವಹಿಸಲು ಯಾರೂ ಇರಲಿಲ್ಲ. ಅನಂತನು ತನ್ನ ವರ್ಗದ ಮೂರು ಜನ ವಿದ್ಯಾರ್ಥಿಗಳನ್ನು ಕರೆದುಕೊಂಡು ಕೈಯಲ್ಲಿ ಧ್ವಜವನ್ನು ಹಿಡಿದುಕೊಂಡು ಜೈಘೋಷ ಮಾಡುತ್ತ ಊರ ಹೊರಗಿನ ಉಪ್ಪುಮಣ್ಣುಳ್ಳ ಹೊಲಕ್ಕೆ ನಡೆದನು. ಅಲ್ಲಿ ಧ್ವಜವನ್ನು ನೆಟ್ಟು



ಹುರುಪಿನಿಂದ ಉಪ್ಪು ಮಾಡತೊಡಗಿದರು. ಆ ಸುದ್ದಿಯನ್ನು ಕೇಳಿ ಪೊಲೀಸರು ಅಲ್ಲಿಗೆ ಧಾವಿಸಿ ಹೋದರು. ಅಲ್ಲಿ ಊರಿದ್ದ ಧ್ವಜವನ್ನು ಕಿತ್ತಿಕೊಂಡು ಮಕ್ಕಳನ್ನು ಗದರಿಸಿದರು. ಮಕ್ಕಳು ಹೆದರಿ ಓಡಿಹೋದರು.

ಆದರೆ ಅನಂತನು ಮಾತ್ರ ಓಡಿಹೋಗದೆ ತನ್ನ ಕೆಲಸದಲ್ಲಿ ತೊಡಗಿದನು. ಪೋಲೀಸರು ಅವನನ್ನು ಹಿಡಿದುಕೊಂಡು ತಾಲೂಕಿನ ಮುಖ್ಯ ಸ್ಥಳಕ್ಕೆ ಕರೆದೊಯ್ದರು. ಅಲ್ಲಿ ಅಧಿಕಾರಿಯು "ನೀನು ಇನ್ನೂ ಚಿಕ್ಕವನು. ತಪ್ಪಾಯ್ತು. ಇನ್ನೊಮ್ಮೆ ಇಂಥ ಕೆಲಸವನ್ನು ಮಾಡುವದಿಲ್ಲ ಎಂದು ಕ್ಷಮೆ ಬೇಡು. ಬಿಟ್ಟುಬಿಡುತ್ತೇವೆ" ಎಂದನು.

ಅನಂತನು ಕ್ಷಮೆಯನ್ನು ಬೇಡಲಿಲ್ಲ. ಅಧಿಕಾರಿಯು ಅವನಿಗೆ ಏಳು ಛಟಕೀ ಶಿಕ್ಷೆಯನ್ನು ಕೊಟ್ಟನು. ಬೆನ್ನ ಮೇಲೆ ಬಾರುಗಳು ಮೂಡಿದವು. ರಕ್ತವೂ ಬಂದಿತು. ಆದರೆ ಅನಂತನು ಬಗ್ಗಲಿಲ್ಲ. ಪೋಲೀಸರು ಆತನನ್ನು ಮರಳಿ ಊರಿಗೆ ತಂದು ಬಿಟ್ಟರು. 'ಬೋಲೋ ಭಾರತ ಮಾತಾ ಕೀ ಜೈ' ಎನ್ನುತ್ತ ಅನಂತನು ತನ್ನ ಮನೆಯತ್ತ ಓಡಿದನು. ಅವನ ಧೈರ್ಯ ಮತ್ತು ದೇಶಪ್ರೇಮಗಳನ್ನು ಕಂಡು ಊರವರು ಬೆರಳು ಕಚ್ಚಿದರು.

ಅಭ್ಯಾಸ

(1) ಪ್ರಶ್ನೆಗಳು :—

1. ಸ್ವಾತಂತ್ರ್ಯ ಚಳುವಳಿಯಲ್ಲಿ ಯಾರು ಯಾರು ಭಾಗ ವಹಿಸಿದರು ?
2. ಗಾಂಧೀಜಿಯವರು ಜನತೆಗೆ ಯಾವ ಕರೆಯನ್ನು ಕೊಟ್ಟರು ?
3. ವೆಂಕಟಾಪುರದ ಜನರು ಏನು ಮಾಡಿದರು?
4. ಅನಂತನು ತನ್ನ ದೇಶಪ್ರೇಮವನ್ನು ಹೇಗೆ ತೋರಿಸಿದನು?
5. ಉಪ್ಪನ್ನು ಕುರಿತು ಯಾವ ಗಾದೆಯ ಮಾತಿದೆ ?

(2) ಕೆಳಗಿನ ಪದಗಳನ್ನು ಉಪಯೋಗಿಸಿ ವಾಕ್ಯ ರಚಿಸಿರಿ :—

ಮುಖಂಡರು. ಘಟನೆ. ಓಗೊಡು. ಸರತಿಯಂತೆ. ಬೆರಳು ಕಚ್ಚು.

(3) 1. ಉಪ್ಪು ಮಾಡುವ ರೀತಿಯನ್ನು ತಿಳಿಯಿರಿ.
2. ದೇಶಭಕ್ತಿಯ ಗೀತವೊಂದನ್ನು ಕಂಠಪಾಠ ಮಾಡಿರಿ.
3. ಕೆಲವು ಗಾದೆಯ ಮಾತುಗಳನ್ನು ಸಂಗ್ರಹಿಸಿರಿ.

(4) ಶಬ್ದಗಳ ಅರ್ಥ :—

ಮುಖಂಡರು—ದೊಡ್ಡವರು, ನಾಯಕರು. ಪರಿಶ್ರಮಮಾಡು—ಕಷ್ಟಪಡು. ಘಟನೆ—ನಡೆದುಹೋದ ಒಂದು ಸಂಗತಿ. ಛಟಕೀ ಶಿಕ್ಷೆ—ಬಾರ ಕೋಲಿನಿಂದ ಹೊಡೆಯುವ ಶಿಕ್ಷೆ. ಬೆರಳು ಕಚ್ಚು—ಆಶ್ಚರ್ಯವನ್ನು ತೋರಿಸು.

32. ಗೋವಿನ ಹಾಡು



(1)

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ನಾಟ ದೇಶದೊ
ಳಿರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು

ಎಳೆಯ ಮಾವಿನ ಮರದ ಕೆಳಗೆ
ಕೊಳಲನೂದುತ ಗೊಲ್ಲ ಗೌಡನು
ಬಳಸಿ ನಿಂದ ತುರುಗಳನ್ನು
ಬಳಿಗೆ ಕರೆದನು ಹರುಷದಿ

ಗಂಗೆ ಬಾರೇ ಗೌರಿ ಬಾರೇ
ತುಂಗಭದ್ರೆ, ತಾಯಿ ಬಾರೇ
ಕಾಮಧೇನು ನೀನು ಬಾರೆಂದು
ಪ್ರೇಮದಲಿ ಗೊಲ್ಲ ಕರೆದನು

ಗೊಲ್ಲ ಕರೆದ ಧ್ವನಿಯು ಕೇಳಿ
ಎಲ್ಲ ಹಸುಗಳು ಬಂದು ನಿಂತು
ಚೆಲ್ಲಿ ಸೂಸಿ ಹಾಲು ಕರೆಯಲು
ಅಲ್ಲಿ ತುಂಬಿತು ಬಿಂದಿಗೆ

(2)

ಪುಣ್ಯಕೋಟಿ ಎಂಬ ಗೋವು
ತನ್ನ ಕಂದನ ನೆನೆದುಕೊಂಡು
ಮುನ್ನ ಹಾಲನು ಕೊಡುವೆನೆನುತ
ಚೆನ್ನಾಗಿ ತಾ ಬರುತಿರೆ

ಮೇಲೆ ಬಿದ್ದು ನಿನ್ನನೀಗಲೆ
ಬೀಳ ಹೊಯ್ವೆನು ನಿನ್ನ ಹೊಟ್ಟೆಯ
ಸೀಳಿಬಿಡುವೆನು ಎನುತ ಕೋಪದಿ
ಖೂಳ ವ್ಯಾಘ್ರನು ಕೂಗಲು



ಒಂದು ಬಿನ್ನಹ ಹುಲಿಯೆ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ಸೇರುವೆನಿಲ್ಲಿಗೆ

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶವ ಮಾಡದೆ ಬಿಡಲು ನೀನು
ನುಸುಳಿ ಹೋಗುವೆ ಮತ್ತೆ ಬರುವೆಯ
ಹುಸಿಯನಾಡುವೆಯೆಂದಿತು

ಸತ್ಯವೇ ನಮ್ಮ ತಾಯಿತಂದೆ
ಸತ್ಯವೇ ನಮ್ಮ ಬಂಧುಬಳಗ
ಸತ್ಯವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು



(3)

ಕೊಂದು ತಿನ್ನುವೆನೆಂಬ ಹುಲಿಗೆ
ಚೆಂದದಿಂದ ಭಾಷೆಯಿತ್ತು
ಕಂದ ನಿನ್ನನು ನೋಡಿ ಹೋಗುವೆ
ನೆಂದು ಬಂದೆನು ದೊಡ್ಡಿಗೆ

ಅಮ್ಮ ನೀನು ಸಾಯಲೇಕೆ
ನಮ್ಮ ತಬ್ಬಲಿ ಮಾಡಲೇಕೆ
ಸುಮ್ಮನಿಲ್ಲಿಯೆ ನಿಲ್ಲೆನುತ್ತ
ಅಮ್ಮನಿಗೆ ಕರು ಹೇಳಲು

ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಪೆನಲ್ಲಿಗೆ
ಕಟ್ಟಕಡೆಗಿದು ಖಂಡಿತ

ಆರ ಮೊಲೆಯನು ಕುಡಿಯಲಮ್ಮ
ಆರ ಸೇರಿ ಬದುಕಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರು ನನಗೆ ಹಿತವರು

ಅಮ್ಮಗಳಿರ ಅಕ್ಕಗಳಿರ
ನಮ್ಮ ತಾಯೊಡಹುಟ್ಟುಗಳಿರ
ನಿಮ್ಮ ಕಂದನೆಂದು ಕಾಣಿರಿ
ತಬ್ಬಲಿಯನೀ ಕರುವನು

ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು

ತಬ್ಬಲಿ ನೀನಾದೆ ಮಗನೆ
ಹೆಬ್ಬುಲಿಯ ಬಾಯನ್ನು ಹೊಗುವೆನು
ಇಬ್ಬರಾ ಋಣ ತೀರಿತೆಂದು
ತಬ್ಬಿಕೊಂಡಿತು ಕಂದನ

(4)

ಗೋವು ಕರುವನು ಬಿಟ್ಟು ಬಂದು
ಸಾವಕಾಶವ ಮಾಡದಂತೆ
ಗವಿಯ ಬಾಗಿಲ ಸೇರಿ ನಿಂತು
ತವಕದಲಿ ಹುಲಿಗೆಂದಿತು :

ಖಂಡವಿದೆ ಕೋ ಮಾಂಸವಿದೆ ಕೋ
ಗುಂಡಿಗೆಯ ಬಿಸಿರಕ್ತವಿದೆ ಕೋ
ಚಂಡ ವ್ಯಾಘ್ರನೆ ನೀನಿದೆಲ್ಲವ
ನುಂಡು ಸಂತಸದಿಂದಿರು



ಪುಣ್ಯಕೋಟಿಯು ಮಾತ ಕೇಳಿ
ಕಣ್ಣ ನೀರನು ಸುರಿಸಿ ನೊಂದು
ಕನ್ನೆಯಿವಳನು ಕೊಂದು ತಿಂದರೆ
ಮೆಚ್ಚನಾ ಪರಮಾತ್ಮನು

ಎನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ನಾನೇನ ಪಡೆವೆನು
ಎನ್ನುತಾ ಹುಲಿ ಹಾರಿ ನೆಗೆದು
ತನ್ನ ಪ್ರಾಣವ ಬಿಟ್ಟಿತು

ಅಭ್ಯಾಸ

(1) ಪ್ರಶ್ನೆಗಳು :—

1. ಕಾಳಿಂಗನು ಹಸುಗಳನ್ನು ಹೇಗೆ ಕರೆದನು ?
2. ಪುಣ್ಯಕೋಟಿಯು ಏನನ್ನು ನೆನೆದುಕೊಂಡು ಮನೆಗೆ ಬರುತ್ತಿತ್ತು ?
3. ಪುಣ್ಯಕೋಟಿಯನ್ನು ಅಡ್ಡಗಟ್ಟಿ ಹುಲಿಯು ಏನೆಂದು ಕೂಗಿತು ?
4. ಹುಲಿಯು ಆ ರೀತಿ ಕೂಗಿದಾಗ ಪುಣ್ಯಕೋಟಿ ಏನೆಂದು ಉತ್ತರ ಕೊಟ್ಟಿತು ?
5. 'ಕಂದನಿಗೆ ಹಾಲು ಕೊಟ್ಟು ಹಿಂತಿರುಗಿ ಬರುವುದಿಲ್ಲ' ಎಂದು ಹುಲಿ ಹೇಳಿದಾಗ, ಪುಣ್ಯಕೋಟಿ ಏನೆಂದು ಉತ್ತರ ಕೊಟ್ಟಿತು ?
6. ಕರುವು 'ನಮ್ಮನ್ನು ತಬ್ಬಲಿ ಮಾಡಿ ಹೋಗಬೇಡ' ಎಂದು ಹೇಳಿದಾಗ ಪುಣ್ಯಕೋಟಿ ಕೊಟ್ಟ ಉತ್ತರವೇನು ?
7. ಹುಲಿಯು ಪ್ರಾಣ ಬಿಡಲು ಕಾರಣವೇನು ?

(2) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು ?

1. ಕಂದನಿರುವನು ದೊಡ್ಡಿಯೊಳಗೆ
2. ತಬ್ಬಲಿ ನೀನಾದೆ ಮಗನೆ
3. ಕಂದ ನಿಮ್ಮವನೆಂದು ಕಾಣಿರಿ
4. ಎನ್ನ ಒಡಹುಟ್ಟಕ್ಕ ನೀನು
5. ಆರ ಮೊಲೆಯನು ಕುಡಿಯಲಮ್ಮ

(3) 1. ಈ ಪದ್ಯವನ್ನು ಕಂಠಪಾಠ ಮಾಡಿರಿ.
2. ಈ ಕಥೆಯನ್ನು ನಿಮ್ಮ ಶಾಲೆಯಲ್ಲಿ ಅಭಿನಯಿಸಿರಿ.

(4) ಶಬ್ದಗಳ ಅರ್ಥ :—

ತುರು—ಹಸು
ತಬ್ಬಲಿ—ತಂದೆ ತಾಯಿ ಇಲ್ಲದ
ಹುಸಿ—ಸುಳ್ಳು
ವ್ಯಾಘ್ರ—ಹುಲಿ
ಗುಂಡಿಗೆ—ಹೃದಯ
ಬಿನ್ನಹ—ವಿನಂತಿ, ಅರಿಕೆ

ವಚನಗಳು

ವಿದ್ಯೆ ಕಲಿಸದ ತಂದೆ ಬುದ್ಧಿ ಕೊಡದಾ ಗುರುವು
ಬಿದ್ದಿರಲು ಬಂದು ನೋಡದಾ ತಾಯಿಯು
ಶುದ್ಧ ವೈರಿಗಳು ಸರ್ವಜ್ಞ.

ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದೊಡೆ ಕೈಲಾಸ
ಬಿನ್ನಾಣವಕ್ಕು ಸರ್ವಜ್ಞ.

—ಸರ್ವಜ್ಞ

ದಯವಿಲ್ಲದ ಧರ್ಮವದಾವುದಯ್ಯ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ.

ದೇವಲೋಕ ಮರ್ತ್ಯಲೋಕವೆಂಬುವು ಬೇರಿಲ್ಲ ಕಾಣಿಭೋ
ಸತ್ಯ ನುಡಿವುದೇ ದೇವಲೋಕ. ಮಿಥ್ಯವ
ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ
ಅನಾಚಾರವೇ ನರಕ. ಇದಕ್ಕೆ ನೀವೇ ಪ್ರಮಾಣ.
ಕೂಡಲ ಸಂಗಮದೇವಾ.

—ಬಸವಣ್ಣ

ಅಡವಿಯೊಳಾಡುವ ಮೃಗಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಪಡೆದ ಜನನಿಯು ತೆರದ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನಿದಕೆ ಸಂದೇಹ ಬೇಡಾ

ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ
ಅಲ್ಲಲ್ಲಿಗಾಹಾರವಿತ್ತವರು ಯಾರೊ
ಬಲ್ಲಿದನು ಕಾಗಿನೆಲೆಯಾದಿಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ.

—ಕನಕದಾಸ

ಅಭ್ಯಾಸ

(1) ಪ್ರಶ್ನೆಗಳು :—

1. ಶುದ್ಧ ವೈರಿಗಳು ಯಾರು ?
2. ಕೈಲಾಸ ಹೇಗೆ ದೊರೆಯುತ್ತದೆ ?
3. ಧರ್ಮದ ಮೂಲ ಯಾವುದು ?
4. ದೇವಲೋಕ ಯಾವುದು ?
5. ನರಕ ಯಾವುದು ?
6. ಎಲ್ಲರನ್ನೂ ಸಲಹುವವನು ಯಾರು ?

(2) ಈ ವಚನಗಳನ್ನು ಬಾಯಿಪಾಠ ಮಾಡಿರಿ.

(3) ಶಬ್ದಗಳ ಅರ್ಥ :—

ನನ್ನಿ—ಸತ್ಯ. ಬಗೆ—ತಿಳಿ. ಮಿಥ್ಯ—ಸುಳ್ಳು. ಅಡವಿ—ಕಾಡು.

SRI RAMA VIDYALAYA
Nursery Primary English & Kannada Medium School
No 103/2, ... Floor S...
JAKKUR, Bangalore-560064.

ಮೂಲಭೂತ ಕರ್ತವ್ಯಗಳು

ಮೂಲಭೂತ ಕರ್ತವ್ಯಗಳು :—ಪ್ರತಿಯೊಬ್ಬ ನಾಗರೀಕನಿಗೂ—

(ಕ) ಸಂವಿಧಾನವನ್ನು ಅನುವರ್ತಿಸುವುದು ಹಾಗೂ ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಯನ್ನೂ ಗೌರವಿಸುವುದು ;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು ;

(ಗ) ಭಾರತದ ಸಾರ್ವಭೌಮತ್ವವನ್ನು, ಐಕ್ಯತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು ;

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು ;

(ಙ) ಧಾರ್ಮಿಕ, ಭಾಷಾ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ, ಭಾರತದ ಎಲ್ಲಾ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟು ಮಾಡುವ ಆಚರಣೆಗಳನ್ನು ಬಿಟ್ಟು ಬಿಡುವುದು ;

(ಚ) ನಮ್ಮ ಸಂಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು ;

(ಛ) ಅರಣ್ಯಗಳು, ಸರೋವರಗಳು ನದಿಗಳು ಮತ್ತು ವನ್ಯಜೀವಿಗಳೂ ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಮೇಲ್ಪಟ್ಟು ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು ;

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸುವುದು ;

(ಝ) ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ;

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಉನ್ನತ ಮಟ್ಟಗಳಿಗೆ ಏರುವುದಕ್ಕಾಗಿ ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಶ್ರೇಷ್ಠತೆಗಾಗಿ ಶ್ರಮಿಸುವುದು :—

—(ಕರ್ತವ್ಯವಾಗಿರತಕ್ಕದ್ದು).

SRI RAMA VIDYALAYA
Nursery Primary English ... Medium School.
S. No. 103/2, Behind Jakkur Flying School,
JAKKUR, Bangalore-560064.

ಬೆಲೆ : ರೂ. 3.80